ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಏಪ್ರಿಲ್ 2021 ....ಬೆಲೆ ರೂ. 5/-



## ಒಂಟಿಮಿಟ್ಟ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

## 2021 ಏಪ್ರಿಲ್ 21 ರಿಂದ 29 ರವರೆಗೆ

ತಿರುಮಲೆ ತಿರುಪತಿ ದೇವಸ್ಥಾನಗಳು

## ಒಂಟಿಮಿಟ್ಟ
# ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
## 21-04-2021 ರಿಂದ 29-04-2021 ರ ವರೆಗೆ



**21-04-2021 ಬುಧವಾರ**
ಹಗಲು : ಧ್ವಜಾರೋಹಣ
ರಾತ್ರಿ : ಶೇಷವಾಹನ

**22-04-2021 ಗುರುವಾರ**
ಹಗಲು : ವೇಣುಗಾನಾಲಂಕಾರ
ರಾತ್ರಿ : ಹಂಸವಾಹನ

**23-04-2021 ಶುಕ್ರವಾರ**
ಹಗಲು : ವಟಪತ್ರಶಾಯಿ ಅಲಂಕಾರ
ರಾತ್ರಿ :ಸಿಂಹವಾಹನ

**24-04-2021 ಶನಿವಾರ**
ಹಗಲು : ನವನೀತಕೃಷ್ಣಾಲಂಕಾರ
ರಾತ್ರಿ :ಹನುಮತ್ಸೇವೆ


**25-04-2021 ಭಾನುವಾರ**
ಹಗಲು : ಮೋಹಿನಿಸೇವೆ
ರಾತ್ರಿ : ಗರುಡಸೇವೆ

**26-04-2021 ಸೋಮವಾರ**
ಹಗಲು : ಶಿವಧನುರ್ಬಾಣಾಲಂಕಾರ
ರಾತ್ರಿ : ಎದುರ್ಕೋಲು, ಕಲ್ಯಾಣೋತ್ಸವ, ಗಜವಾಹನ

**27-04-2021 ಮಂಗಳವಾರ**
ಹಗಲು : ರಥೋತ್ಸವ

**28-04-2021 ಬುಧವಾರ**
ಹಗಲು : ಕಾಳೀಯಮರ್ಧನಾಲಂಕಾರ
ರಾತ್ರಿ : ಅಶ್ವವಾಹನ

**29-04-2021 ಗುರುವಾರ**
ಹಗಲು : ಚಕ್ರಸ್ನಾನ
ರಾತ್ರಿ : ಧ್ವಜಾವರೋಹಣ



ಯೋತ್ಸ್ಯಮಾನಾನವೇಕ್ಷೇಽಹಂಯ ಏತೇತ್ರ ಸಮಾಗತಾಃ।
ಧಾರ್ತರಾಷ್ಟ್ರಸ್ಯ ದುರ್ಬುದ್ಧೇಃ ಯುದ್ಧೇ ಪ್ರಿಯಚಿಕೀರ್ಷವಃ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 23)

ದುರ್ಬುದ್ಧಿಯ ದುರ್ಯೋಧನನಿಗೆ ಈ ಯುದ್ಧದಲ್ಲಿ ನೆರವಾಗ ಬೇಕೆಂದು ಕಾದುವುದಕ್ಕಾಗಿ ಯಾರು ಯಾರು ಇಲ್ಲಿಗೆ ಬಂದಿರುತ್ತಾರೆಂಬುದನ್ನು ನಾನೊಮ್ಮೆ ನೋಡುತ್ತೇನೆ.

ವೆಂಕಟೇಶ ದಯ ಮಾಡೋ ವೇದ ವೇದ್ಯನೆ
ಪಂಕಜಾಕ್ಷ ಅಭಯವಿತ್ತು ರಕ್ಷಿಸೆನ್ನ ಬೇಗನೆ
ಚಿತ್ತ ಚಂಚಲವ ಬಿಡಿಸೊ ಮತ್ತೆ ಕ್ರೋಧವ ಓಡಿಸೊ
ಭ್ರಾಂತಿ ವಿಷಯಂಗಳು ಬೇಡ ಕಂತುಪಿತ ನಾರಾಯಣ
ಸೃಷ್ಟಿ ಮೂರರ ಒಳಗೆ ನೀನೆ ಕಷ್ಟ ಪಡಿಸುವರೇನೋ
ನಷ್ಟ ತನ್ನ ನೋಡಬೇಡೋ ದೃಷ್ಟಿಸಿ ನೋಡೊ ದಯಾಳೊ
ಭಾಳ ಅಪರಾಧಿ ನಾನು ನಿನ್ನ ಬಳಿಗೆ ಬಂದೆ ನಾನು
ಒಲಿದು ಎನ್ನ ರಕ್ಷಿಸಯ್ಯ ಮೇಲುಗಿರಿ ಪುರಂದರವಿಠಲ

- ಶ್ರೀ ಪುರಂದರದಾಸರು.



(ಆರನೆಯ ದಶಕ)

# ದಯಾ ಶತಕಮ್




- ಎನ್. ನರಸಿಂಹಾಚಾರ್ಯ

ನಿಗಮಸಮಾಶ್ರಿತಾ ನಿಖಿಲಲೋಕಸಮೃದ್ಧಿ ಕರೀ ಭಜದಘಕೂಲಮುದ್ರು ಜಗತಿಃ ಪರಿತಪ್ತಹಿತಾ।

ಪ್ರಕಟಿತಹಂಸಮತ್ಸ್ಯ ಕಮಠಾದ್ಯವತಾರಶತಾ ವಿಬುಧಸರಿಚ್ಚ - ಯಂ ವೃಷಗಿರೀಶದಯೇ ವಹಸಿ ॥೫೫॥

ಈ ಪದ್ಯದಲ್ಲಿಯೂ ಗಂಗಾನದಿಯ ಸಾದೃಶ್ಯವನ್ನೇ ವರ್ಣಿಸುತ್ತಾರೆ. ಗಂಗೆಯ ಪ್ರಭಾವವು ವೇದಗಳಲ್ಲಿ ವಿಶೇಷವಾಗಿ ಪ್ರತಿಪಾದಿಸಲ್ಪಟ್ಟಿರುವುದು. ಸ್ವರ್ಗ, ಭೂಲೋಕ, ಪಾತಾಳಗಳೇ ಮೊದಲಾದ ಸರ್ವಲೋಕಗಳಲ್ಲಿಯೂ ತನ್ನ ಪ್ರವಾಹದಿಂದ ಅತ್ಯಂತ ಸಮೃದ್ಧಿಯನ್ನುಂಟು ಮಾಡುವುದು. ಅದರಲ್ಲಿ ಸ್ನಾನಾದಿಗಳನ್ನು ಮಾಡುವ ವರ ಪಾಪಗಳನ್ನು ನಾಶಮಾಡುವಂತಹ ಸ್ವಭಾವವುಳ್ಳದ್ದು. ಅತ್ಯಂತ ತಾಪ ಹೊಂದಿದವನಿಗೆ ತನ್ನ ಶೈತ್ಯ ಮಾಧುರ್ಯಾದಿ ಗುಣಗಳಿಂದ ಪರಮಹಿತವಾಗಿರುವಂತಹುದು. ಹಂಸ, ಮೀನೂ, ಆಮೆಯೇ ಮೊದಲಾದ ಸಾವಿರಾರು ಜಲಜಂತುಗಳನ್ನು ಪ್ರಕಟಗೊಳಿಸುವಂತಹ ನೂರಾರು ಸ್ನಾನಘಟ್ಟಗಳನ್ನು ಳ್ಳದ್ದು ಇದೇ ಗುಣಗಳನ್ನೊಳಗೊಂಡಿರುವುದರಿಂದ ದಯಾದೇವಿಯು ಕೂಡ ಗಂಗೆಯಂತೆಯೇ ಇರುವಂತೆ ದಯಾದೇವಿಯೂ ಕೂಡ ವೇದಗಳಲ್ಲಿ ವಿಶೇಷವಾಗಿ ಪ್ರತಿಪಾದಿಸಲ್ಪಟ್ಟಿರುವಳು; ಭಗವಂತನ ದಯೆಯು ಯಾವ ವೇದದಲ್ಲಿ ಹೇಗೆ ಪ್ರತಿಪಾದಿಸಲ್ಪಟ್ಟಿದೆ ಎಂದರೆ - ಮುಖ್ಯವಾಗಿ ಅದನ್ನು ಪ್ರಕಾಶಪಡಿಸುವುದಕ್ಕಾಗಿಯೇ ಈ ದಯಾಶತಕವು ಅವತಾರಗೊಂಡಿದೆ ಎಂಬುದೂ ಅತ್ಯಂತ ಸಮಂಜಸವಾದುದು.

ಭಗವಂತನು ಮಾಡುವ ಜಗತ್ಸೃಷ್ಟಿ, ರಕ್ಷಣ, ಸಂಹಾರವೇ ಮೊದಲಾದವು ವೇದಗಳಲ್ಲಿಯೂ ಅವನ ಅನೇಕ ವಿಧವಾದ ಅವತಾರಗಳು ಪಾಂಚರಾತ್ರಾಗಮದಲ್ಲಿಯೂ ಪ್ರತಿಪಾದಿಸಲ್ಪಟ್ಟಿವೆ. ಸೃಷ್ಟಿಯೇ ಮೊದಲಾದ ಈ ಎಲ್ಲ ವ್ಯಾಪಾರಗಳೂ, ಪರವ್ಯೂಹಾದಿ ಸಕಲ ಅವತಾರಗಳೂ, ಭಗವಂತನ ದಿವ್ಯಮಂಗಳ ವಿಗ್ರಹವೂ ದಯಾದೇವಿಯ ಕಾರ್ಯಗಳೇ ಎಂಬುದನ್ನು ಈ ಸ್ತೋತ್ರದಲ್ಲಿ ಅಲ್ಲಲ್ಲಿಯೇ ಅತ್ಯಂತ ರಮಣೀಯವಾಗಿ ನಿರೂಪಿಸಿರುವುದರಿಂದ ದಯೆಯ ವಿಚಿತ್ರವಾದ ಕಾರ್ಯಗಳನ್ನು ಹೇಳುವಂತಹ ವೇದವೇ ಮೊದಲಾದ ಶಾಸ್ತ್ರಗಳು ದಯೆಯನ್ನೇ ಹೇಳಿದಂತಾಗಲಿಲ್ಲವೆ! ಹೀಗೆಯೇ ಭಗವಂತನಲ್ಲಿರುವ ಸಮಸ್ತ ಕಲ್ಯಾಣ ಗುಣಗಳೂ ದಯಾದೇವಿಯ ಅನುಚರವಾದವೆಂಬುದೂ ಈ ಸ್ತೋತ್ರದಲ್ಲಿ ಪ್ರತಿಪಾದಿಲಸಲ್ಪಟ್ಟಿದೆ. ಆದ್ದರಿಂದ ಭಗವಂತನ ಗುಣಗಳನ್ನು ವರ್ಣಿಸುವ ವೇದಭಾಗಗಳೂ ಕೂಡ ಬೇರೆ ರೀತಿಯಿಂದ ದಯೆಯನ್ನೇ ವರ್ಣಿಸಿದಂತಾಯಿತು. ಮೇಲಾಗಿ, ದಯಾದೇವಿಯ ಸರ್ವ ಲೋಕಗಳಿಗೂ ಸಕಲವಿಧವಾದ ಸಮೃದ್ಧಿಯನ್ನೂ ಉಂಟು ಮಾಡುವಂತವಳು ತನ್ನಲ್ಲಿ ಶರಣಾಗತರಾದವ್ರರ ಪುಣ್ಯ ಪಾಪಗಳ ಸಮಸ್ತ ಫಲಗಳನ್ನೂ ಸಂಪೂರ್ಣವಾಗಿ ನಾಶ ಮಾಡುವಂಥವಳು ಈ ಸಂಸಾರದಿಂದ ಅತ್ಯಂತ ತಪ್ತನಾದವನಿಗೆ ಪರಮಹಿತವನ್ನುಂಟು ಮಾಡುವವಳು; ಹಂಸ, ಮತ್ಸ್ಯವೇ ಮೊದಲಾದ ಜ್ಞಾನ ಪ್ರದವಾದ ಭಗವಂತನ ಅನೇಕ ಅವತಾರಗಳನ್ನು ಉಂಟು ಮಾಡುವಂಥವಳು ; ಏಕೆಂದರೆ ಭಗವಂತನ ಅವತಾರಗಳೆಲ್ಲವೂ ಆತನ ದಯಾಕಾರ್ಯಗಳಷ್ಟೇ! ಆದುದರಿಂದ ಗಂಗೆಯ ಸಮಸ್ತ ಗುಣಗಳೂ ದಯೆಗೂ ಇರುವುದರಿಂದ ಗಂಗೆಯ ಸಾದೃಶ್ಯವನ್ನು ಹೇಳಲು ಅಡ್ಡಿಯಿಲ್ಲ. ಇಲ್ಲಿ ಹೇಳಿರುವ ಸಮಸ್ತ ಗುಣಗಳು ಪ್ರಸನ್ನನಾದವನಿಂದ ಅವಶ್ಯವಾಗಿಯೂ ತಿಳಿಯಬಹುದಾದಂಥವು.



ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಪ್ಲವನಾಮ ಸಂವತ್ಸರ
ಫಾಲ್ಗುಣ - ಚೈತ್ರ ಮಾಸ ಸಂಚಿಕೆ

ಸಂಪುಟ - 51 | ಏಪ್ರಿಲ್ 2021 | ಸಂಚಿಕೆ - 11


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಚಿತ್ರಾ ಪೂರ್ಣಿಮೆ ಕರಗದ ಆಚರಣೆ | -ಶ್ರೀಮತಿ. ಸುಮಾಚಂದ್ರಶೇಖರ್ | 7 |
| ಸರ್ವಜನ ಪ್ರಿಯ ರಾಮ | -ಡಾ॥ ಗುರುರಾಜ ಪೋಶೆಟ್ಟಿ ಹಳ್ಳಿ | 9 |
| ಚಾಂದ್ರಮಾನ ಯುಗಾದಿ | - ಶ್ರೀಮತಿ. ಕೆ.ವಿ. ಪದ್ಮಾವತಿ | 11 |
| ಭದ್ರಾಚಲ ರಾಮದಾಸರು | - ಶ್ರೀಮತಿ ಗಿರಿಜಾ ಎಸ್.ದೇಶಪಾಂಡೆ | 14 |
| ಸೌರಯುಗಾದಿ ಆಚರಣೆಯ ವೈಶಿಷ್ಟ್ಯ | -ಡಾ॥ ಎಚ್.ಸತ್ಯನಾರಾಯಣಾಚಾರ್ | 16 |
| ಪುಸ್ತಕಾವಲೋಕನ | -ಪ್ರಣವ | 20 |
| ಸೆಟ್ಟಕೆರೆಯ ಯೋಗಮಾಧವ ದೇವಾಲಯ ಮತ್ತು ಪಳಿಯಾರಿನ ರಂಗನಾಥ ದೇವಾಲಯ | - ಕೆಂಗೇರಿ ಚಕ್ರಪಾಣಿ | 21 |
| ಸನಾತನ ವೈದ್ಯಕೀಯದಲ್ಲಿ ಮುಪ್ಪೆ | - | 23 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | -ದಿ॥ ಬಿ.ಎನ್. ಶ್ರೀನಿವಾಸನ್ | 24 |
| ಪುರಂದರದಾಸರ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆ | - ಡಾ॥ ಪ್ರಾಣೇಶ ರಾ ಅರ್ಚಕ | 31 |
| ಸಂಸ್ಕೃತ ಕಲಿಯೋಣ...!! | - ಡಾ॥ ಸಮುದ್ರಾಲ ಲಕ್ಷ್ಮಣಯ್ಯ | 34 |
| ಆಧ್ಯಾತ್ಮ ರಾಮಾಯಣ | - ಡಾ ॥ ರಾಮಚಂದ್ರ ದಾಸ್ ಸಿ.ಜೆ. | 35 |
| ಶ್ರೀರಾಮಾನುಜರ ಶ್ರೀಭಾಷ್ಯ | - ಡಾ ॥ ಸಿ. ಎಸ್. ಊರ್ಮಿಳಾ | 39 |
| ವೇದಗಳಲ್ಲಿ ವಿಜ್ಞಾನ | - ಡಾ ॥ ಟಿ.ವಿ. ಸತ್ಯನಾರಾಯಣ | 43 |
| ಶ್ರೀಮದ್ಭಗವದ್ಗೀತೆ | - ಶ್ರೀಮತಿ ಬಿ. ಪದ್ಮಜ | 46 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 47 |
| ತಿರುಮಲೆ - ಕಾಲಮಾನಾಚರಣೆಗಳು | - ಶ್ರೀಮತಿ | 49 |
| ನೀತಿಕಥೆ-ಕೋಪವೆಂಬುದು ಅನರ್ಥ ಸಾಧನ | -ಶ್ರೀಮತಿ ಸುಮನ ಬದ್ರಿನಾಥ್ | 51 |
| ಚಿತ್ರ ಕಥೆ - ಎಲ್ಲರಿಗೂ ಮೋಕ್ಷವೇ | -ಡಾ॥ ಕೆ. ರವಿಚಂದ್ರನ್ | 52 |
| ಕ್ವಿಜ್ | | 54 |


ಮುಖಚಿತ್ರ - ಶ್ರೀ ಸೀತಾಸಮೇತ ಶ್ರೀಕೋದಂಡರಾಮಸ್ವಾಮಿಯವರು, ಒಂಟಿಮಿಟ್ಟ
ಹಿಂಬದಿಚಿತ್ರ - ಶ್ರೀ ಸೀತಾ ಲಕ್ಷ್ಮಣ ಸಮೇತ ಶ್ರೀಕೋದಂಡರಾಮಸ್ವಾಮಿಯವರು, ತಿರುಪತಿ


**ಗೌರವ ಸಂಪಾದಕರು**
ಡಾ ॥ ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.



| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |



ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

# ಯುಗಾದಿ - ಫಾಲ್ಗುಣ ಮಾಸದ ವೈಶಿಷ್ಟ್ಯತೆ

"ಯುಗಾದಿ" ಪ್ರತ್ಯೇಕವಾಗಿ ನಡೆಸುವ ಇತರ ವ್ರತಗಳು, ಹಬ್ಬಗಳ ಹಾಗೆ ಯಾವುದಾದರೊಂದು ದೇವತೆಯನ್ನು ಉದ್ದೇಶಿಸಿ ಮಾಡುವ ಹಬ್ಬವಲ್ಲಾ. ನಮ್ಮ ಇಷ್ಟ ದೈವ ಸ್ವರೂಪವಾದ, ಸಕಲ ದೇವತಾ ಸ್ವರೂಪವಾಗಿ ಭಾವಿಸಿ, ಸಂವತ್ಸರ, ಕಾಲ, ಭವಿಷ್ಯವನ್ನು ಮುಂಚಿತವಾಗಿ ತಿಳಿದುಕೊಂಡು, ಆ ಸಮಯದಲ್ಲಿ ದೈವಾನುಗ್ರಹ ಪ್ರಾಪ್ತಿಗಾಗಿ ಸಾಧನೆಯನ್ನು ಮಾಡಬೇಕು.ಕಾಲವನ್ನು ಭಗವದ್ರೂಪವಾಗಿ ಭಾವಿಸಿ ಪ್ರತಿದಿನವೂ ಪ್ರತಿ ನಿಮಿಷವೂ ಹಬ್ಬವೇ ! ಇಂತಹ ಪವಿತ್ರ ಹಬ್ಬದುಂದು ಮಧುರ ಪದಾರ್ಥಗಳನ್ನು ತಯಾರಿಸುವುದು, ಪೂಜೆ, ನಿವೇದನೆಗಳನ್ನು ಪವಿತ್ರ ಭಾವದಿಂದ ಮಾಡಿದರೆ ನಾವು ಮಾಡುವ ಪ್ರತಿಕಾರ್ಯವು ಆನಂದಮಯವಾಗುತ್ತದೆ.

ಆಯಾ ವರ್ಷದ ನಕ್ಷತ್ರಗಳ ಫಲಾಫಲ, ಗ್ರಹಗತಿಗಳ ಫಲಾಫಲ ಹಾಗೂ ಋತುಮಾನಗಳ ಕ್ರಮಬದ್ಧತೆಯ ವಿಶ್ಲೇಷಣೆ ಮುಂತಾದ ಧಾರ್ಮಿಕ ವಿವರಣೆಗಳನ್ನು ಮನಗಂಡು ಜನಗಳಿಂದ ನಿರಂತರ ಹಸಿರು ಕಾಂತ್ರಿಯನ್ನೇ ಹುಟ್ಟು ಹಾಕುವ ಒಂದು ಪಕ್ಷಿನೋಟವೆ ಪಂಚಾಂಗಶ್ರವಣ. ಜೀವನವೆಂದರೆ ಏಳು - ಬೀಳು ಸಹಜ. ಮನುಷ್ಯನಾದವನು ಸದಾಕಾಲ ಸಮಚಿತ್ತದಿಂದ,ಸಂಯಮದಿಂದ ಬಾಳುವಂತೆ ಪ್ರೇರೇಪಿಸುವುದೇ ಈ ಯುಗಾದಿಯ ಮೂಲ ಧ್ಯೇಯ ಮತ್ತು ಉದ್ದೇಶ. ಎಲ್ಲ ಸಂತಸಗಳಿಗೂ ಆರಂಭ ಈ ಯುಗಾದಿ.

ಫಲಗಳನ್ನು ನೀಡುವ ಗುಣವನ್ನು ಹೊಂದಿರುವ ಮಾಸವಾದ್ದರಿಂದ ಈ ಮಾಸಕ್ಕೆ ಫಾಲ್ಗುಣ ಮಾಸವೆಂದು ಹೆಸರು ಬಂದಿದೆಯೆಂದು ಅನೇಕ ಪುರಾಣಗಳಲ್ಲಿ ತಿಳಿಸಲಾಗಿದೆ.

ಈ ಮಾಸದ ನಿಯಾಮಕ ಗೋವಿಂದ ಅದಕ್ಕೆ ಗೋವಿಂದನ ಪ್ರೀತಿಗಾಗಿ ಶ್ರೀಲಕ್ಷ್ಮಿಯೊಂದಿಗೆ ನಾರಾಯಣನನ್ನು ಪೂಜಿಸುವಂತಾಹಾ ವಿಶೇಷವಾದ ಮಾಸ.ಈ ಮಾಸದಲ್ಲಿ ಪಾಡ್ಯಮಿಯಿಂದ ಮೊದಲುಗೊಂಡು 12 ದಿನಗಳ ಕಾಲ ಸತತವಾಗಿ ಲಕ್ಷ್ಮಿನಾರಾಯಣರಿಗೆ ಪೂಜೆಗಳನ್ನು ಸಲ್ಲಿಸಿದರೆ ಹನ್ನೆರಡೂ ಮಾಸಗಳಲ್ಲಿ ಪೂಜೆ ಮಾಡಿದಂತೆ. ಆದ್ದರಿಂದ ಈ ಹನ್ನೆರಡು ದಿನಗಳು ಅತ್ಯಂತ ಪವಿತ್ರ ಎಂದು ನಂಬಲಾಗಿದೆ.

ಈ ಮಾಸದಲ್ಲಿ ಮುಖ್ಯವಾಗಿ ಆಚರಿಸುವಂತಹುದೆಂದರೆ 'ಪಯೋವ್ರತ' ಅಥವಾ 'ಕ್ಷೀರ ವ್ರತ'. ಈ ವ್ರತಾಚರಣೆಯ ಫಲವಾಗಿಯೇ ಆದಿತೀದೇವಿ ವಾಮನನ್ನು ಪಡೆದಳೆಂದು ಪುರಾಣಗಳು ತಿಳಿಸುತ್ತಿವೆ. ಈ ವ್ರತದ ನಿಯಮಾನುಸಾರ ಈ ವ್ರತವನ್ನು ಆಚರಿಸುವವರು ಕೇವಲ ಕ್ಷೀರವನ್ನು ಮಾತ್ರಾ ಸೇವಿಸಬೇಕು. ಅದೂ ದೇವರಿಗೆ ನೈವೇದ್ಯ ಮಾಡಿದ ಹಾಲನ್ನು ಮಾತ್ರಾ ಸೇವಿಸಬೇಕಾಗುವುದು ಕ್ಷೀರದಲ್ಲಿ ಶ್ರೀಮಹಾಲಕ್ಷ್ಮಿಯೂ ನೆಲೆಸಿರುತ್ತಾಳಾದ್ದರಿಂದ ಈ ವ್ರತ ಎಲ್ಲಿಲ್ಲದ ಶ್ರೇಷ್ಠತೆಯನ್ನು ಪಡೆದುಕೊಂಡಿದೆ.

ಹಾಗೆಯೇ ಈ ಮಾಸದಲ್ಲಿ ಅತ್ಯಂತ ಮುಖ್ಯವಾಗಿ ಆಚರಿಸುವಂತಹಾ ಹಬ್ಬವೆಂದರೆ ಹೋಲಿ ಹುಣ್ಣಿಮೆ. ಅಂದು ರಾಕ್ಷಸಿಯಾದ ಹೋಲಿಕಳ ದಹನಮಾಡುವುದರ ಮೂಲಕ ನಮ್ಮಲ್ಲಿ ನೆಲೆಗೊಂಡಿರುವ ಕೆಟ್ಟಕಾಮನೆಗಳನ್ನು ಸುಡುವಂತಾಹಾ ಸಾಂಕೇತಿಕ ಆಚರಣೆ ಇದಾಗಿದೆ. ಈ ಆಚರಣೆಗೆ ಕಾಮದಹನ ಎಂದೂ ಕರೆಯುತ್ತಾರೆ.

ಜೊತೆಗೆ ಈ ಮಾಸ ಫಲಗಳನ್ನು ನೀಡುವ ಮಾಸವಾದ್ದರಿಂದ ಅನೇಕ ದಾನಗಳನ್ನು ಮಾಡುತ್ತಾರೆ. ಭೂದಾನ ಗೋದಾನ, ಪಯೋದಾನ, ತಿಲದಾನ ಹೀಗೆ ಅನೇಕ ದಾನಗಳನ್ನು ಮಾಡಬಹುದಾಗಿದೆ.

ನಂತರ ಬರುವ ಏಕಾದಶಿಯನ್ನು ಆಮಲಕಿ ಏಕಾದಶಿ ಎನ್ನುತ್ತಾರೆ. ಈ ದಿನದಂದು ಆಮಲಕಿ ಅಂದರೆ ನಲ್ಲಿಕಾಯಿಯ ಮರವನ್ನು ಪೂಜಿಸಿದರೆ ಲಕ್ಷ್ಮೀದೇವಿ ಪ್ರಸನ್ನಳಾಗಿ ನಮಗೆ ಸಂಪತ್ತುನ್ನು ಕರುಣಿಸುತ್ತಾಳೆ ಎಂದು ಪ್ರತೀತಿ. ಶಂಕರಾಚಾರ್ಯರು ಕನಕಧಾರಾ ಸ್ತೋತ್ರದ ಮೂಲಕ ಲಕ್ಷ್ಮೀದೇವಿಯನ್ನು ಸ್ಮರಿಸಿದಾಗ ಒಬ್ಬ ಬಡವಿಯ ಮನೆಯಲ್ಲಿ ಬಂಗಾರದ ನಲ್ಲಿ ಕಾಯಿಯ ಮಳೆಯನ್ನೇ ಸುರಿಸಿದ ಕಥೆ ಎಲ್ಲರಿಗೂ ತಿಳಿದದ್ದೇ ಆಗಿದೆ. ಆದ್ದರಿಂದ ಆಮಲಕಿ ವೃಕ್ಷವನ್ನು ಪೂಜಿಸಿ ಶ್ರೀಮಹಾಲಕ್ಷ್ಮಿದೇವಿಯ ಕೃಪೆಗೆ ಪಾತ್ರರಾಗೋಣ.

ನಂತರ ಬರುವ ಬಹುಳ ಅಷ್ಟಮಿಯಂದು ಸೀತಾದೇವಿಯ ಜಯಂತಿ ಬರುತ್ತದೆ. ಪುರಾಣದ ಪ್ರಕಾರ ಆ ದಿನದಂದೇ ಸೀತಾದೇವಿ ಜನಕ ಮಹಾರಾಜನಿಗೆ ದೊರೆತಳಂತೆ. ಆದ್ದರಿಂದ ಸೀತಾದೇವಿಯ ಜಯಂತಿಯನ್ನು ಆಚರಿಸುವ ವಾಡಿಕೆಯಿದೆ.

ಹೀಗೆ ಲಕ್ಷ್ಮೀನಾರಾಯಣರಿಬ್ಬರಿಗೂ ಪ್ರೀತಿಕರವಾದ ಈ ಮಾಸದಲ್ಲಿ ಅವರಿಬ್ಬರಿಗೂ ಪ್ರೀತಿಕರವಾದ ಪಯೋವ್ರತ ಹಾಗೂ ಆಮಲಕಿ ವೃಕ್ಷಕ್ಕೆ ಪೂಜಿಸುವುದರ ಮೂಲಕ ಅವರಿಬ್ಬರ ಕೃಪೆಗೆ ಪಾತ್ರರಾಗೋಣ.

**ಗೋವಿಂದ! ಗೋವಿಂದಾ...! ಗೋವಿಂದಾ...!**



# ಚಿತ್ರಾ ಪೂರ್ಣಿಮೆ ಕರಗದ ಆಚರಣೆ





– ಶ್ರೀಮತಿ. ಸುಮಾಚಂದ್ರಶೇಖರ್
9880060354

ಒಂದೊಂದು ಪೌರ್ಣಮಿಗೂ ಒಂದೊಂದು ಐತಿಹ್ಯವಿದೆ.ಒಂದೊಂದು ಹುಣ್ಣಿಮೆಯನ್ನೂ ದೇವರು, ಧರ್ಮ, ಸಂಸ್ಕೃತಿಗೆ ಸಂಬಂಧಿಸಿದಂತೆ ಆಚರಿಸಿದರೂ ಅವುಗಳೆಲ್ಲವುಗಳ ಸಾಮಾಜಿಕ ಉದ್ದೇಶ ಮಾತ್ರ ವ್ಯಕ್ತಿ ವ್ಯಕ್ತಿಗಳ, ವ್ಯಕ್ತಿ ಸಮಷ್ಟಿಗಳ ನಡುವಣ ಬಾಂಧವ್ಯವನ್ನು ಗಟ್ಟಿಗೊಳಿಸುವುದು ಹಾಗೂ ಲೋಕೋದ್ಧಾರವೇ ಆಗಿದೆ.

ಚೈತ್ರ ಪೂರ್ಣಿಮಾ ಹಿಂದೂ ಸಮುದಾಯಕ್ಕೆ ಅತ್ಯಂತ ಪವಿತ್ರ ಪೂರ್ಣಿಮಾ. ಇದು ಹಿಂದೂ ಪಂಚಾಂಗದ ಪ್ರಕಾರ ಮೊದಲ ಮಾಸದ ಮೊದಲ ಪೌರ್ಣಿಮೆ.ಚೈತ್ರ ಮಾಸವು ಚಾಂದ್ರಮಾನ ಪದ್ಧತಿಯ ಪ್ರಕಾರ ಪ್ರಥಮ ತಿಂಗಳು. ಇಂಗ್ಲಿಷ್ ತಿಂಗಳುಗಳ ಪ್ರಕಾರ ಏಪ್ರಿಲ್ ತಿಂಗಳಲ್ಲಿ ಬರುವ ಈ ಹುಣ್ಣಿಮೆಯು ಯುಗಾದಿಯ ನಂತರ ಬರುತ್ತದೆ. ವಸಂತ ಚೈತನ್ಯದ ಫಲ್ಲವಿತ ಪ್ರಕೃತಿಯಲ್ಲೇ ಅರಳುವ ಚೈತ್ರದ ಪೌರ್ಣಿಮೆ ತನ್ನದೇ ಆದ ಮಹತ್ವ ಹೊಂದಿದೆ. ಇದನ್ನು ಕರಗದ ಹುಣ್ಣಿಮೆ. ದವನದ ಹುಣ್ಣಿಮೆ, ಚಿತ್ರಾ ಪೂರ್ಣಿಮಾ ಎಂದೂ ಕರೆಯುತ್ತಾರೆ. ಈ ಪೌರ್ಣಿಮೆಯ ವಿಶೇಷವೆಂದರೆ ಈ ತುಂಬು ತಿಂಗಳಿನ ಮಹಿಮಾತೀತ ದಿನದಂದು ಅನೇಕ ಮಹಿಮಾತೀತರ ಜನ್ಮವಾಗಿದೆ. ಅಕ್ಕಮಹಾದೇವಿಯ ಜನನ, ರಾಮ ಬಂಟ-ರಾಮಭಕ್ತ ಹಾಗೂ ರಾಮಕಥಾ ಇರುವ ತನಕ ತಾನು ಬದುಕಿರಬೇಕೆಂದು ವರ ಪಡೆದ ಚಿರಂಜೀವಿ ಹನುಮಂತನ ಜನನ, ಭೂಲೋಕದ ಜನರ ಪಾಪ ಪುಣ್ಯಗಳ ಲೆಕ್ಕ ಇಡುವ ಚಿತ್ರಗುಪ್ತನ ಜನನ, ದೇವರ ಸೇನಾಧಿಪತಿ ಇಂದ್ರನ ಆರಾಧನೆ, ಸತ್ಯನಾರಾಯಣನ ಆರಾಧನೆ ಇನ್ನೂ ಅನೇಕ ದೇವಾನು ದೇವತೆಗಳ ಜನನ ಜಯಂತಿ - ಆರಾಧನೆಗೆ ಸಾಕ್ಷಿಯಾಗಿ ಭಯ ಭಕ್ತಿಯಿಂದ ಆಚರಿಸಲ್ಪಡುವ ಹುಣ್ಣಿಮೆಯೇ ಚೈತ್ರದ ಹುಣ್ಣಿಮೆ. ಅದಕ್ಕೆ ಈ ಹುಣ್ಣಿಮೆಯ ದಿನವನ್ನು ''ದೊಡ್ಡ ದಿನ'' ಎಂದು ಕರೆಯುತ್ತಾರೆ.

### ಕರಗದ ಹುಣ್ಣಿಮೆ:

ಚೈತ್ರದ ಹುಣ್ಣಿಮೆಗೆ ಇನ್ನೊಂದು ಹೆಸರು ''ಕರಗದ ಹುಣ್ಣಿಮೆ'' ಈ ದಿನ ಕರ್ನಾಟಕದ ಹಲವೆಡೆ ಕರಗದ ಉತ್ಸವಗಳು ನಡೆಯುತ್ತವೆ. ಇವುಗಳಲ್ಲಿ ಬೆಂಗಳೂರಿನ ''ಧರ್ಮರಾಯಸ್ವಾಮಿ ಕರಗ'' ಅತ್ಯಂತ ಪ್ರಸಿದ್ಧವಾದುದು. ಇದು ''ಬೆಂಗಳೂರು ಕರಗ'' ಎಂದೇ ಪ್ರಸಿದ್ಧ.ಇದು ರಥೋತ್ಸವಕ್ಕೆ ಪವಿತ್ರ ದಿನವಾಗಿದ್ದು. ಈ ಪೌರ್ಣಿಮೆಯಂದು ದ್ವಾಪರಯುಗದೊಂದಿಗೆ ಸಂಬಂಧ ಹೊಂದಿರುವ ಬೆಂಗಳೂರಿನ ಕರಗವು ''ಪಾಂಡವರು ಧರ್ಮರಾಜನ ನಾಯಕತ್ವದಲ್ಲಿ ಕುರುಕ್ಷೇತ್ರ ಯುದ್ಧದಲ್ಲಿ ಜಯ ಸಾಧಿಸಿದ ಸಂಕೇತ'' ಎಂದು ಹೇಳುತ್ತಾರೆ. ಈ ಕರಗದ ಅಧಿದೈವ 'ಸ್ತ್ರೀ-ಪುರುಷ ಶಕ್ತಿಗಳ ಸಮ್ಮಿಲನ'ಎಂಬ ನಂಬಿಕೆ ಇದೆ. ಅದಕ್ಕೆ ಇದನ್ನು ''ಧರ್ಮರಾಯ - ದ್ರೌಪದಿ ಕರಗ'' ಎಂದೂ ಕರೆಯುತ್ತಾರೆ. ಕರಗದ ಉತ್ಸವ ರಾತ್ರಿಯಲ್ಲಿ ನಡೆಯುತ್ತದೆ.

ಇದು ಚೈತ್ರ ಹುಣ್ಣಿಮೆಯಿಂದ ಆರಂಭವಾಗಿ 9 ದಿನಗಳ ಕಾಲ ಮುಂದುವರೆಯುತ್ತದೆ. ಕರಗವು ಕರ್ನಾಟಕದ ಸಾಂಸ್ಕೃತಿಕ ಮತ್ತು ಪರಂಪರೆಯ ಪ್ರತೀಕ. ಇದು ಅತ್ಯಂತ ಪ್ರಾಚೀನ ಉತ್ಸವವಾಗಿದ್ದು, ಚೈತ್ರದ ಹುಣ್ಣಿಮೆಯ ದಿನ ವೈಶಿಷ್ಟ್ಯ ಪೂರ್ಣವಾಗಿ ನಡೆಯುತ್ತದೆ. ಹೂವಿನಿಂದ ಅಚ್ಛಾದಿತವಾದ ದೇವಿಯ ಮೂರ್ತಿಯನ್ನು ತಲೆಯ ಮೇಲೆ ಹೊತ್ತು ನರ್ತಿಸುವ ಪರಿ ನೋಡಿಯೇ ಅನುಭವಿಸಬೇಕು. ಪ್ರತಿವರ್ಷ ಚೈತ್ರದ ಪೌರ್ಣಿಮೆಯಂದು ಬೆಂಗಳೂರಿನ ಧರ್ಮರಾಯ ಸ್ವಾಮಿ ದೇವಾಲಯದಲ್ಲಿ ಈ ಉತ್ಸವ ನಡೆಯುತ್ತದೆ. ಕರಗದ ಉತ್ಸವದುದ್ದಕ್ಕೂ ಚಿತ್ರಾನ್ನದ ಊಟ ಮಾಡುವುದು ವಿಶೇಷ.

ಚೈತ್ರದ ಹುಣ್ಣಿಮೆಯನ್ನು ''ಮುತ್ತೈದೆ ಹುಣ್ಣಿಮೆ'' ಎಂದು ಕರೆಯುತ್ತಾರೆ.ಕರಗದ ಕೆಲವು ಕಾರ್ಯಕರ್ತರು ಅಂದರೆ ದೇವಿಯನ್ನು ಹೊತ್ತು ನರ್ತಿಸುವವರು ಪರಿಶುದ್ಧರಾಗಿರಬೇಕು. ಅದಕ್ಕಾಗಿ ಅವರು ಕರಗದೋತ್ಸವ ಇನ್ನೂ 15 ದಿನ ಮುಂದಿರುವಾಗಲೇ ಮನೆಯನ್ನು ತೊರೆದು ದೇವಸ್ಥಾನದಲ್ಲಿ ವಾಸಿಸ ತೊಡಗುತ್ತಾರೆ.ಕರಗ ಮುಗಿಯುವವರೆಗೂ ಅವರು ಮನೆಗೆ ಹೋಗುವುದಿಲ್ಲ. ಅವರು ಮನೆಬಿಟ್ಟು ಬರುವಾಗ ತಮ್ಮ ಹೆಂಡಂದಿರ ಕೊರಳಿನಲ್ಲಿನ ಮಂಗಳಸೂತ್ರ,ಬಳೆ ತೆಗೆದುಕೊಂಡು ಬರುತ್ತಾರೆ. ಉತ್ಸವ ಮುಗಿಯುವವರೆಗೂ ಅವರು ಗಂಡನ ಮುಖವನ್ನಾಗಲಿ, ಉತ್ಸವವನ್ನಾಗಲಿ ನೋಡುವ ಹಾಗಿಲ್ಲ. ನಂತರ ಉತ್ಸವ ಮುಗಿದ ಮೇಲೆ ತಮ್ಮ ಗಂಡಂದಿರಿಂದ ತಾಳಿ ಕಟ್ಟಿಸಿ ಕೊಳ್ಳುತ್ತಾರೆ. ಅದಕ್ಕಾಗಿಯೇ ಈ ಉತ್ಸವದಲ್ಲಿ ಮುತ್ತೈದೆಯರಿಗೆ ಕುಂಕುಮ, ಅರಿಷಿಣ, ಹೂವು ಮುಂತಾದ ಮಂಗಳ ದ್ರವ್ಯಗಳನ್ನು ದಾನ ಮಾಡುವ ಪದ್ಧತಿ ಇದೆ. ಆ ಕಾರಣ ಇದನ್ನು ಮುತ್ತೈದೆ ಹುಣ್ಣಿಮೆ ಎಂದೂ ಕರೆಯುತ್ತಾರೆ.

### ಚಿತ್ರಾ ಪೂರ್ಣಿಮಾ

ಚೈತ್ರ ಪೂರ್ಣಿಮಾ ಚಿತ್ರಗುಪ್ತನ ಜನ್ಮದಿನ. ಚಿತ್ರಗುಪ್ತ ನಾವು ನಮ್ಮ ಬದುಕಿನುದ್ದಕ್ಕೂ ಮಾಡಿದ ಪಾಪ - ಪುಣ್ಯಗಳ ಲೆಕ್ಕ ಇಡುವ ಕರಣಿಕದೇವ. ಪಾರ್ವತಿ ಪರಮೇಶ್ವರರ ಮುದ್ದಿನ ಮಗ.ಚೈತ್ರ ಪೂರ್ಣಿಮಾದಂದು ತಾಯಿ ಪಾರ್ವತಿ ಮನೆಯಂಗಳದಲ್ಲಿ ಸುಂದರ ಚಿತ್ರ ಬಿಡಿಸಿ, ಅದನ್ನೇ ತದೇಕ ಚಿತ್ತದಿಂದ ನೋಡುತ್ತ ನಿಂತಿದ್ದಳು. ಆಗ ಅಲ್ಲಿ ಶಿವ ಬರುತ್ತಾನೆ. ಶಿವೆಯು ಮಂತ್ರ ಮುಗ್ಧಳಾಗಿ ಚಿತ್ರ ನೋಡುತ್ತಿರುವುದನ್ನು ಕಂಡು, ಆ ಚಿತ್ರಕ್ಕೆ ಜೀವ ತುಂಬಿದ ಶಿವನ ಆ ಕಾರ್ಯ ಶಿವೆಗೆ ಖುಷಿ ನೀಡಿತು. ಆದರೆ ಜೀವ ಬಂದ

ತಕ್ಷಣವೇ ಅದು ಅಲ್ಲಿಯೇ ನಿಂತಿದ್ದ ಕಾಮಧೇನುವಿನ ಗರ್ಭಪ್ರವೇಶ ಮಾಡಿ ಅಲ್ಲಿಯೇ ಬೆಳೆದು, ಮುಂದಿನ ಚೈತ್ರ ಪೂರ್ಣಿಮಾ ದಿನ ಜನಿಸುತ್ತದೆ. ಶಿವ ಪಾರ್ವತಿಯರು ಅವನಿಗೆ "ಚಿತ್ರಗುಪ್ತ" ನೆಂದು ಹೆಸರಿಟ್ಟು ಬೆಳೆಸಿದರು. ನಂತರ ಚಿತ್ರಗುಪ್ತನು ಯಮಲೋಕದಲ್ಲಿ ಸಾವಿನ ದೇವರು ಯಮ ಧರ್ಮರಾಯನ ಉಪಅಧಿಕಾರಿಯಾಗಿ ಸೇರಿಕೊಳ್ಳುತ್ತಾರೆ. ಅವನ ಕೆಲಸ ಪ್ರತಿಯೊಬ್ಬ ಮಾನವನ ಪಾಪ ಪುಣ್ಯಗಳನ್ನು ನಿಖರವಾಗಿ ಎಣಿಸಿ ಲೆಕ್ಕ ಇಡುವುದು.ಸತ್ತ ಮಾನವನ ಆತ್ಮವನ್ನು ಯಮಧರ್ಮ ಯಮಲೋಕಕ್ಕೆ ಕರೆದೊಯ್ಯುತ್ತಾನೆ.ಅಲ್ಲಿ ಚಿತ್ರಗುಪ್ತನು ಆ ಮನುಷ್ಯನ ಪಾಪ-ಪುಣ್ಯಗಳ ವಿವರಣೆ ನೀಡುತ್ತಾನೆ. ಹೆಚ್ಚು ಪುಣ್ಯ ಮಾಡಿದ್ದರೆ ಸ್ವರ್ಗ, ಇಲ್ಲವೆ ನರಕ ಇಂತಹ ಚಿತ್ರಗುಪ್ತನ ಪೂಜೆ ಚೈತ್ರ ಪೂರ್ಣಿಮೆಯಂದು ಭಯ- ಭಕ್ತಿಗಳಿಂದ ನಡೆಯುತ್ತದೆ. ತಮಿಳುನಾಡಿನ ಕಾಂಚಿಪುರದಲ್ಲಿ ಚಿತ್ರಗುಪ್ತನ ದೇವಸ್ಥಾನವಿದೆ. ಅಲ್ಲಿ ಚಿತ್ರಗುಪ್ತನ ಪೂಜೆ ಅತಿ ಸಂಭ್ರಮದಿಂದ ನಡೆ ಯುತ್ತದೆ. ನಮ್ಮ ಪಾಪ-ಪುಣ್ಯಗಳ ಲೆಕ್ಕ ಇಡುವ ದೇವನಿಗೆ ಭಯ ಭಕ್ತಿಯಿಂದ ಪೂಜೆ ಸಲ್ಲಿಸದಿದ್ದರೆ ಹೇಗೆ? ಚೈತ್ರ ಪೂರ್ಣಿಮೆಯಂದು ಚಿತ್ರ ಗುಪ್ತನನ್ನು ಶ್ರದ್ಧಾ ಪೂರ್ವಕವಾಗಿ ಆರಾಧಿಸಿದರೆ ನಾವು ಮಾಡಿದ ಕೆಲವು ಪಾಪಗಳನ್ನು ಕ್ಷಮಿಸುತ್ತಾನೆ ಎಂಬ ನಂಬಿಗೆಯೂ ಇದೆ.

ಚಿತ್ತಾ ನಕ್ಷತ್ರ ಇರುವ ಹುಣ್ಣಿಮೆಯ ದಿನದ ಹಿಂದಿನ ಹದಿನೈದು ದಿನ ಹಾಗೂ ಮುಂದಿನ ಹದಿನೈದು ದಿನಗಳು ಸೇರಿ ಚೈತ್ರಮಾಸ ಎಂದು ಕರೆಯಲಾಗುತ್ತದೆ. ಚೈತ್ರಮಾಸದಲ್ಲಿ ಬರುವ ಹುಣ್ಣಿಮೆಯನ್ನು ಚಿತ್ತಾ ಪೌರ್ಣಿಮೆ ಎನ್ನುತ್ತಾರೆ. ಈ ಚಿತ್ತಾ ಪೌರ್ಣಿಮಾ ದಿನದಂದೇ ಬೆಂಗಳೂರಿನಲ್ಲಿ ಬೃಹತ್ ಪ್ರಮಾಣದಲ್ಲಿ ಕರಗ ಉತ್ಸವವನ್ನು ಮಾಡುತ್ತಾರೆ. ಈ ಹುಣ್ಣಿಮೆ ಯನ್ನು ಅಕ್ಕನ ಹುಣ್ಣಿಮೆ, ದಮನದ ಹುಣ್ಣಿಮೆ ಎಂತಲೂ ಕರೆಯುತ್ತಾರೆ. ಈ ದಿನವೇ ಶ್ರೀಹನುಮಂತನು ಅಂಜನಾದೇವಿಯಲ್ಲಿ ಅವತರಿಸಿದ ದಿನವಾಗಿದ್ದು ಈ ದಿನ ಹನುಮಜಯಂತಿಯನ್ನು ಆಚರಿಸಿ ವಿಶೇಷ ಪೂಜೆ ಗಳಿಂದ ಹನುಮಂತನನ್ನು ಆರಾಧಿಸುತ್ತಾರೆ.

ಪರಮೇಶ್ವರನಿಂದ ದಮನ ಹೊಂದಿದ ಕಾಮನ ಭಸ್ಮದಿಂದ ಜನ್ಮತಾಳಿ, ರತಿಯ ಕಣ್ಣೀರಿನಿಂದ ಬೆಳೆದದ್ದು ದವನ. ಈ ದವನದಿಂದ ಫಾಲ್ಗುಣ ಮಾಸದಿಂದ ಆರಂಭಿಸಿ ಚೈತ್ರ ಮಾಸದ ಪೂರ್ಣಿಮಾ ತಿಥಿಯವರೆಗೂ ದೇವತೆಗಳನ್ನು ಪೂಜಿಸಿದರೆ ಪರಮೇಶ್ವರ ಸಂತುಷ್ಟರಾಗು ವರೆಂದು ವರವಿದೆ.


'ಪೂರ್ಣಿಮಾ ಸರ್ವದೇವಾನಾಂ ಶ್ರೇಷ್ಠಾ ದಮ ನಾರ್ಪಣೇ' ಎನ್ನುವಂತೆ ಪೂರ್ಣಿಮ ದಿನದಂದು ಸಮಸ್ತ ದೇವತೆಗಳಿಗೂ ದವನದಿಂದ ಪೂಜಿಸುವುದು ಅತಿಪ್ರಿಯವಾಗಿದೆ. ಚೈತ್ರ ಪೂರ್ಣಿಮೆಯು ಚಿತ್ತಾ ನಕ್ಷತ್ರದಿಂದ ಯುಕ್ತವಾಗಿದ್ದರೆ ಬ್ರಾಹ್ಮಣರಿಗೆ ಚಿತ್ರಾನ್ನ ಪ್ರಧಾನವಾಗಿರುವ ಭೋಜನವನ್ನು ಮಾಡಿಸಿ ಬಣ್ಣ ಬಣ್ಣದ ವಸ್ತ್ರಗಳನ್ನು (ಚಿತ್ರ ವಿಚಿತ್ರವಾದ) ದಾನ ಮಾಡಬೇಕು,ಇದರಿಂದ ಸೌಭಾಗ್ಯವುಂಟಾಗುತ್ತದೆ. ದಾರಿದ್ರ್ಯ ನಾಶ ವಾಗುವುದು ಮೊಸರನ್ನ ಕೂಡ ಅಷ್ಟೇ ವಿಶೇಷತೆಯಿಂದ ಕೂಡಿದೆ.ಈ ಬಾರಿ ಚಿತ್ತಾ ನಕ್ಷತ್ರವು ಹುಣ್ಣಿಮೆಯಂದೇ ಇದ್ದು ಆ ದಿನ ಮಾಡುವ ಪೂಜೆ - ದಾನ - ಸ್ನಾನಾದಿಗಳು ಅತ್ಯಂತ ಫಲಪ್ರದವಾಗಿದ್ದು, ಫಲವು ಹತ್ತು ಪಟ್ಟು ಹೆಚ್ಚಿನದಾಗಿರುತ್ತದೆ.

ಚೈತ್ರ ಪೌರ್ಣಿಮೆಯು ಮನ್ವಾದಿಯೂ ಆಗಿದ್ದು ಇಂದು ಚಂದ್ರನ ಪ್ರೀತಿಗಾಗಿ ಹಸಿ ಧಾನ್ಯಗಳನ್ನು ಜಲಪೂರ್ಣವಾದ ಕುಂಭವನ್ನು ದಾನ ಮಾಡುವುದು ಒಳಿತು.

ಯಾವುದೇ ಮಾಸದ ಕಡೆಯ ಮೂರು ದಿನಗಳು ಅಂದರೆ ತ್ರಯೋದಶಿ, ಚತುರ್ದಶಿ, ಹುಣ್ಣಿಮೆಗಳು (ಹುಣ್ಣಿಮೆಯಿಂದ ಮತ್ತೊಂದು ಹುಣ್ಣಿಮೆಯವರೆಗೆ ಮಾಸವನ್ನು ಪರಿಗಣಿಸಲಾಗಿದೆ) ಅಂತ್ಯ ಪುಷ್ಕರಿಣಿ ಎನಿಸುತ್ತದೆ. ಫಾಲ್ಗುಣ ಮಾಸ ಪೌರ್ಣಮಿಯಿಂದ ಚೈತ್ರ ಪೌರ್ಣಮಿ ವರೆಗೂ ಒಂದು ತಿಂಗಳು ಚೈತ್ರಮಾಸ ಸ್ನಾನವನ್ನು ಮಾಡಬೇಕು. ಮಾಸ ಪೂರ್ತಿಯಾಗಿ ನದ್ಯಾದಿಗಳಲ್ಲಿ ಸ್ನಾನ ಮಾಡಲು ಅಗತ್ಯವಾದಾಗ ಅಂತ್ಯ ಪುಷ್ಕರಣಿಯಲ್ಲಾದ 3 ದಿನಗಳು ನದಿಗಳಲ್ಲಿ ಸ್ನಾನ ಮಾಡಬೇಕು. ಇದರಿಂದ ಗಂಗಾದಿ ತೀರ್ಥಗಳ ಸ್ನಾನ ಮಾಡಿದಂತೆ ಆಗುವುದು. ಚೈತ್ರ ಮಾಸದಲ್ಲಿಯೇ ಸೂರ್ಯನ ತಾಪವು ಆರಂಭವಾಗುತ್ತದೆ. ಇತರ ಮಾಸಗಳಿಗಿಂತಲೂ ಈ ಮಾಸದಲ್ಲಿ ಬಾಯಾರಿಕೆ ಅಧಿಕವಾಗುವುದರಿಂದ,ಬಾಯಾರಿಕೆಯನ್ನು ಹೋಗಲಾಡಿಸಲು ನೀರನ್ನು ಯಾತ್ರಿಕರಿಗೆ ಕೊಡುವುದರಿಂದಲೂ ಪುಣ್ಯ ಸಂಚಯವನ್ನು ಮಾಡಿಕೊಳ್ಳಬಹುದಾಗಿದೆ.

### ಹನುಮಾನ್ ಜಯಂತಿ

ಚೈತ್ರ ಮಾಸದ ಇನ್ನೊಂದು ಜನಪ್ರಿಯ ಹಾಗೂ ಭಕ್ತಿ ಪೂರ್ವಕ ಹಬ್ಬ ಎಂದರೆ ಶ್ರೀರಾಮಭಕ್ತ ಹನುಮಾನನ ಜಯಂತಿ.ರಾಮಬಂಟ ಹನುಮಂತನೆಂದರೆ ಎಲ್ಲರಿಗೂ ವಿಶ್ವಾಸ, ಪ್ರೀತಿ, ಭಯ, ಭಕ್ತಿ, ಹನುಮಂತ, ಮಾರುತಿ, ಆಂಜನೇಯ, ವಾಯುಪುತ್ರ, ಕೇಸರಿಪುತ್ರ, ಪ್ರಾಣ ದೇವರು ಇತ್ಯಾದಿ ಹೆಸರುಗಳಿಂದ ಅಸಂಖ್ಯ ಭಕ್ತರ ಮನದಲ್ಲಿ ವಿರಾಜಮಾನ ನಾಗಿರುವ ಆಂಜನೇಯ ಜಯಂತಿ ಚೈತ್ರ ಪೂರ್ಣಿಮೆಯಂದು ಎನ್ನುವುದೇ ಆ ಹುಣ್ಣಿಮೆಗೊಂದು ಹಿರಿಮೆ. ಹನುಮಂತನ ದೈವವಾದ ಪುರುಷೋತ್ತಮ ಶ್ರೀರಾಮಚಂದ್ರನ ಶ್ರೀರಾಮನವಮಿ ಚೈತ್ರ ಮಾಸದಲ್ಲಿ ಆಚರಿಸುವ ಪ್ರಧಾನ ಭಕ್ತಿರಸದ ಹಬ್ಬವಾದರೆ, ಅವನ ಭಕ್ತನಾದ ಹನುಮಂತನ ಜಯಂತಿಯೂ ಚೈತ್ರದ ಪೂರ್ಣಿಮೆಯಂದು ನಡೆಯುವುದು ವಿಶೇಷ ಅದರಲ್ಲೂ ಹನುಮಂತ ಗ್ರಾಮೀಣರ ಅಚ್ಚುಮೆಚ್ಚಿನ ದೇವರು.ಹನುಮನ ಗುಡಿಗಳಿಲ್ಲದ ಗ್ರಾಮಗಳನ್ನು ನೆನಪಿಸಿಕೊಳ್ಳುವುದೇ ಕಷ್ಟ. ಹನುಮಂತ ಶೌರ್ಯ-ಧೈರ್ಯಗಳ ಮೂರ್ತಿ. ಭಕ್ತಿ-ಶಕ್ತಿಗಳ ಸಂಗಮ. ವೀರತ್ವ - ವಿನಯಗಳ ಸಾಕಾರಮೂರ್ತಿ. ರುದ್ರಾಂಶ ಸಂಭೂತ. ನ್ಯಾಯ-ನೀತಿಗಳ ನೆಲೆಗಟ್ಟು. ವಾನರರಾಜ ಸುಗ್ರೀವ ಸೇನಾಪತಿ - ಆಪ್ತಮಿತ್ರ ಅವನು ಒಂದೆಡೆ ಶೌರ್ಯದ ಸಿರಿ,ಇನ್ನೊಂದೆಡೆ ಭಕ್ತಿಯ ಝರಿ. ಚೈತ್ರ ಪೌರ್ಣಿಮೆಯ, ಉದಯ ಕಾಲದಲ್ಲಿ ಜನಿಸಿದ ಹನುಮಂತ ಅದೇ ಆಗ ಆಗಸದಲ್ಲಿ ಉದಯವಾಗುತ್ತಿರುವ ಕೆಂಪಾದ ಸೂರ್ಯನನ್ನು ಹಣ್ಣೆಂದು ಭ್ರಮಿಸಿ, ಸೂರ್ಯಮಂಡಲಕ್ಕೆ ಹಾರಿ ಸೂರ್ಯನ ಮೆಚ್ಚುಗೆಗೆ ಪಾತ್ರನಾಗಿ,ಅವನಿಂದ ವರಪಡೆದು ವಜ್ರದೇಹಿಯಾದವ. ಭೂಲೋಕದಲ್ಲಿ ರಾಮನ ಸ್ಮರಣೆ ಇರುವ ತನಕ ತಾನು ಬದುಕಿರಬೇಕೆಂಬ ವರಪಡೆದು ಕಲಿಕಾಲದ ಜೀವಂತ ದೇವರೆನಿಸಿದವ. ಸಮುದ್ರಲಂಘನ, ಸೀತಾನ್ವೇಷಣ. ರಾಕ್ಷಸ ನಿಗ್ರಹ, ಲಂಕಾದಹನ, ಪರ್ವತಾರೋಹಣಗಳಲೆಲ್ಲ ಅಪ್ರತಿಮ ನಾಗಿದ್ದು, ದೇವಾನುದೇವತೆಗಳಿಂದ ವರಪಡೆದು ಬಲಾಢ್ಯನಾಗಿದ್ದರೂ ಎಂದೂ ಅಹಂಕಾರ ತೋರಿದವನಲ್ಲ. ಇಷ್ಟಿದ್ದರೂ ತನ್ನನ್ನು ರಾಮನ ದಾಸನೆಂದು ಕರೆಯಿಸಿಕೊಳ್ಳುವುದರಲ್ಲೇ ಸುಖಿಸುವ ದಾಸಶ್ರೇಷ್ಠ. ವಾನರರಾಜ ಸುಗ್ರೀವನ ಸಚಿವ ಹಾಗೂ ಆಪ್ತನಾದ ಕೇಸರಿ ಎಂಬ ವಾನರನಾಯಕ ಮತ್ತು ಅಂಜನಾ ದೇವಿಯ ಪುತ್ರ ತ್ರೇತಾಯುಗದ ಹನುಮಂತ ಮುಂದೆ ದ್ವಾಪರ ಯುಗದಲ್ಲಿ ಪಾಂಡು ಪುತ್ರರಾದ ಅರ್ಜುನ,ಭೀಮರಿಗೂ ಸಹಾಯ ಮಾಡಿದ ಉಲ್ಲೇಖ ಮಹಾಭಾರತದಲ್ಲಿ ಸಿಗುತ್ತವೆ. ರಾಮನ ಸ್ಮರಣೆಯೊಂದಿಗೆ ಹನುಮಂತ ಈಗಲೂ ಜೀವಂತ ಆಗಿದ್ದಾನೆ ಎಂದೇ ನಂಬಲಾಗಿದೆ. ಅದಕ್ಕೆ ಹನುಮಂತ ಕಲಿಯುಗದ 'ಜಾಗೃತ ದೇವರು' ಎಂದು ಹೇಳುತ್ತಾರೆ. ಎಲ್ಲ ಹದಿನೆಂಟೂ ಪುರಾಣಗಳು ರಾಮಭಕ್ತ ಹನುಮಂತನ ಗುಣ ಗಾನ ಮಾಡಿವೆ. ಚೈತ್ರ ಪೂರ್ಣಿಮಾ ಈ ಎಲ್ಲ ರೀತಿಗಳಿಂದ ಒಂದು ವಿಶೇಷ ಹುಣ್ಣಿಮೆ ಆಗಿದೆ.



ಶ್ರೀ ರಾಮ ರಾಮ ರಾಮೇತಿ
ರಮೇ ರಾಮೇ ಮನೋರಮೇ
ಸಹಸ್ರನಾಮ ತತ್ತುಲ್ಯಂ
ರಾಮನಾಮ ವರಾನನೇ



# ಸರ್ವಜನ ಪ್ರಿಯ ರಾಮ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
9739369621

ಶ್ರೀಮದ್ರಾಮಾಯಣ, ಮಹಾಭಾರತ, ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದು, ಅದಿಲ್ಲದೇ ಯಾವುದೇ ಕಲಾ ಪ್ರಕಾರ ಪರಿಪೂರ್ಣವಾಗದಾಗಿದೆ. ಪ್ರಸ್ತುತ ರಾಮಾಯಣದ ಬಗ್ಗೆಯೇ ಹೇಳುವುದಾದರೆ, ರಾಮಾಯಣ ಆದಿ ಕಾವ್ಯ. ಈ ಕಾವ್ಯದ ನಾಯಕ ಶ್ರೀರಾಮಚಂದ್ರ ಆದರ್ಶ ಪುರುಷ, ಸರ್ವಗುಣಗಣ. ಇವನ ನಡೆಯನ್ನು. ಸಂದೇಶವನ್ನು ಸಂಗೀತ ಮತ್ತು ಸಾಹಿತ್ಯದ ಮೂಲಕ ತಿಳಿಸುವ ಪ್ರಯತ್ನ ಅತ್ಯಂತ ಯಶಸ್ವಿಯಾಗಿರುವುದನ್ನು ಕಾಣುತ್ತೇವೆ.

ರಾಮಾಯಣವನ್ನು ಪ್ರಥಮ ಬಾರಿಗೆ ಸಾರ್ವಜನಿಕವಾಗಿ ತಿಳಿಸಿದ್ದು ಕುಶ - ಲವರ ಗಮಕ ಗಾಯನದಿಂದ. ಅಲ್ಲಿಂದ ಮುಂದೆ ಬಂದ ಆಧ್ಯಾತ್ಮ ಜೀವಿಗಳಾಗಲೀ, ಕವಿಗಳಾಗಲೀ, ವಾಗ್ಗೇಯಕಾರರಾಗಲೀ, ದಾಸವರೇಣ್ಯರಾಗಲೀ ಎಲ್ಲರೂ ಸಂಗೀತದ ಗೇಯ ಗುಣಕ್ಕೆ ಮಾರುಹೋಗಿ ಈ ಮಾಧ್ಯಮವನ್ನು ಉಪಯೋಗಿಸಿಕೊಂಡಿದ್ದು, ಇದು ಇಂದಿಗೂ ಸಮಾಜದ ಮೇಲೆ ಪರಿಣಾಮಕಾರಿಯಾಗಿರುವುದನ್ನು ಕಾಣುತ್ತೇವೆ. ತ್ಯಾಗರಾಜರಾಗಲೀ, ದೀಕ್ಷಿತರಾಗಲಿ, ಶ್ಯಾಮಾ ಶಾಸ್ತ್ರೀಗಳಾಗಲೀ, ದಾಸವರೇಣ್ಯರಾಗಲೀ ಈ ಪ್ರಯತ್ನದಲ್ಲಿ ಯಶಸ್ವಿಯಾಗಿರುವುದರ ಜೊತೆ ಜೊತೆಗೆ ಆಧ್ಯಾತ್ಮಿಕತೆಯಲ್ಲಿ ಮಹಾನ್ ಸಾಧಕರಾಗಿ, ಸಮಾಜದಿಂದ ಗೌರವಿಸಲ್ಪಡುತ್ತಿದ್ದಾರೆ ಮತ್ತು ಸಂಗೀತ ಆಧ್ಯಾತ್ಮಿಕ ಸಾಧನೆಗೆ ಪೋಷಕವೆಂಬುದನ್ನು ತೋರಿಸಿದ್ದಾರೆ. ಹೀಗಾಗಿ ಶ್ರೀರಾಮೋತ್ಸವದ ಸಂದರ್ಭ ಮಹಾನ್ ವ್ಯಕ್ತಿ ಶ್ರೀರಾಮನ ಗುಣಗಳ ಅನುಸಂಧಾನಕ್ಕೂ ಮತ್ತು ಸಂಗೀತ ಕೃತಿಗಳಾ ಗಾಯನದಿಂದ ಅಥವಾ ಶ್ರವಣದಿಂದ ಧನ್ಯತೆ ಹೊಂದುವ ಮಹತ್ತಾದ ಅವಕಾಶವಾಗಿ ದಿನದಿನಕ್ಕೆ ಹೆಚ್ಚುತ್ತಿರುವ ಶ್ರೀರಾಮೋತ್ಸವದ ಸಂಗೀತ ಕಾರ್ಯಕ್ರಮಗಳೇ ಇದಕ್ಕೆ ಸಾಕ್ಷಿಯಾಗಿದೆ. ಈ ಸಂದರ್ಭದಲ್ಲಿ ಯಾವ ಭೇದಗಳಿಲ್ಲದೆ ಸಮಾಜವು ಒಂದಾಗಿ ಈ ಕಲೆಯನ್ನು ಆಸ್ವಾದಿಸುವ ಪರಿಪಾಠವನ್ನು ಯಶಸ್ವಿಯಾಗಿ ಬೆಳೆಸುತ್ತಿರುವುದು ಇಂದಿಗೂ, ಎಂದಿಗೂ ಸ್ವಾಗತಾರ್ಹ.

ಶ್ರೀಮದ್ರಾಮಾಯಣವು ವಿಶ್ವ ಸಾಹಿತ್ಯರಾಶಿಯಲ್ಲಿ ಅಗ್ರಮಾನ್ಯತೆಯನ್ನು ಪಡೆದಿರುವ ಮಹಾಕಾವ್ಯ. ಈ ಮಹಾಕಾವ್ಯದ ನಾಯಕ ಸಕಲ ಕಲ್ಯಾಣಗುಣ ಪರಿಪೂರ್ಣನಾದ ಶ್ರೀರಾಮಚಂದ್ರಪ್ರಭು. ಶ್ರೀರಾಮನ ರೂಪ - ಲಾವಣ್ಯಗಳನ್ನೂ ಶೌರ್ಯಪ್ರತಾಪಗಳನ್ನೂ ನಿಗ್ರಹಾನುಗ್ರಹ ಶಕ್ತಿಗಳನ್ನೂ ಸತ್ಯನಿಷ್ಠೆಯನ್ನೂ ಧರ್ಮದೀಕ್ಷೆಯನ್ನೂ, ವಾತ್ಸಲ್ಯ-ಔದಾರ್ಯಾದಿ ಗುಣವಿಶೇಷಗಳನ್ನೂ, ಶೀಲ - ಸೌಭಾಗ್ಯವನ್ನೂ ವಾಲ್ಮೀಕಿ ಮಹರ್ಷಿಗಳು ಹೃದಯಂಗಮವಾಗಿ ಸ್ತುತಿಸಿದ್ದಾರೆ. ಅದರಂತೆಯೇ ಶ್ರೀರಾಮಚಂದ್ರನ ಗುಣಕಥನದಲ್ಲಿ ಜೀವನ ಸಾರ್ಥಕ್ಯವನ್ನು ಪಡೆದು ಕೃತಕೃತ್ಯನಾದ ವಾಗ್ಗೇಯಕಾರರು ಬಹುಮಂದಿ . ಅವರೆಲ್ಲರೂ ಶ್ರೀರಾಮಚಂದ್ರನನ್ನು ತಮ್ಮ ಹೃದಯಮಂಟಪದಲ್ಲಿರಿಸಿಕೊಂಡು ಆರಾಧಿಸಿ ಆ ದಿವ್ಯದರ್ಶನದಲ್ಲಿ ಮೈಮರೆತ ಮಹಾನುಭಾವರು. ಅವರ ಹೃದಯದಿಂದ ಹರಿದು ಬಂದಿರುವ ವಾಕ್ ಪ್ರವಾಹವನ್ನು ಪರಿಭಾವಿಸುವುದೇ ಒಂದು ಅನಿರ್ವಚನೀಯವಾದ ರಸಾನುಭವ. ರಸವೆಂದರೆ ಭಗವದ್ವಸ್ತು. 'ರಸೋವೈ ಸಃ' ಎಂಬುದು ಉಪನಿಷತ್ತಿನ ವಾಕ್ಯ.

ರಾಜ್ಯಪದವಿಯನ್ನು ಶ್ರೀರಾಮನಿಗೆ ಒಪ್ಪಿಸಿ ವಾನಪ್ರಸ್ಥನಾಗಲು ಸಂಕಲ್ಪಿಸಿದ ದಶರಥನು ತನ್ನ ಮನೋಗತವನ್ನು ಪ್ರಜೆಗಳಿಗೆ ತಿಳಿಸಿ ಅವರ ಅನುಮೋದನೆಗಾಗಿ ಕಾಯುತ್ತಾನೆ. ಅಮೃತಪ್ರಾಯವಾದ ದಶರಥನ ಮಾತನ್ನು ಕೇಳಿದ ಸಮಸ್ತ ಪ್ರಜಾವರ್ಗವು ಹರ್ಷೋದ್ಗಾರದಿಂದ ಅನುಮೋದಿಸುತ್ತಾ ಶ್ರೀರಾಮನ ಕಲ್ಯಾಣಗುಣಗಳನ್ನು ವಿಸ್ತಾರವಾಗಿ ಪ್ರಶಂಶಿಸುತ್ತದೆ. ವಾಲ್ಮೀಕಿ ಮಹರ್ಷಿಗಳ ಶ್ರೀರಾಮ ಗುಣಕಥನ ಶ್ರೀಪುರಂದರ ದಾಸರ ಮನಸ್ಸನ್ನು ಸೆರೆ ಹಿಡಿಯುತ್ತದೆ. ಅದರ ಫಲಿತಾಂಶವೇ ವಾಲ್ಮೀಕಿ ವಾಙ್ಮಯಕ್ಕೆ ಸಂವಾದಿಯೋ ಎಂಬಂತಿರುವ ಅವರ ನಾಟರಾಗದ ಕೃತಿ - 'ಜಯ ಜಯ ಜಾನಕೀಕಾಂತ'.

ರಾಮಭಕ್ತರಲ್ಲಿ ಅಗ್ರಪಂಕ್ತಿಗೆ ಸೇರಿದವರು ಶ್ರೀತ್ಯಾಗರಾಜ ಸ್ವಾಮಿಗಳು.ರಾಮಭಕ್ತಿಯು ಅವರಿಗೆ ಪಿತ್ರಾರ್ಜಿತವಾದ ಆಸ್ತಿ. ಶ್ರೀ ಮದ್ರಾ

ಮಾಯಣದ ನಿತ್ಯ ಪಾರಾಯಣ, ರಾಮಕೃಷ್ಣನಂದರಿಂದ ರಾಮತಾರಕ ಮಂತ್ರೋಪದೇಶ ಮತ್ತು 96 ಕೋಟಿ ಮಂತ್ರಜಪ - ಅದರ ಫಲಿತಾಂಶವಾಗಿ ಯಜ್ಞರಕ್ಷಣೆಗಾಗಿ ಗುರು ವಿಶ್ವಾಮಿತ್ರರನ್ನು ಹಿಂಬಾಲಿಸಿ ನಡೆಯುತ್ತಿರುವ ಬಾಲರಾಮನ ದರ್ಶನ. ಮಿಂಚಿನಂತೆ ಕಾಣಿಸಿಕೊಂಡು ಮಾಯವಾದ ಆ ದಿವ್ಯ ಸುಂದರಮೂರ್ತಿಯನ್ನು ತ್ಯಾಗರಾಜರು ಶರ ಕೋದಂಡಮಂಡಿತನನ್ನಾಗಿ, ವನಮಾಲಾಲಂಕೃತನನ್ನಾಗಿ, ಬುಧ ಜನಮನ್ಯನನ್ನಾಗಿ ಮತ್ತು ಸಕಲ ವೇದಸಾರನನ್ನಾಗಿ ತಾವು ಸಂದರ್ಶಿಸಿದ ಆ ದೇವದೇವನ ಭವ್ಯ ಚಿತ್ರಣವೇ ಸರಸಂಪದ ರಜಿತವಾದ ಅಠಾಣರಾಗದ ರಚನೆ 'ಏಲ ನೀ ದಯರಾದ'.

ಶ್ರೀರಾಮಚಂದ್ರನ ಅಚಿಂತ್ಯಾದ್ಭುತ ಶಕ್ತಿಗಳು, ಶೌರ್ಯ ವೀರ್ಯ ಪ್ರತಾಪಗಳು ಅನಂತಾನಂತ ಮಹಿಮೆಗಳು ಅವರ್ಣನೀಯ. ತಾಟಕಾ ಸಂಹಾರ, ಯಜ್ಞರಕ್ಷಣೆ. ಅಹಲ್ಯಾ ಶಾಪ ಪರಿಹಾರ, ಧನುರ್ಭಂಗ, ಸಪ್ತತಾಲ ಭಂಜನೆ, ಸಮುದ್ರತರಣ, ರಾವಣ ಕುಂಭಕರ್ಣಾದಿ ಪ್ರಚಂಡ ರಾಕ್ಷಸರ ವಧೆ- ಇವು ಶ್ರೀರಾಮ ಸತ್ವಸಂಪನ್ನತೆಗೆ ಕೆಲವು ನಿದರ್ಶನಗಳು. ಇಂತಿರುವ ಅದ್ವಿತೀಯವಾದ ಶ್ರೀರಾಮನ ಮಹಿಮೆಗಳನ್ನು ಪರಿಭಾವಿಸಿದ ಹರಿಕೇಶನಲ್ಲೂರು ಮುತ್ತಯ್ಯ ಭಾಗವತರು 'ನೀದು ಮಹಿಮೆ ಪೊಗಡ ನಾತರಮಾ?' ಎಂದು ಹಾಡುತ್ತಾರೆ. ಹಂಸಾನಂದಿ ರಾಗದ ಕೃತಿಯಲ್ಲಿ.

ರಾಮ ಭಕ್ತಿಯಿಂದ ಜನ್ಮತರಣೋಪಾಯವನ್ನು ಕಂಡುಕೊಂಡ ಭಕ್ತವರೇಣ್ಯರಲ್ಲಿ ಭದ್ರಾಚಲ ರಾಮದಾಸರು ಪ್ರಮುಖರು. 'ಧೀರುಡೌ ರಾಮದಾಸುನಿಬಂಧ ಮದೀರ್ಚಿನದಿ ವಿನ್ನಾನುರಾ' ಎಂಬ ಮಾತುಗಳಲ್ಲಿ ತ್ಯಾಗರಾಜಸ್ವಾಮಿಗಳು ರಾಮದಾಸರನ್ನು ಗೌರವಪೂರ್ವಕ ಸ್ಮರಿಸಿದ್ದಾರೆ. ರಾಮದಾಸರು ತಮಗೆ ಒದಗಿದ ವಿಪತ್ತಿನಿಂದ ಪಾರುಮಾಡಲು ಶ್ರೀರಾಮನನ್ನು ಬೇಡಿದರು, ಕಾಡಿದರು, ಮೂದಲಿಸಿದರು. ಈ ಎಲ್ಲ ಭಾವಗಳ ಅಂತಃಪ್ರವಾಹರೂಪದಲ್ಲಿ ಹರಿಯುತ್ತಿದ್ದ ಶುದ್ಧ ಭಕ್ತಿಯಿಂದ ತಮ್ಮ ಕೋರಿಕೆಯನ್ನು ಈಡೇರಿಸಿಕೊಂಡರು. ಅವರ ಧನ್ಯಾಸಿರಾಗದ ಕೃತಿ 'ರಾಮದಯ ಜೂಡವೆ' ಹನುಮದ್ವಿಲಾಸ ತಿಪ್ಪಣಾರ್ಯರಿಂದ ರಚಿತವಾಗಿರುವ ರಮಣೀಯವಾದ ಗೇಯಪ್ರಬಂಧ ; ಶ್ರೀಮದ್ರಾಯಣ ಸುಂದರಕಾಂಡ ಅದರ ಕಥಾವಸ್ತು. ಅಶೋಕವನದಲ್ಲಿ ಪರಿಪರಿಯಾದ ಸಂಕಟಗಳಿಗೆ ಒಳಗಾಗಿ ಸೊರಗಿಹೋಗಿದ್ದ ಸೀತಾಮಾತೆಯ ಪರಿತಪ್ತಗಾತ್ರಕ್ಕೆ ರಾಮಕಥಾ ಶ್ರವಣದ ಅಮೃತಸೇಚನೆಯಿಂದ ಚೈತನ್ಯ ತುಂಬುತ್ತಾನೆ. ಶ್ರೀಮದಾಂಜನೇಯಸ್ವಾಮಿ. ಮೇರೆ ಮೀರಿದ ಆನಂದದಿಂದ ತೋಯ್ದು ಹೋದ ಸೀತಾಮಾತೆಯ ಅಂತರಂಗ ತನ್ನ ಮನೋರಮನ ರೂಪ ಲಾವಣ್ಯಗಳ ವಿವರಣೆಯನ್ನು ಮತ್ತೆ ಮತ್ತೇ ಕೇಳಿ ಆನಂದಿಸಲು ಹಾತೊರೆಯುತ್ತದೆ. ಹನುಮಂತನು ನೀಡುವ ಶ್ರೀರಾಮನ ಮಂಗಲವಿಗ್ರಹದ ಚಿತ್ರಣ ಇದು - 'ರಾಮನಿಂಥ ಚೆಲುವ ನಮ್ಮಯ್ಯ' ಶಂಕರಾಭರಣ.

ಶ್ರೀರಾಮಚಂದ್ರನದು ಊಹೆಗೆ ನಿಲುಕದ ಮಹಿಮೆ, ಆತನು ಪರಮಶಿವನಿಗೆ ಪೂಜ್ಯನಾದ ದೈವ. ಅಷ್ಟಾಕ್ಷರಿ ಮತ್ತು ಪಂಚಾಕ್ಷರಿ ಮಂತ್ರಗಳಿಗೆ ಜೀವಪ್ರಾಯಗಳಾದ 'ರ' ಕಾರ 'ಮ'ಕಾರ ವಾಚ್ಯನಾದವನು. 'ಹರಿಹರ ಮಂತ್ರಮುನಕು ಜೀವವರ್ಣಆತ್ಮಕುಡು' ಎಂಬುದಾಗಿ ವರ್ಣಿಸುತ್ತಾ ಭಕ್ತಿಯಿಂದ ಮಾಡಲಾಗುವ ಒಂದು ನಿಮಿಷದ ರಾಮೋಪಾನೆಯೂ ನಿರಂತರ ಸುಖಪ್ರಾಪ್ತಿಗೆ ಸಾಧನವೆಂಬುದಾಗಿ ಸಾರಿ ಹೇಳುತ್ತಾರೆ. ಮೈಸೂರು ವಾಸುದೇವಾಚಾರ್ಯರು 'ನಿಮಿಷಮೈನ ಶ್ರೀರಾಮಾಯನರಾದಾ ಸಾಮ ರಾಗ.

ರಾಮನಾಮವು ಒಂದು ಅಮೃತರಸಧಾರೆ. ಈ ಅಮೃತರಸಪಾನ ಮಾಡಿದವರಿಗೆ ಜನನ - ಮರಣಗಳ ಬಾಧೆಯಿಲ್ಲ., ಶೋಕ - ಮೋಹಗಳ ಪ್ರಸಕ್ತಿಯಿಲ್ಲ, ಶುಕ ಶೌನಕ ಕೌಶಿಕರೇ ಮೊದಲಾದ ಮಹಾಮುನಿಗಳು ರಾಮರಸ ಪಾನ ಮಾಡಿ ಮುಕ್ತಿಪದವನ್ನು ಗಳಿಸಿದರು. ಸರ್ವರೋಗ ನಿವಾರಕವೂ ನಿತ್ಯನಂದದಾಯಕವೂ ಆದ ಈ ಶ್ರೀರಾಮನಾಮವನ್ನು ಜಪಿಸಿ ಚರಿತಾರ್ಥರಾಗಿರಿ ಎಂಬುದು ಅವಧೂರ - ಶಿರೋಮಣಿಗಳಾದ ಸದಾ ಶಿವಬ್ರಹ್ಮೇಂದ್ರರು ಜಗತ್ತಿಗೆ ನೀಡಿರುವ ಉಪದೇಶ 'ಪಿಬರೇ ರಾಮರಸಂ'.

**ರಾಮನೊಳಗಿನ ಸಂಗೀತಾನುಭೂತಿ**

ವಿನಮಮುನಮು ಕೌಶಿಕುನಿ ಕೃತಿಯಲ್ಲಿ ತ್ಯಾಗರಾಜರು ರಘುಕುಲ ರಾಮನ ವೈಭೋಗವನ್ನೆಂತು ಬಣ್ಣಿಸಲಿ ಎಂದು ಕೊಂಡಾಡುತ್ತಾರೆ. ತ್ಯಾಗರಾಜರು, ಪುರಂದರದಾಸರೂ ಸೇರಿದಂತೆ ಹಲವು ಮಹನೀಯರು ಪ್ರಭು ಶ್ರೀರಾಮನ ವರ್ಣನೆಯನ್ನು ತಮ್ಮ ಕೃತಿಗಳಲ್ಲಿ ಮಾಡಿದ್ದಾರೆ. ರಾಮ ನಾಮಾಮೃತವೇ ಸಂಗೀತ ಎನ್ನುವಷ್ಟರ ಮಟ್ಟಿಗೆ ಬೆಳೆದು ಬಂದಿದೆ.

ಭಾರತೀಯ ಸಂಸ್ಕೃತಿಯನ್ನು ಪರಿಚಯಿಸುವ ಅನೇಕ ಪ್ರಕಾರಗಳಲ್ಲಿ ಸಂಗೀತ ಅತ್ಯಂತ ಪ್ರಮುಖವಾದದ್ದು. ಸಂಗೀತ ಕೇವಲ ಒಂದು ಸಾಧಾರಣಾ ವಿದ್ಯೆ ಆಗದೆ. ದೈವಿಕ ಅಥವಾ ಆಧ್ಯಾತ್ಮಿಕ ಸಂಬಂಧದ ವಿದ್ಯೆಯಾಗಿದೆ. ಈ ಆಧ್ಯಾತ್ಮಿಕ ಮೌಲ್ಯಗಳೇ ನಮ್ಮ ಸಂಸ್ಕೃತಿಯ ಹೃದಯವೂ ಆಗಿದೆ. ನಮ್ಮ ಆಧ್ಯಾತ್ಮವನ್ನು ಪರಿಚಯಿಸುವ ಪುರಾತನ ಪ್ರಥಮ ಸಾಹಿತ್ಯ ವೇದಗಳಾಗಿದ್ದು, ಅಂತಹ ಸಾಮವೇದ ಉಮವೇದವೇ ಸಂಗೀತಕ್ಕೆ ಕಾರಣವಾಗಿದೆ. ಈ ಎಲ್ಲಾ ಕಾರಣಗಳಿಂದ ವೇದ ಮತ್ತು ನಾದವೆರಡೂ ಆಧ್ಯಾತ್ಮದ ಸಾಧನೆಗೆ ಸಹಾಯವಾಗಿದೆ. ಸಂಗೀತ ಮನಸ್ಸಿಗೆ ಮುದವನ್ನು, ಬುದ್ಧಿಗೆ ಪ್ರಚೋದನೆಯನ್ನು, ಹೃದಯಕ್ಕೆ ಸಾಂತ್ವನವನ್ನು ನೀಡುತ್ತಾ ಬದುಕಿಗೆ ಅಗತ್ಯವಾದ ಶಾಂತಿ, ನೆಮ್ಮದಿಯನ್ನು ನೀಡುತ್ತವೆ.

ಊಂಛವೃತ್ತಿ - ಅಧ್ಯಾಯನ, ಅಧ್ಯಾಪನ ಮತ್ತು ತತ್ತ್ವಜ್ಞಾನದ ಚಿಂತನೆಯ ಮೂಲಕ ಸಮಾಜವನ್ನು ತಿದ್ದಿ ಮಹದುಪಕಾರ ಮಾಡಿದನು. ಸ್ವತಃ ಎಂಬುದನ್ನು ತಿಳಿಯದ ತ್ಯಾಗರಾಜರು ತಮಗೆ ಬಂದ ಎಲ್ಲ ಶ್ರೀಮಂತಿಕೆಯನ್ನು ತಿರಸ್ಕರಿಸಿ 'ಶ್ರೀರಾಮ ಸೇವಾ ಸನ್ನಿಧಿ ಸುಖಮಾ' ಎಂದರು.

ವಿಶ್ವಾಮಿತ್ರರ ಸೂಚನೆಯ ಮೇರೆಗೆ ರಾಮನು ಮಿಥಿಲಾ ನಗರಿಗೆ ದೋಣಿಯಲ್ಲಿ ಪಯಣಿಸುತ್ತಾನೆ. ಆಗ ನದಿಯ ನೀರು ದೋಣಿಯಲ್ಲಿ ತುಂಬಿಕೊಳ್ಳುತ್ತದೆ. ರಾಮನ ಪಾದಸ್ಪರ್ಷದಿಂದ ಪವಿತ್ರತಮವಾದ ಜಲವನ್ನು ದೋಣಿಯ ನಾವಿಕ ವೀಕ್ಷಿಸುತ್ತಾನೆ. ಆ ಜಲವನ್ನು ತನ್ನ ಬೊಗಸೆ ಕೈಗಳಲ್ಲಿ ತೆಗೆದುಕೊಂಡು ರಾಮಚಂದ್ರನ ಪಾದಕಮಲಗಳನ್ನು ತೊಳೆಯುತ್ತಾನೆ. ಧನ್ಯತೆಯನ್ನು ಹೊಂದುತ್ತಾನೆ. ಈ ಇಡೀ ಸನ್ನಿವೇಶವನ್ನು 'ಸುರ ಮುನಿ ವರ ಗುಣ ಸಂಸ್ತುತ ರಾಮ । ನಾವಿಕ ಧಾವಿತ ಮೃದು ಪದ ರಾಮ॥' ಎಂದು ವರ್ಣಿಸಲಾಗಿದೆ. ಶ್ರೀ ರಾಮಚಂದ್ರನೋ ದೇವಗಣ, ಋಷಿಗಳಿಂದಲೂ ಪೂಜಿಸಲ್ಪಡುತ್ತಿದ್ದಾನೆ ಆತನ ಪಾದಕಮಲಗಳನ್ನು ಅಂಬಿಗ ತೊಳೆಯುತ್ತಿದ್ದಾನೆ ಎಂದರ್ಥ. ರಾಮನ ಗುಣ ವಿಶೇಷಣಗಳನ್ನು ಸಾರುವ ಮತ್ತೊಂದು ಸಾಲುಗಳನ್ನು ನೋಡಿ. 'ಅಗಣಿತ ಗುಣ ಗಣಭೂಷಿತ ರಾಮ! ಅವನೀ ತನಯಾ ಕಾಮಿತ ರಾಮ'. ಹೀಗೆ ರಾಮಾಯಣದ ಪೂರ್ವ ಸಾರವನ್ನು 108 ಶ್ಲೋಕಗಳಲ್ಲಿ ವರ್ಣಿಸಲಾಗಿದೆ.



# ಚಾಂದ್ರಮಾನ ಯುಗಾದಿ

-ಶ್ರೀಮತಿ. ಕೆ.ವಿ. ಪದ್ಮಾವತಿ
99722 22791

ನಿಜಕ್ಕೂ ಈ ಕಲಿಯುಗದ ಆರಂಭ ಒಂದು ವಿಸ್ಮಯವೇ ಸರಿ. ಮಹಾಭಾರತ ಪರ್ವ ಮುಗಿದ ಕೊನೆಯ ದಿನ. ರಾಜ್ಯ, ಕೋಶ, ಉಗ್ರಾಣ, ರಾಜರು, ಸಾಮಂತರು,ಬಂಧು ಪರಿವಾರದವರು, ಆಸೆಗಳು,ಸ್ವಾರ್ಥಗಳು,ಲೋಭಗಳು ಎಲ್ಲವೂ ಪರ್ಯಾವಸನಗೊಂಡ ದಿನ.ಕೃಷ್ಣನೊಬ್ಬನೇ ಒಂಟಿಯಾಗಿ ಮರದ ಕೊಂಬೆಯ ಅಂಚಲ್ಲಿ ಕುಳಿತು ಕೊಳಲು ಊದುತ್ತಿದ್ದಾನೆ ಹಾಗೂ ನುಡಿಸುತ್ತಿದ್ದಾನೆ. ಸುತ್ತಮುತ್ತಲಲ್ಲಿ ಎಲ್ಲೂ ಯಾವ ಗೋವು - ಕರುಗಳೂ ಇರಲಿಲ್ಲ. ಕಿವಿಯಾಣಿಸುವವರು, ತಲೆದೂಗುವವರು ಯಾರು ಇರಲಿಲ್ಲ. ಸ್ತಬ್ದ ಭೂಮಿ, ನಿಶ್ಯಬ್ಧ ಆಕಾಶ, ಎತ್ತ ಬೀಸಬೇಕೆಂದು ತಿಳಿಯದ ಗಾಳಿ, ಶ್ರೀಕೃಷ್ಣ ಆ ವೇಳೆಗಾಗಲೇ ಒಂದು ನಿರ್ಧಾರಕ್ಕೆ ಬಂದು ಬಿಟ್ಟಿದ್ದ.ಈ ಪ್ರಸ್ತುತ ದ್ವಾಪರಯುಗವನ್ನು ಇಲ್ಲಿಗೇ ಮೊಟಕುಗೊಳಿಸೋಣ. ಹಾಗೆಯೇ ಮುಂಬರುವ ಸಕಲ ಜೀವರಾಶಿಗಳಿಗೂ ನವೋಲ್ಲಾಸ ಹುಟ್ಟುವ ಹಾಗೆ ಮತ್ತೊಂದು ಹೊಸ ಯುಗವನ್ನು ಆರಂಭಿಸೋಣ ಎಂದು ನಿರ್ಧರಿಸಿಬಿಟ್ಟಿದ್ದ. ಆಗ ಆರಂಭವಾದದ್ದೇ ಈ ಕಲಿಯುಗ. ಯಾವುದೇ ಬಂದು ಆರಂಭವು ವಿಶೇಷವಾಗಿ ಕಾಣಿಸಬೇಕಾದರೆ ಅದಕ್ಕೆ ಒಂದು ಸುಮೂಹೂರ್ತಬೇಕು. ಅದು ಈ ವಸಂತ ಋತುವಿನ, ಚೈತ್ರ ಮಾಸದ ದಿನ. ಇಲ್ಲಿಂದ ಆರಂಭವಾದ ಈ ದಿನೋತ್ಸವಕ್ಕೆ ಅಥವಾ ಯುಗವೊಂದರ ಆದಿ ಮೂಲಕ್ಕೆ ಆ ಶ್ರೀ ಕೃಷ್ಣ 'ಯುಗಾದಿ' ಎಂದು ನಾಮಕರಣ ಮಾಡಿದ. ಯುಗದ ಆದಿಯಿಂದಲೂ ಜಗದ ಗಾದಿಯ ಮೇಲೆ ಕುಳಿತು ರಾರಾಜಿಸುತ್ತಾ ಇರುವ ಈ ವಿರಾಜಮಾನ ಹಬ್ಬವು ಸದಾ ಹಸಿರು.

## ಯುಗಾದಿಯ ಕಲಾಪಗಳು

ನಮ್ಮ ಹಿಂದೂ ಸಂಪ್ರದಾಯದಲ್ಲಿ ಯುಗಾದಿಗೆ ತನ್ನದೇ ಆದ ವಿಶೇಷವಾದ ಸ್ಥಾನಮಾನಗಳಿವೆ. ವಾಸ್ತವದಲ್ಲಿ, ಯುಗಾದಿಯು ಎಲ್ಲ ಹಬ್ಬಗಳಿಗೂ ಬೇರು. ಚಿಗುರುವ ಪ್ರತಿ ಕನಸುಗಳಿಗೂ ತೇರು.

ಬೆಳಗಿನ ಜಾವ ಬ್ರಾಹ್ಮೀಮುಹೂರ್ತದಲ್ಲಿ, ಅಂದರೆ ಸರಿಸುಮಾರು 4.30 ರ ವೇಳೆಗೆ ಎದ್ದು ತೈಲ ಸ್ನಾನಗಳನ್ನು ಮುಗಿಸಿ, ತುಪ್ಪ ತುಂಬಿದ ಪಾತ್ರೆಯಲ್ಲಿ ನಮ್ಮ ನಮ್ಮ ಮುಖದರ್ಶನ ಮಾಡುವುದು, ಹೊಸಬಟ್ಟೆಗಳನ್ನು ಉಡುವುದು, ಹೆಣ್ಣು ಮಕ್ಕಳಿಂದ ಅರಿಸಿನ-ಕುಂಕುಮ-ಆರತಿಗಳ ವಿನಿಮಯ,ದೇವರಿಗೆ ಪೂಜೆ, ಅಭಿಷೇಕ,ಅಲಂಕಾರ, ನೈವೇದ್ಯ ಮುಂತಾದ ಪುರಾತನ ಪೂಜಾ ವಿಧಿ-ವಿಧಾನಗಳ ಜೊತೆಗೆ ಅತೀ ಪ್ರಾಮುಖ್ಯವಾದ ಒಂದು ಅಂಶವೆಂದರೆ ಪಂಚಾಂಗ ಶ್ರವಣ.

ಆಯಾ ವರ್ಷದ ನಕ್ಷತ್ರಗಳ ಫಲಾಫಲ, ಗ್ರಹಗತಿಗಳ ಫಲಾಫಲ ಹಾಗೂ ಋತುಮಾನಗಳ ಕ್ರಮಬದ್ಧತೆಯ ವಿಶ್ಲೇಷಣೆ ಮುಂತಾದ ಧಾರ್ಮಿಕ ವಿವರಣೆಗಳನ್ನು ಮನಗಂಡು ರೈತಾಪಿ

ಜನಗಳಿಂದ ನಿರಂತರ ಹಸಿರು ಕ್ರಾಂತಿಯನ್ನೇ ಹುಟ್ಟು ಹಾಕುವ ಒಂದು ಪಕ್ಷಿನೋಟವೇ ಈ ಪಂಚಾಂಗ ಶ್ರವಣ.

ಜೀವನವೆಂದರೆ ಏಳು - ಬೀಳು -ಸಹಜ, ಏರು-ಪೇರು ಸಹಜ. ಹೀಗಿರುವಾಗ, ಮನುಷ್ಯ





ನಾದವನು ಸದಾ ಕಾಲ ಸಮ ಚಿತ್ತದಿಂದ, ಸಂಯಮದಿಂದ, ಸಚ್ಚಾರಿತ್ರ್ಯದಿಂದ ಬಾಳುವಂತೆ ಪ್ರೇರೇಪಿಸುವುದೇ ಈ ಯುಗಾದಿಯ ಮೂಲ ಧ್ಯೇಯ ಮತ್ತು ಉದ್ದೇಶ. ಎಲ್ಲ ಸಂತಸಗಳಿಗೂ ಆರಂಭ ಈ ಯುಗಾದಿ. ಹಾಗೆಯೇ, ಎಲ್ಲ ಸಮತ್ವಗಳಿಗೂ ಅಂದರೆ ಸಮಾನತೆಗಳಿಗೂ ಆರಂಭ ಈ ಯುಗಾದಿ.

### ಆರೋಗ್ಯದ ಬುನಾದಿ

ನಮ್ಮ ಸನಾತನ ಭಾರತೀಯ ಪರಂಪರೆಯಲ್ಲಿ ವೇದಗಳಿಗೆ ಎಷ್ಟು ಮಹತ್ವವಿದೆಯೋ,ವೈದ್ಯಕೀಯ ವಿಷಯಗಳಿಗೂ ಅಷ್ಟೇ ಮಹತ್ವವಿದೆ. ನಮ್ಮ ಶಾಸ್ತ್ರ, ಪುರಾಣಗಳಲ್ಲಿ ಅದು ಹೇಗೆ ಮಂತ್ರಗಳ ಉಲ್ಲೇಖವಿದೆಯೋ ಹಾಗೆಯೇ ಔಷಧಗಳ ಉಲ್ಲೇಖವೂ ಇದ್ದೇ ಇದೆ.ಅಂಥಾ ಪ್ರಾಕೃತಿಕ ಔಷಧಗಳಲ್ಲಿ ಅಗ್ರಸ್ಥಾನ ಪಡೆದ ಔಷಧವೆಂದರೆ ಅದು 'ಬೇವು' ಮೇಲ್ನೋಟಕ್ಕೆ 'ಕಹಿ' ಮಾತ್ರ ಎನಿಸಬಲ್ಲ ಬೇವು ತನ್ನೊಳಗಡೆ ದೇಹ, ಮನಸ್ಸುಗಳಿಗೆ ಸಂಬಂಧಿಸಿದ ಅದೆಷ್ಟೋ ಕಹಿಗಳನ್ನು ಹೋಗಲಾಡಿಸಬಲ್ಲದು. ಕೇವಲ ಬೇವಿನ ಮರವನ್ನು ಸೋಕಿದ ಗಾಳಿಯನ್ನು ಸೇವಿಸಿದ ಮಾತ್ರದಿಂದಲೇ ಕನಿಷ್ಠ 37 ಬಗೆಯ ರೋಗಗಳು ವಾಸಿಯಾಗಿರುವ ಉದಾಹರಣೆಗಳಿವೆ.

ಅಂತೆಯೇ, ಬೇವಿನ ಹೂಗಳಿಂದ ತಯಾರಿಸಲ್ಪಟ್ಟ ಚೂರ್ಣಗಳನ್ನು ಹಣೆಗೆ ಹಚ್ಚುವುದರಿಂದ ತಲೆನೋವಿನ ಉಪಶಮನ, ಎದೆಗೆ ಹಚ್ಚುವುದರಿಂದ ಹೃದ್ರೋಗದ ಉಪಶಮನ, ದ್ರವ ರೂಪದಲ್ಲಿ ಸೇವಿಸುವುದರಿಂದ ನರನಾಡಿಗಳ ನೋವಿನ ಉಪ ಶಮನ.ಇಂಥಾ ಅನೇಕ ಉಪಶಮನಗಳ ಮೂಲಾಧಾತುವಾಗಿರುವ ಬೇವಿನ ಜನ್ಮದಿನವೇ ಈ ಯುಗಾದಿಯ ದಿನ.

ಪ್ರತೀ ಆರೋಗ್ಯವಂತರೂ ಸಹ ಯುಗಾದಿಗೆ ಋಣ ಪಟ್ಟಿರಲೇಬೇಕು. ಜಗತ್ತಿನಲ್ಲಿ ವಿಶ್ವ ಆರೋಗ್ಯ ದಿನ ಎಂಬ ಪದ್ಧತಿ ರೂಢಿಯಲ್ಲಿದೆ. ಆದರೆ, ನನ್ನ ಪ್ರಕಾರ ಬೇವನ್ನು ಮತ್ತು ಬೇವು-ಬೆಲ್ಲವನ್ನು ಸೇವಿಸುವ ದಿನವೆಲ್ಲ ವಿಶ್ವಆರೋಗ್ಯ ದಿನವೇ. ಹಾಗಾಗಿ, ಆರೋಗ್ಯ ಯುಗಾದಿ ಮತ್ತು ಯುಗಾದಿಯು ಆರೋಗ್ಯ ಎಲ್ಲರ ಮನೆ-ಮನಗಳಲ್ಲಿ ತುಂಬಿರಲಿ.

### ಬೇವು - ಬೆಲ್ಲದ ಮಹತ್ವ

ಬೇವು - ಬೆಲ್ಲದ ಹಬ್ಬ ನಿಜವಾದ ಅರ್ಥದಲ್ಲಿ ಪ್ರತೀ ಮನುಷ್ಯ ಮನುಷ್ಯನ ನಡುವಿನ ಮನಸ್ಸುಗಳ ಜೀರ್ಣೋದ್ಧಾರದ ಹಬ್ಬ. ಈ ಜೀರ್ಣೋದ್ಧಾರದ ವಿಷಯದಲ್ಲಿ ಒಂದು ಸೂಕ್ಷ್ಮವಿದೆ. 'ಮೊದಲನೆಯ ಸೂಕ್ಷ್ಮ ಜೀರ್ಣ,' ಎರಡನೆಯ ಸೂಕ್ಷ್ಮ ಉದ್ಧಾರ' ಮೇಲ್ನೋಟಕ್ಕೆ ಜೀರ್ಣ ಎಂಬುದು ಸರ್ವೇಸಾಧಾರಣ ಪದವಾದರೂ ಅದು ಯಾವ ರೀತಿಯ ಜೀರ್ಣ, ಯಾವ ಉದ್ಧಾರಕ್ಕಾಗಿ ಜೀರ್ಣ ಎಂಬುದು ಬಹಳ ಮುಖ್ಯ. ಇಂಥಾ ಸಂದರ್ಭದಲ್ಲೇ ಬೇವು - ಬೆಲ್ಲದ ಚಿಕ್ಕ ಚರಿತ್ರೆಯೂ ಇತಿಹಾಸವಾಗುವುದು.

ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ, ಬೌದ್ಧಿಕ ಆರೋಗ್ಯ...ಈ ಮೂರರ ನಿಟ್ಟಿನಲ್ಲೂ ನಾವು ಸ್ವೀಕರಿಸಲೇ ಬೇಕಾದ ಒಂದು ಆಹಾರ ಪದ್ಧತಿಯನ್ನು ನಮ್ಮ ಸಂವತ್ಸರದ ಮೊದಲ ಮೈಲಿಗಲ್ಲಾದ ಯುಗಾದಿಯು ತಂದು ಕೊಟ್ಟಿದೆ. ದುಃಖವನ್ನು ಮರೆಯಲಿಕ್ಕೆ ಬೇವು. ಸಂತೋಷವನ್ನು ನೆನೆಯಲಿಕ್ಕೆ ಬೆಲ್ಲ, ಕೋಪವನ್ನು ಕರಗಿಸಲಿಕ್ಕೆ ಹಸಿಮೆಣಸು, ಭಯದ ನಿವಾರಣೆಗೆ ಉಪ್ಪು, ಐಶ್ವರ್ಯವನ್ನು ಕೊಡಲಿಕ್ಕೆ ಹುಣಸೆ, ಬಣ್ಣವನ್ನು ಬೆಳೆಸಲಿಕ್ಕೆ ಮಾವು!! ಈ ಆರೂ ವಸ್ತುಗಳನ್ನು ಸಮವಾಗಿ ಬೆರೆಸಿ ಪೂರ್ವಾಭಿಮುಖವಾಗಿ ನಿಂತು ಇಷ್ಟದೇವರನ್ನು ನೆನೆದು ಸ್ವೀಕರಿಸಿದರೆ ಸಾಕು, 'ಅಂತರಂಗ - ಅನಂತರಂಗ' ಎರಡೂ ಶುದ್ಧಿಯಾಗಿ ಮನುಷ್ಯ ಮನುಷ್ಯನಾಗೇ ಬಾಳುವ ಒಂದು ವರವನ್ನು ನಮ್ಮೀ ಯುಗಾದಿಯ ವರವಾಗಿ ಕೊಟ್ಟಿದೆ. ಮೂಲತಃ ಬೇವನ್ನು ತಿಂದು ನೋವನ್ನು ಮರೆಯುವ,ಬೆಲ್ಲವನ್ನು ತಿಂದು ಎಲ್ಲವನ್ನೂ ಪಡೆಯುವ ಒಂದು ನಿತ್ಯ ಮನೆಮದ್ದು ಎಲ್ಲ

ರೊಟ್ಟಿಗಿರಲಿ. ಆಗ, ಪ್ರತಿದಿನವೂ ಯುಗಾದಿಯೇ ಆಗುವುದರಲ್ಲಿ ಮೂರನೇ ಮಾತಿಲ್ಲ..

**ಬದುಕಿನ ಸುಸ್ವರ ಅನುಕರುಣಿಸಲಿ**

ದೃಷ್ಟಿ ಇದ್ದ ಹಾಗೆ ಎಂಬುದು ಜನಜನಿತ. ಅಂಥಾ ತನ್ನದೇ ಆದ ದೃಷ್ಟಿಕೋನದಿಂದ ನಾವು ಗಮನಿಸಿದ್ದಾದರೆ ಈ ಪ್ರಪಂಚದ ಸರ್ವ ಸಂಗೀತ ಸೃಷ್ಟಿಯೂ ಪ್ರಕೃತಿಯಿಂದಲೇ ಉಂಟಾಗಿದೆ. ಅಂಥಾ ಪ್ರಕೃತಿಯು ತನ್ನ ಎದೆಯಲ್ಲಿ ನಾದಗಳ ಚಿಗುರನ್ನು ಚಿಗಿತುಗೊಳಿಸಿಕೊಂಡ ದಿನವೇ ಈ ಯುಗಾದಿ. ಷಡ್ಜ ಎಂಬುದು 'ಸ' ಕಾರವಾಗಿದ್ದು ಚಿಗುರು ಮಾವಿನೆಲೆಯ ಅಂಚಿನಲ್ಲಿ ಗೋಚರವಾಗುವುದು / ಋಷಭ ಎಂಬ 'ರಿ' ಕಾರವು ಪೀತವರ್ಣದ ಹೂವುಗಳಲ್ಲಿ ಮಡಿಲು ಹಾಸಿದ್ದು / ಗಾಂಧಾರ ಎಂಬ 'ಗ'ಕಾರವು ವಸಂತ ಹುಣ್ಣಿಮೆಯ ಕಡಲ ಭೋರ್ಗರೆತದಲ್ಲಿ ಕೋಗಿಲೆಯ ಮಾರ್ದನಿಯಲ್ಲಿ ಪ್ರತಿಧ್ವನಿಸಿರುವುದು ಪಂಚಮ ಎಂಬ 'ಪ' ಕಾರವು ಹಸಿರು ಹೂಬನಗಳ ಪ್ರಾಕಾರದಲ್ಲಿ ಪಲ್ಲವಿಸಿದ್ದು /ಧೈವತ ಎಂಬ 'ದ' ಕಾರವು ಧಾರ್ಮಿಕ ಮಂತ್ರೋಪಚ್ಚಾರಗಳ ದಾರಿಯಲ್ಲಿ ಎಡತಾಕಿದ್ದು/ ನಿಶಾದ ಎಂಬ 'ನಿ' ಕಾರವು ನಿರ್ಮಲ ನಿಂಬಕ ದಳದ ರಸಸ್ವಾದವಾಗಿದ್ದು/ ಇಡಿ ಚೈತ್ರಮಾಸವೇ 'ಸರಿಗಮ ಪದನಿ'ಗಳ ಪರ್ವಕಾಲವಾಗಿರುವುದರಲ್ಲಿ ಯಾವ ನಾಲ್ಕನೆಯ ಮಾತೂ ಇಲ್ಲ. ಸರಳವಾಗಿ ಯೋಚಿಸೋಣ.ಇಡೀ ಸಂಗೀತದ ಚರಿತ್ರಾ ಪುಟವೇ ಈ ವಸಂತಮಾಸದಲ್ಲಿದೆ. ಈ ವಸಂತ ಗಾಯನದ ಜೀವಸ್ವರದ ಹೆಸರೇ 'ಯುಗಾದಿ' / ಪ್ರತಿಯೊಬ್ಬರ ಬದುಕಿನಲ್ಲೂ ನಿತ್ಯ ವಸಂತದ,ಪ್ರೇಮ ಕೋಗಿಲೆಗಳು ತಮ್ಮ 'ಕುಹೂ ಕುಹೂ'ಗಳಿಂದ ಹೃದಯಗಳನ್ನು ನಾಡಿನೆಲ್ಲೆಡೆ ಹಸಿರಾಗಿಸಲಿ.

**ಲವಲವಿಕೆ ಈ ಜಗಕೆ**

ಮಾನವ ಜನ್ಮ ದೊಡ್ಡದು. ಅಂತೆಯೇ, ಮಾನವ ಜನ್ಮಕ್ಕೆ ಕಾರಣವಾಗಿರುವ ಪ್ರಕೃತಿಯ ನಿಯಮಗಳೂ ದೊಡ್ಡದು. ನಮ್ಮ ಈ ಪ್ರಕೃತಿಯಲ್ಲಿ ಅದು ಹೇಗೆ ಸೂರ್ಯ,ಚಂದ್ರ, ನಕ್ಷತ್ರ, ಗ್ರಹಗಳು, ಗಾಳಿ, ನೀರು, ಬೆಳಕು ಎಂಬುವೆಲ್ಲ ತುಂಬಿಕೊಂಡಿವೆಯೋ, ಹಾಗೆಯೇ ಮನುಷ್ಯ ಜೀವನದಲ್ಲೂ ಕಾಲ, ವೇಳೆ, ಗಳಿಗೆ, ಸಮಯ, ದಿನ, ತಿಂಗಳು,ವಾರಗಳು, ವರ್ಷ ಮುಂತಾದ ನಿಗದಿತ ಕಾಲಮಾನಗಳಿವೆ. ಇಂಥ ಎಲ್ಲ ರೀತಿಯ ಕಾಲಮಾನಗಳಲ್ಲಿ ಅತಿಶ್ರೇಷ್ಠವಾದ ಕಾಲಮಾನವೆಂದರೆ 'ಸಂವತ್ಸರ', ಕೇವಲ ಒಂದು ಸಂವತ್ಸರದಲ್ಲೇ ಇಡೀ ಪ್ರಕೃತಿಯ ಮತ್ತು ಕಾಲದ ಅಳತೆಗೋಲು ಅಡಗಿದೆ. ಅಂಥಾ ಸಂವತ್ಸರದ ಆರಂಭದ ದಿನವೇ 'ಯುಗಾದಿ' ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಇಲ್ಲಿ ಮರೆಯಬಾರದ ಒಂದು ದೈವ ಸೂಕ್ಷ್ಮ ಏನೆಂದರೆ ಆಯಾ ಸಂವತ್ಸರದ ಮೊಟ್ಟಮೊದಲ ಚೈತ್ರಮಾಸದ ಮೊಟ್ಟಮೊದಲ ಪೌರ್ಣಮಿಯ ನಂತರ ಬರುವ ಪಾಡ್ಯಮಿಯ ದಿನದಂದು, ಸೂರ್ಯೋದಯದ ಕಾಲದಲ್ಲಿ ಅರಳೀಮರ, ತೆಂಗಿನಮರ ಮತ್ತು ಬೇವಿನಮರದ ಬೇರುಗಳಿಗೆ ಒಂದು ಬಟ್ಟಲು ಹಸುವಿನ ಹಾಲು ಒಂದು ಬಟ್ಟಲು ಬಾವಿಯ ನೀರು ಮತ್ತು ಒಂದು ಬಟ್ಟಲು ಜೇನುತುಪ್ಪವನ್ನು ಅರ್ಪಿಸಿ ನಮ್ಮ ಪ್ರಾರ್ಥನೆಗಳನ್ನು ಸಲ್ಲಿಸಿದ್ದಾದರೆ ನೂರಕ್ಕೆ ನೂರರಷ್ಟು ಕೋರಿಕೆಗಳನ್ನು ಈಡೇರುವುದರಲ್ಲಿ ಯಾವ ಸಂಶಯವೂ ಇಲ್ಲ. ಇಂಥ ಒಂದು ಜ್ಯೋತಿಷಿ ಸೂಕ್ಷ್ಮವನ್ನು ಸಹ ಯುಗಾದಿಯು ತಂದು ಕೊಡುತ್ತದೆ ಎಂಬುದು ವಿಶೇಷ. ಈ ಜಗತ್ತಿನ ಮೊಟ್ಟಮೊದಲ ಪಂಚಾಂಗ ಕರ್ತೃವಾದ ಆ ಬ್ರಹ್ಮದೇವನೂ ಈ ಮೇಲಿನ ಪ್ರಾರ್ಥನೆಯನ್ನು ಮಾಡಿದ್ದಾನೆ ಎಂಬುದು ಸತ್ಯ ಇಂಥ ಸತ್ಯವನ್ನು ಪ್ರತಿಯೊಬ್ಬರೂ ರೂಢಿಸಿಕೊಂಡಿದ್ದಾರೆ ಸಕಲ ಇಷ್ಟಾರ್ಥಗಳು ಪುಟ ತಿರುಗಿಸುವುದರೊಳಗೆ ನೆರವೇರುವುದು.

ನಾಸ್ತಿ ಸತ್ಯಾತ್ವರೋ ಧರ್ಮಃ
ಸಂತುಷ್ಟಿರ್ನಾತ್ಮ ಜಾತ್ವರಾ ।
ನಾನ್ನದಾನಾತ್ವರಂ ದಾನಂ
ವಂದನಾನ್ನೋಪಚಾರಕಮ್ ॥

**ಸತ್ಯಕ್ಕಿಂದ ಮಿಗಿಲಾದ ಧರ್ಮವಿಲ್ಲ. ಮಕ್ಕಳಿಗಿಂತ ಮಿಗಿಲಾದ ಆನಂದವಿಲ್ಲ. ಹಸಿದವನಿಗಿತ್ತ ಊಟಕ್ಕಿಂತ ಮಿಗಿಲಾದ ದಾನವಿಲ್ಲ. ಕೈ ಮುಗಿಯುವುದಕ್ಕಿಂತ ಮಿಗಿಲಾದ ಗೌರವ ಸೂಚನೆ ಬೇರೊಂದಿಲ್ಲ.**

# ಭದ್ರಾಚಲ ರಾಮದಾಸರು

– ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ,
97393 88300



ರಾಮಾಯಣ ಕಾಲದಿಂದಲೂ ನಾವು ಶ್ರೀರಾಮನನ್ನು ದೇವರೆಂದು ನಂಬಿರುವೆವು. ಹಾಗೆಯೇ ರಾಮನನ್ನು ಪೂಜಿಸಿ ರಾಮ ನವಮಿಯನ್ನು ಸಂಭ್ರಮದಿಂದ ನಾಡಿನಲ್ಲೆಲ್ಲ ಆಚರಿಸುತ್ತೇವೆ. ನಂಬಿಕೆ ದೇವರ ಮೇಲೆ ಮುಖ್ಯವಾಗಿರಬೇಕು. ಅದೇ ರೀತಿ ರಾಮನು ಭಕ್ತರನ್ನು ಉದ್ಧಾರ ಮಾಡಿರುವ ಎಷ್ಟೋ ಕಥೆಗಳನ್ನು ನಾವು ಕೇಳಿದ್ದೇವೆ. ಅಂಥಹ ಕಥೆಗಳು ಪ್ರಚಾರದಲ್ಲೂ ಇದೆ. ಅಂತಹ ಕಥೆಗಳಲ್ಲಿ ಭದ್ರಾಚಲ ರಾಮದಾಸರ ಕಥೆಯೂ ಒಂದು.

### ಶ್ರೀರಾಮನ ಆಶೀರ್ವಾದ –

ಭದ್ರಾಚಲ ಎಂದರೆ ಭದ್ರ ಎಂಬ ಹೆಸರಿನ ಒಂದು ಪರ್ವತ ಎಂದರ್ಥ. ಈ ಪರ್ವತ ಆಂಧ್ರಪ್ರದೇಶದ ಖಮ್ಮಂ ಜಿಲ್ಲೆಯಲ್ಲಿದೆ. ಅದರ ಪಕ್ಕದಲ್ಲೇ ಗೋದಾವರಿ ನದಿ ಹರಿಯುತ್ತದೆ. ಬ್ರಹ್ಮಾಂಡ ಪುರಾಣದಲ್ಲಿ ಒಂದು ಕತೆ ಇದೆ ಪರ್ವತಗಳ ರಾಜ ಆಮೇರು. ಅವನ ಹೆಂಡತಿ ಮೇನಕೆ. ಬ್ರಹ್ಮನ ವರದಿಂದ ಅವರಿಗೆ ಭದ್ರನೆಂಬ ಮಗ ಹುಟ್ಟಿದ. ಭದ್ರ ಬೆಳೆದು ದೊಡ್ಡವನಾದನು. ಅವನು ಗೋದಾವರಿ ತಟದಲ್ಲಿ ತಪಸ್ಸು ಮಾಡುತ್ತಿದ್ದನು. ಆ ಪ್ರದೇಶಕ್ಕೆ ದಂಡಕಾರಣ್ಯವೆಂಬ ಹೆಸರು. ಶ್ರೀರಾಮನು ಸೀತೆ, ಲಕ್ಷ್ಮಣನೊಂದಿಗೆ ಕಾಡಿಗೆ ಹೊರಟಾಗ ಭದ್ರನು ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಬಂದರು. ಆ ಪರ್ವತದಲ್ಲಿ ಕುಳಿತಾಗ ಮೂವರಿಗೂ ಬಹಳ ಶಾಂತಿ ದೊರೆಯಿತು.ಭದ್ರನ ತಪಸ್ಸು ಈ ಶಾಂತಿ ಸಿಗಲು ಕಾರಣವೆಂದು ರಾಮನಿಗೆ ಅರ್ಥವಾಯಿತು. ಆಗ ಸಂತಸಗೊಂಡ ರಾಮನು ಭದ್ರಾ ಇಲ್ಲಿ ಬಾ ಎಂದು ಕರೆದನು. ಆಗ ರಾಮನು ತಪಸ್ಸಿಗೆ ಕಾರಣ ಕೇಳಿದಾಗ ಭದ್ರನು ನೀವು ಸೀತೆ, ಲಕ್ಷ್ಮಣರೊಡನೆ ಇಲ್ಲಿಯೇ ನೆಲೆಯಾಗಿ ನಿಲ್ಲಬೇಕು. ನನ್ನನ್ನು ನಿಮ್ಮ ಭಕ್ತರನ್ನು ಉದ್ಧಾರ ಮಾಡಬೇಕೆಂದಾಗ ರಾಮನು ಆಗಲಿ ಎಂದು ವರ ಕರುಣಿಸಿದಾಗ ಅವರು ನಿಂತಿದ್ದ ಕಲ್ಲು ಸೀತಾ ರಾಮಲಕ್ಷ್ಮಣರ ಆಕಾರವನ್ನು ತಾಳಿತು. ಭದ್ರ ಎಂದರೆ ಮಂಗಳ ಎಂದರ್ಥ. ಶ್ರೀರಾಮನ ಪಾದ ಪರ್ವತ ಮೆಟ್ಟಿದುದರಿಂದ ಅದಕ್ಕೆ ಭದ್ರಾಚಲವೆಂಬ ಹೆಸರು ಸಾರ್ಥಕವಾಯಿತು.

ಗೋಪನ್ನ - ಅಲ್ಲಿ ನೆಲೆ ಇರುವ ದೇವಾಲಯ ಕಟ್ಟಿಸಿದ ಕೀರ್ತಿ ರಾಮದಾಸರಿಗೆ ಸಲ್ಲುತ್ತದೆ. ಇವರ ನಿಜವಾದ ಹೆಸರು ಗೋಪನ್ನ. ಈ ಕಥೆ ನಡೆದದ್ದು 17 ನೆಯ ಶತಮಾನದ ಮಧ್ಯ ಭಾಗದಲ್ಲಿ.ಭದ್ರಾಚಲ ಗೋಲ್ಕಂಡದ ನವಾಬನಿಗೆ ಸೇರಿತ್ತು. ಆ ಖಮ್ಮಂ ಜಿಲ್ಲೆಯಲ್ಲಿ ನೆಲಕೊಂಡ ಪಲ್ಲಿ ಎಂಬ ಹೆಸರಿನ ಗ್ರಾಮದಲ್ಲಿ ಲಿಂಗನಮಂತ್ರಿ ಶಾಮಮ್ಮ ಎಂಬ ದಂಪತಿಗಳ ಮಗನೇ ಗೋಪನ್ನ. ಗೋಪನ್ನ ಬಹುಬೇಗ ತೆಲುಗು, ಸಂಸ್ಕೃತ ಕಲಿತು ದೊಡ್ಡ ಪಂಡಿತನಾದ.ಅಂದು ರಾಜಭಾಷೆಗಳಾಗಿದ್ದ ಉರ್ದು, ಪರ್ಶಿಯನ್ ಭಾಷೆಗಳಲ್ಲೂ ವಿದ್ವಾಂಸನಾದ ಎಳೆ ವಯಸ್ಸಿನಲ್ಲೇ ಬಹುಭಕ್ತಿ ಇರುವ ಗೋಪನ್ನ ಮಾರುತಿಯ ಗುಡಿಗೆ ಹೋಗಿ ಅಲ್ಲಿ ಸೇವೆ ಮಾಡುತ್ತಿದ್ದ.

ಊರಿನಲ್ಲಿದ್ದ ರಾಮದೇವರ ದೇವಸ್ಥಾನದಲ್ಲಿ ರಾಮೋತ್ಸವ. ಜನ ಸಾಗರದಲ್ಲಿ ಹಬ್ಬದ ಆಚರಣೆಯ ಸಮಯದಲ್ಲಿ ಜನರು ಮಧ್ಯದಲ್ಲಿ ಇರುವ ಮುಸಲ್ಮಾನ ಸಂತನು ದೇವರ ದರ್ಶನಕ್ಕೆ ಹಾತೊರೆಯುತ್ತಿರುವಾಗ ಯಾರೋ ಒಳಗೆ ಬಿಡದ ಸಮಯದಲ್ಲಿ ಗೋಪನ್ನ ನೋಡಿ ಜನರ ಒಪ್ಪಿಗೆ ತೆಗೆದುಕೊಂಡು ಸಂತನನನ್ನು ಒಳಗೆ ಬಿಡಲು ರಾಮನ ಹಾಡಿನಿಂದ ಜನರನ್ನು ರಂಜಿಸಲು ದೇವಸ್ಥಾನದ ಧರ್ಮಾಧಿಕಾರಿ ಸಂತನನ್ನೇ ಸೇರಿಸಿದ್ದಕ್ಕೆ ಅವನನ್ನು ಹೊರಗೆ ಹಾಕಿದರು.ಸಂತನು ಊರ ಹೊರಗೆ ಹೋಗಲು ದೇವರ ಮೂರ್ತಿ ಗಳೂ ಅಲ್ಲಿಂದ ಮಾಯವಾಗಲು ಎಲ್ಲರಿಗೂ ಅಚ್ಚರಿಯಾಯಿತು.



ಗೋಪನ್ನ ಸಂತನನ್ನು ಹುಡುಕಿ ಮತ್ತೆ ಕರೆತರಲು ಆ ಸಂತನು ಕಬೀರದಾಸರು ಎಂದು ಗೊತ್ತಾಗಿ ಶಿಷ್ಯತ್ವ ಪಡೆಯುತ್ತಾನೆ. ಮುಂದೆ ಸಂತನನ್ನು ದೇವಸ್ಥಾನಕ್ಕೆ ಕರೆತರಲು ದೇವರ ವಿಗ್ರಹಗಳು ಮತ್ತೆ ಕಂಡಾಗ ಜನರಿಗೆಲ್ಲ ಅಚ್ಚರಿ ಕಾದಿತ್ತು ಜೀವನದಲ್ಲೇ ಜಿಗುಪ್ಸೆಗೊಂಡ ಗೋಪನ್ನನನ್ನು ಸೋದರಮಾವಂದಿರು ತಮ್ಮ ಮನೆಗೆ ಕರೆದೊಯ್ದಾಗ ಮಾದಣ್ಣನಿಗೆ ವಯಸ್ಸಿಗೆ ಬಂದ ಮಗಳಿದ್ದಳು. ಆಕೆಯನ್ನು ಕೊಟ್ಟು ಗೋಪನ್ನನಿಗೆ ಮದುವೆ ಮಾಡಿ ತಮ್ಮ ನವಾಬರಿಗೆ ಹೇಳಿ ಗೋಪನ್ನನಿಗೆ ಕೆಲಸ ಕೊಡಿಸಿದರು. ಆಗ ಗೋಪನ್ನ ಹೆಂಡತಿಯೊಡನೆ ಖಮ್ಮಂಗೆ ಬಂದರು.

ಗೋಪನ್ನ ಭದ್ರಾಚಲಕ್ಕೆ ಹೋದಾಗ ಭದ್ರಾಚಲದ ರಾಮನ ಕಥೆ ಕೇಳಿ ಅಲ್ಲಿಯ ವಿಗ್ರಹ ಕಾಣುತ್ತಲೇ ಆತನ ಭಕ್ತಿ ಉಕ್ಕಿತು.ಆಗ ಆತನ ಬಾಯಿಯಿಂದ "ದಾಶರಥಿ ಕರುಣಾಪಯೋನಿಧಿ" ಎಂಬ ಕವಿತೆ ಹರಿದು ಬಂದಿತು. ರಾಮಚಂದ್ರ ಮೂರ್ತಿಯನ್ನೇ ತಮ್ಮ ಮನೆ ದೇವರಾಗಿ ಭಾವಿಸಿದನು. ಅಲ್ಲಿನ ರಾಮದೇವರಿಗೆ ನಾಲ್ಕು ಕೈಗಳಿವೆ. ಬಲಗೈಲಿ ಶಂಖ, ಎಡಗೈಲಿ ಚಕ್ರವಿದೆ.ಇಲ್ಲಿನ ರಾಮನನ್ನು ವೈಕುಂಠರಾಮ, ರಾಮ ನಾರಾಯಣ ಎಂಬ ಹೆಸರಿನಿಂದ ಕರೆಯುತ್ತಾರೆ. ಅಲ್ಲಿ ಪೂಜೆ ಅನ್ನದಾನ ಪ್ರತಿದಿನ ನಡೆಯುತ್ತಿತ್ತು. ರಾಮದಾಸರು ಒಮ್ಮೆ ರಾಮ,ಲಕ್ಷ್ಮಣ, ಸೀತೆಯ ಮೂರ್ತಿಗಳು ನಿರಾಭರಣವಾಗಿರುವುದನ್ನು ನೋಡಿ ನಾನ್ಯಾಕೆ ದೇವಸ್ಥಾನವನ್ನು ಅದ್ದೂರಿಯಾಗಿ ನಿರ್ಮಿಸಿ ಬಾರದೆಂದು ಗರ್ಭಗುಡಿ, ಗೋಪುರ, ಕೈಸಾಲೆ, ಮೇಲ್ಕಟ್ಟು ಮಂಟಪ, ರಥ, ಕೊಳ , ಪ್ರಾಕಾರ ಸುಂದರವಾಗಿ, ಭವ್ಯ ವಾಗಿ ಕಲಾಮಯವಾಗಿ ಕಂದಾಯದ ಸಹಾಯದಿಂದ ಕಟ್ಟಿಸಿದರು. ಆ ಕಂದಾಯ ಆರು ಲಕ್ಷ ದುಡ್ಡು ದೇವಸ್ಥಾನಕ್ಕೆ ವೆಚ್ಚ ಮಾಡಿದ್ದರಿಂದ ರಾಮದಾಸರನ್ನು ಸೆರೆಮನೆಗೆ ನವಾಬರು ತಳ್ಳಿ ಕೊಡಬಾರದ ಹಿಂಸೆ ನೀಡಲು 12 ವರ್ಷ ಸೆರೆ ಮನೆಯ ವಾಸದಲ್ಲೂ ರಾಮನಾಮ ಬಿಡದ ರಾಮದಾಸರು ರಾಮನ ಆಶೀರ್ವಾದ ಸಿಗದಿರಲು ಸೀತಮ್ಮನನ್ನು ಮೊರೆ ಹೋದಾಗ ಒಂದು ದಿನ ರಾಮ, ಲಕ್ಷ್ಮಣರು ಬಂದು ಅವರು ದೇವಸ್ಥಾನಕ್ಕೆ ವೆಚ್ಚಮಾಡಿದ ಹಣವನ್ನು ಸಂದಾಯ ಮಾಡಿ ರಾಮದಾಸರನ್ನು ಬಿಡುಗಡೆ ಮಾಡಲು ಹೇಳಿದರು. ನವಾಬರು, ಅವರ ಹಣವನ್ನು ಅವರಿಗೆ ಹಿಂದಿರುಗಿಸಿ ಅವರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಹೋದರು.

ಅವರಿಗೆ ಸಿದ್ಧವಾಗಿದ್ದ ಪೀಠದಲ್ಲಿ ನವಾಬರು ಅಸೀನರಾಗಿಸಿ ತಮ್ಮ ತಪ್ಪನ್ನು ಮನ್ನಿಸುವಂತೆಯೂ ದೇವರು ತಂದೊಡ್ಡಿಸಿದ ಹಣವನ್ನು ನಿಮಗೆ ಒಪ್ಪಿಸುತ್ತೇನೆ. ಸ್ವೀಕರಿಸಿ ಇನ್ನು ಮುಂದೆ ಭದ್ರಾಚಲದ ತಾಲೂಕಿನಿಂದ ಬಂದ ಕಂದಾಯವನ್ನೆಲ್ಲ ನೀವು ನಿಮ್ಮ ಪೂಜೆಗಾಗಿ ವೆಚ್ಚ ಮಾಡಬಹುದು ಎಂದು ವಿನಂತಿಸಿದರು. ರಾಮದಾಸರು ಆ ಹಣವನ್ನು ಮುಟ್ಟಲಿಲ್ಲ ಅವೆಲ್ಲ ಬಂಗಾರದ ನಾಣ್ಯಗಳಾಗಿದ್ದವು. ಅವುಗಳಲ್ಲಿ ಎರಡನ್ನು ಮಾತ್ರ ತೆಗೆದುಕೊಂಡು ನವಾಬರಿಗೆ "ನನ್ನ ಪುಣ್ಯಕ್ಕಿಂತ ನಿನ್ನ ಪುಣ್ಯ ದೊಡ್ಡದು ನನ್ನ ರಾಮಚಂದ್ರ ಮೂರ್ತಿಯನ್ನು ಕಣ್ಣಾರೆ ಕಂಡೆ, ನನಗೆ ಈ ಭಾಗ್ಯ ಇಲ್ಲ ನೀನು ಧನ್ಯ" ಎಂದು ಹೇಳಿದರು.

ರಾಮದಾಸರು ಭದ್ರಾಚಲಕ್ಕೆ ಬರುವ ಸುದ್ದಿ ಕೇಳಿದ ಜನ ಅವರನ್ನು ಇದಿರುಗೊಂಡರು. ರಾಮದಾಸರು ನೇರ ದೇವಸ್ಥಾನಕ್ಕೆ ಹೋಗಿ ಸೀತಾರಾಮ ಲಕ್ಷ್ಮಣರ ವಿಗ್ರಹ ನೋಡಿ ತಮ್ಮ ಗದ್ಗದ ಕಂಠದಲ್ಲಿ " ಈ ಜಗಮಂತಾ ರಾಮಮಯಂ" ಎಂದು ಹಾಡು ಹೇಳಿದರು. ತಾವು ತಂದ ಎರಡು ರಾಮಟಂಕೀ ವರಾಹಗಳನ್ನು ರಾಮಸೀತೆಯ ವಿಗ್ರಹದ ಬಳಿ ಇಟ್ಟರು. ಈಗಲೂ ಆ ನಾಣ್ಯಗಳು ರಾಮಸೀತೆಯರ ವಿಗ್ರಹಗಳನ್ನು ಅಲಂಕರಿಸಿವೆಯೆಂದು ಅರ್ಚಕರು ಅಲ್ಲಿಗೆ ಹೋದ ಭಕ್ತಾದಿಗಳಿಗೆ ತೋರಿಸುತ್ತಾರೆ.

ರಾಮದಾಸರು ತಾನೀಶನು ಕೊಟ್ಟ ಹಣವನ್ನೆಲ್ಲ ರಾಮನ ಪೂಜೆಗಾಗಿ ವೆಚ್ಚ ಮಾಡುತ್ತ ಕಾಲ ಕಳೆದರು ಅವರ ಭಕ್ತಿ ರಾಮಚಂದ್ರನ ಕರುಣೆ ದೇಶದಲ್ಲೆಲ್ಲ ಪ್ರಚಾರವಾಯಿತು. ಆಗಿನಿಂದ ಭದ್ರಾಚಲವು ಬಹುದೊಡ್ಡ ಯಾತ್ರಾ ಸ್ಥಳವಾಗಿದೆ. ಅವರಿಗೆ ಕಾಲುಗಳು ನಡೆದಾಡಲೂ ಆಗದಿರಲು ರಾಮಚಂದ್ರನನ್ನು ದೀನರಾಗಿ ಬೇಡಲು ಅಲ್ಲಿಯೇ ಬಂದು ದರ್ಶನವೀಯುತ್ತಿದ್ದನಂತೆ. ಒಂದು ದಿನ ರಾಮನನ್ನು ನೋಡುತ್ತಲೇ ತಮ್ಮ ಉಸಿರನ್ನು ಎಳೆದರಂತೆ.

ಭದ್ರಾಚಲರಾಮದಾಸರು ಈಗ ಇಲ್ಲವಾದರೂ ಅವರು ಕಟ್ಟಿಸಿದ ಗುಡಿ ಅವರು ಹಾಡಿದ ಕೀರ್ತನೆಗಳು ಅವರ ಹೆಸರನ್ನು ಇಂದಿಗೂ ಉಳಿಸಿವೆ. ಗೋಲ್ಕಂಡ ಕೋಟೆಯಲ್ಲಿ ರಾಮದಾಸರು ಸೆರೆ ಇದ್ದು, ರಾಮ, ಸೀತೆ, ಲಕ್ಷ್ಮಣರ ಪೂಜೆ ಮಾಡುತ್ತಿದ್ದ ಸ್ಥಳವನ್ನು ಇಂದೂ ತೋರಿಸುತ್ತಾರೆ. ಅಲ್ಲಿ ಈಗಲೂ ಪೂಜೆ ನಡೆಯುತ್ತದೆ. ಭಕ್ತ ರಾಮದಾಸರು ಆರಂಭಿಸಿದ ವೈಕುಂಠ ಏಕಾದಶಿ ಮತ್ತು ರಾಮನವಮಿ ಉತ್ಸವಗಳು ಇಂದಿಗೂ ನಡೆದುಕೊಂಡು ಬರುತ್ತಿದೆ.

# ಸೌರಯುಗಾದಿ ಆಚರಣೆ ವೈಶಿಷ್ಟ್ಯ

– ಡಾ॥ಎಚ್.ಸತ್ಯ ನಾರಾಯಣಾಚಾರ್

ಬ್ರಹ್ಮನನ್ನೂ ಬ್ರಹ್ಮಾಂಡವನ್ನೂ ಸೃಷ್ಟಿಸಿದ ಭಗವಂತ ಸೃಷ್ಟಿಯ ಜವಾಬ್ದಾರಿಯನ್ನು ನಾಲ್ಮೋಗ ಬ್ರಹ್ಮನಿಗಿತ್ತ. ದೀರ್ಘಕಾಲ ತಪಗೈದು ಭಗವಚ್ಚೈತನ್ಯವನ್ನು ತನ್ನಲ್ಲಿ ತುಂಬಿಸಿಕೊಂಡ ಬ್ರಹ್ಮನು ಮಾನವ ಸೃಷ್ಟಿಯನ್ನು ಆರಂಭಿಸಿದ ದಿನವೇ ಚೈತ್ರಶುಕ್ಲಪ್ರತಿಪತ್.

ಸೃಷ್ಟಿಯ ಆದಿಯ ದಿನವನ್ನು ಯುಗಾದಿಯೆನ್ನುತ್ತೇವೆ. ಅಂದಿನ ಚೈತ್ರ ಶುಕ್ಲಪ್ರತಿ ಪದೆಯೆಂದೇ ಮೇಷ ಮಾಸದ ಮೊದಲ ದಿನವೂ ಆಗಿತ್ತು. ಹಾಗಾಗಿ ಸೌರಮಾನದಂತೆ ಮೇಷಮಾಸದ ಮೊದಲ ದಿನ (ಮೇಷಸಂಕ್ರಮಣದ ಮರುದಿನ) ಯುಗಾದಿಯಾದರೆ ಚಾಂದ್ರ ಮಾನದಂತೆ ಚೈತ್ರಶುಕ್ಲ ಪ್ರತಿಪದೆಯಂದು ಯುಗಾದಿ.

ಸೂರ್ಯನ ಚಲನೆಗೆ ಅನುಗುಣವಾಗಿ ಲೆಕ್ಕಾಚಾರ ಸೌರಮಾನ. ಚಂದ್ರನ ಗತಿಯನ್ನು ಅನುಸರಿಸಿ ಚಾಂದ್ರಮಾನ.

ಸೌರವರ್ಷ ಕರಾರುವಕ್ಕಾಗಿ ಮುನ್ನೂರ ಅರವತ್ತೈದುಕಾಲು (365. 25) ದಿನಗಳ ಅರ್ಷ. ಸಮೀಚೀನವಾದ ವತ್ಸರ ಎಂಬ ಅರ್ಥದಲ್ಲಿ ಸೌರವರ್ಷಕ್ಕೆ 'ಸಂವತ್ಸರ' ಎಂದು ಹೆಸರು. ಚಾಂದ್ರ ವರ್ಷವನ್ನು ಅನುವತ್ಸರ ಎಂದು ಕರೆದಿದ್ದಾರೆ. ಏಕೆಂದರೆ ಅದು ಅಧಿಕ ಮಾಸದ ಮೂಲಕ ಸೌರ ಸಂವತ್ಸರವನ್ನು ಅನುಸರಿಸಿ ಸಾಗುವ ವರ್ಷ.

ಚಾಂದ್ರವರ್ಷದಲ್ಲಿ (ಚೈತ್ರ ಯುಗಾದಿಯಿಂದ ಚೈತ್ರಾದಿಯತನಕ) ಸುಮಾರು 354 ದಿನಗಳಿರುತ್ತವೆ. ಹೀಗಾಗಿ 33 ತಿಂಗಳಿಗೊಮ್ಮೆ ಮೂವತ್ತು ದಿನಗಳ ಹೆಚ್ಚಿನ ದಿನವ್ಯತ್ಯಾಸ ಸೌರ ಚಂದ್ರಾ ವರ್ಷಗಳಲ್ಲಿ ಉಂಟಾಗುತ್ತದೆ. ಚಾಂದ್ರಮಾಸವು ಅಧಿಕ ಮಾಸವನ್ನು ಹಾಕಿಕೊಂಡು ಸುಮಾರು 384 ದಿನಗಳಲ್ಲಿ ದೀರ್ಘವರ್ಷದ ಮೂಲಕ ಸೌರವರ್ಷವನ್ನು ಅನುಸರಿಸುತ್ತದೆ.

ಸೌರಮಾಸ - ಚಾಂದ್ರಮಾಸಗಳಲ್ಲಿ ಯಾವುದು ಶ್ರೇಷ್ಠ? ಯಾವುದು ಕನಿಷ್ಠ? ಎಂಬ ಚಿಂತನೆಯಿಲ್ಲ. ಎರಡನ್ನೂ ಅನುಭಾವಿಗಳು ಅಂಗೀಕರಿಸಿದ್ದಾರೆ. ಹವ್ಯ - ಕವ್ಯಗಳಲ್ಲಿ ಸೌರಮಾಸವನ್ನು ಅನುಷ್ಠಾನ ಮಾಡುವ ಸಂಪ್ರದಾಯದವರಿಗೆ ಮೇಷ ಸಂಕ್ರಾಂತಿಯ ಮರುದಿನವೇ ಯುಗಾದಿ. ಅಂದೇ ಅವರಿಗೆ ಸಂವತ್ಸರವು ವ್ಯತ್ಯಾಸವಾಗುತ್ತದೆ. ಚಾಂದ್ರಮಾನದ ಅನುಷ್ಠಾನವುಳ್ಳವರಿಗೆ ಚೈತ್ರಶುಕ್ಲಪ್ರತಿ ಪದೆಯೆಂದೇ ಯುಗಾದಿ. ಅಂದಿನ ದಿನ ಅವರು ಸಂವತ್ಸರವನ್ನು ಬದಲಾಯಿಸಿಕೊಳ್ಳುತ್ತಾರೆ. ಇದರಲ್ಲಿ ಯಾವುದೇ ವಿರೋಧವಿಲ್ಲ. ವಿಪರ್ಯಾಸವಿಲ್ಲ. ಒಂದು ಸೌರವರ್ಷ. ಇನ್ನೊಂದು ಚಾಂದ್ರವರ್ಷ.

ಕರಾವಳಿ ಪ್ರದೇಶದ (ಪರಶುರಾಮಕ್ಷೇತ್ರದ) ವಿಪ್ರರಿಗೆ ಸೌರಮಾನದ ಅನುಷ್ಠಾನವು ಸಂಪ್ರದಾಯಾಗತ. ಉಳಿದೆಡೆ ಹೆಚ್ಚಾಗಿ ಚಾಂದ್ರಮಾನದ ಅನುಷ್ಠಾನವಿದೆ.

ಸೌರಯುಗಾದಿಯು ಸಾಮಾನ್ಯವಾಗಿ ಏಪ್ರಿಲ್ ತಿಂಗಳಿನ 14 ಅಥವಾ 15 ನೇ ತಾರೀಖಿನಂದು ಬರುತ್ತದೆ. ಚಾಂದ್ರಯುಗಾದಿಯು ಮಾರ್ಚ್ ತಿಂಗಳ ಮಧ್ಯ ಭಾಗದಿಂದ ಏಪ್ರಿಲ್ ತಿಂಗಳ ಮಧ್ಯಭಾಗದ ಒಳಗಾಗಿ ಯಾವಾಗ ಬೇಕಾದರೂ ಬರಬಹುದು. ಸೌರಯುಗಾದಿಗೂ ಚಾಂದ್ರಯುಗಾದಿಗೂ ಮಧ್ಯೆ ಇರುವ ಅಂತರವು ಅಧಿಕಮಾಸವಿರುವ ವರ್ಷದಲ್ಲಿ ಅತಿ ಕಡಿಮೆಯಿದ್ದು ಕ್ರಮೇಣ 29 ದಿನಗಳ ತನಕವೂ ಹೆಚ್ಚುವುದು.

## ಯುಗಾದಿಯ ಆಚರಣೆ

- ಬೆಳಗುಜಾವದಲ್ಲಿ ಎದ್ದೊಡನೆ ಮುಖ ತೊಳೆದು ಮಂಗಲದ್ರವ್ಯದರ್ಶನ ಮಾಡುವುದು. ಫಲ - ಪುಷ್ಪ - ಕನ್ನಡಿ - ಹೇಮಾಭರಣ - ಕುಂಕುಮದ್ರವ್ಯ - ತಳಿರು-ತೋರಣ - ರಂಗೋಲಿ - ತಾಂಬೂಲ ಇವು ಮಂಗಳ ದ್ರವ್ಯಗಳು.

- ಅಭ್ಯಂಗಸ್ನಾನವನ್ನು ಆಚರಿಸುವುದು.

- ನೂತನವಸ್ತ್ರಾಧಾರಣೆ

- ಪರಮಾನ್ನಾದಿ ಭಕ್ಷ್ಯವನ್ನು ದೇವರಿಗೆ ನಿವೇದಿಸಿ ಮಧುರಭೋಜನವನ್ನು ಮಾಡುವುದು.

- ಪಂಚಾಂಗಪಠನ - ಶ್ರವಣದೊಂದಿಗೆ ವರ್ಷದ ರಾಜ - ಮಂತ್ರಿ ಮುಂತಾದ ಸಂವತ್ಸರಫಲ ಮತ್ತು ಗ್ರಹಸ್ಥಿತಿಯನ್ನು ತಿಳಿಯುವುದು.

**- ಬೇವು ಬೆಲ್ಲಗಳ ಭಕ್ಷಣ.**

ಸೌರವರ್ಷವನ್ನು ಆಚರಿಸುವವರೂ ಕೂಡ ಚೈತ್ರ ಶುಕ್ಲಪ್ರತಿಪದೆಯಂದು ತೈಲಭ್ಯಂಗವನ್ನು ಮಾಡಿಕೊಳ್ಳಬೇಕು. ಇಂದು ಅಭ್ಯಂಗವನ್ನು ಮಾಡದವನಿಗೆ ಅನಿಷ್ಟವೆಂದು ಹೇಳಿದ್ದಾರೆ.

'ವತ್ಸಾರಾದಿ, ಚಾಂದ್ರಯುಗಾದಿ, (ವಸಂತಾದಿ) ಬಲಿ ಪಾಡ್ಯ, ಮತ್ತು ನರಕಚತುರ್ದಶೀ ಈ ನಾಲ್ಕು ದಿನಗಳಲ್ಲಿ ಎಣ್ಣೆ ಹಚ್ಚಿ ಸ್ನಾನ ಮಾಡುವುದು ಶ್ರೇಷ್ಠ.

ಚಾಂದ್ರಪಕ್ಷೀಯರಿಗೆ ವತ್ಸರಾದಿ ಮತ್ತು ವಸಂತಾದಿ ಒಂದೇ ಆಗಿರುತ್ತದೆ. ಸೌರಪಕ್ಷೀಯರಿಗೆ ವತ್ಸರಾದಿ ಎಂದರೆ ಸೌರ ಯುಗಾದಿ. ವಸಂತಾದಿ ಎಂದರೆ ಚಾಂದ್ರಯುಗಾದಿ.



ಜೀವನದಲ್ಲಿ ಒದಗುವ ಸುಖ ದುಃಖಗಳ, ಕಹಿ-ಸಿಹಿಗಳ ಪ್ರತೀಕವೆನಿಸುವ ಬೇವು ಬೆಲ್ಲಗಳನ್ನು ದೇವರಿಗೆ ನಿವೇದಿಸಿ -

ಶತಾಯುರ್ವಜ್ರದೇಹಾಯ
ಸರ್ವಸಂಪತ್ಸಮೃದ್ಧಯೇ।
ಸರ್ವಾರಿಷ್ಟ ವಿನಾಶಾಯ ಗುಡನಿಂಬಕಭಕ್ಷಭಮ್॥

'ಶತಾಯುಷ್ಯದ ಗಟ್ಟಿದೇಹಕ್ಕಾಗಿ, ಸರ್ವಸಂಪತ್ಸಮೃದ್ಧಿಗಾಗಿ, ಸರ್ವಾರಿಷ್ಟನಿವೃತ್ತಿಗಾಗಿ ಬೇವು - ಬೆಲ್ಲಗಳನ್ನು ತಿನ್ನುತ್ತೇನೆ' ಈ ಶ್ಲೋಕದ ಪಠಣದೊಂದಿಗೆ 'ಸುಖ ದುಃಖೇ ಸಮೇ ಕೃತ್ವಾ' ಎಂಬ ಗೀತಾಚಾರ್ಯನ ಯೋಗದ ಅನುಸಂಧಾನದೊಂದಿಗೆ ಬೇವೂ-ಬೆಲ್ಲಗಳನ್ನು ಭಕ್ಷಿಸುತ್ತಾನೆ.

**ವಿಷು ಹಬ್ಬ**

ತುಳುನಾಡಿನಲ್ಲಿ ಬೇವು ಬೆಲ್ಲ ಭಕ್ಷಣದ ಸಂಪ್ರದಾಯವಿಲ್ಲ. ಸೌರಯುಗಾದಿಯನ್ನು 'ವಿಷು' ಎಂದು ಆಚರಿಸಲಾಗುತ್ತದೆ. ಯುಗಾದಿಯ ಹಿಂದಿನ ದಿನ (ಸಂಕ್ರಾಂತಿಯಂದು) ರಾತ್ರಿ ಪೂಜೆಗೆ ಮೊದಲು ದೇವರ ಮುಂದೆ 'ಕಣಿ' ಯನ್ನು ಇಡಲಾಗುತ್ತದೆ. ದೇವರ ಮುಂಭಾಗದಲ್ಲಿ ಅಷ್ಟದಲಪದ್ಮಾಕಾರದ ರಂಗೋಲಿ ಬರೆದು ಅದರ ಮೇಲೆ ಹರಿವಾಣದಲ್ಲಿ ಅಕ್ಕಿಯಿಡಲಾಗುತ್ತದೆ. ಅಕ್ಕಿಯಲ್ಲಿ ತೆಂಗಿನ ಕಾಯಿ, ವೀಳ್ಯೆದೆಲೆ, ಅಡಿಕೆಗಳನ್ನು ವಸಂತ ಕಾಲ ನಾನಾವಿಧ ಕಾಯಿಪಲ್ಲೆ ಫಲಗಳನ್ನು ಇಟ್ಟು ಅದರ ಮೇಲೆ ಪುಷ್ಪಹಾರ ಮತ್ತು ಬಂಗಾರದ ಆಭರಣಗಳನ್ನು ಇಡಲಾಗುತ್ತದೆ. ಅಲ್ಲಿಯೇ ಒಂದು ಕನ್ನಡಿಯನ್ನು ದೇವರಿಗೆ ಬೆನ್ನು ಹಾಕಿ ನೋಡುಗರಿಗೆ ಪ್ರತಿಬಿಂಬ ಕಾಣುವಂತೆ ಇಟ್ಟು ಪಂಚಾಂಗ ಕುಂಕುಮಗಳನ್ನೂ ಒಂದು ದೀಪವನ್ನೂ ಇಡಲಾಗುತ್ತದೆ. ಇದನ್ನೆ ಒಟ್ಟಂದದಲ್ಲಿ 'ಕಣಿ' ಎನ್ನಲಾಗುತ್ತದೆ. ಕಣಿ ಇಟ್ಟ ಮೇಲೆ ರಾತ್ರಿ ಪೂಜೆಯ ಮಂಗಳಾರತಿ.

ಯುಗಾದಿಯಂದು ಬೆಳಿಗ್ಗೆ ಉಷಃಕಾಲದಲ್ಲೆದ್ದು ಮುಖ ತೊಳೆದು ದೇವರಿಗೆ ನಮಿಸಿ ಕಣಿ ದರ್ಶನ ಮಾಡಬೇಕು. ಫಲ- ಧಾನ್ಯ-ಸುವರ್ಣ ದಿನಗಳನ್ನು ನೋಡಿ ದೀಪದ ಬೆಳಕಿನಲ್ಲಿ ಕನ್ನಡಿಯಲ್ಲಿ ಮುಖನೋಡಿ ಕುಂಕುಮವನ್ನು ಹಚ್ಚಿಕೊಂಡು ಮನೆಯಲ್ಲಿರುವ ಹಿರಿಯರಿಗೆ ನಮಿಸಬೇಕು. ಇದು ಯುಗಾದಿಯ ದಿನದ ಮೊದಲ ಆಚರಣೆ. ಬ್ರಾಹ್ಮಣೇತರರೂ ಕೂಡ ಪ್ರಾತಃ ಬೇಗ ಸ್ನಾನ ಮಾಡಿ ಸನಿಹದ ದೇವಸ್ಥಾನ ಇಲ್ಲವೇ ವಿಪ್ರ ಗೃಹಗಳಿಗೆ ಹೋಗಿ ಕಣಿದರ್ಶನ ಮಾಡಿ ಮಂಗಳ ತಿಲಕವಿಟ್ಟುಕೊಂಡು ಬರುತ್ತಾರೆ.

ವಿಪ್ರಗೃಹದಲ್ಲಿ ಮನೆಯ ಸದಸ್ಯರೆಲ್ಲರ ಕಣಿದರ್ಶನವಾದೊಡನೆ ಆ ಕಣಿಯನ್ನು ದೇವರ ಮುಂಭಾಗದಿಂದ ತೆಗೆದು ಮನೆಯ ಹೊರವರಾಂಡದಲ್ಲಿ ಇತರರಿಗೂ ದರ್ಶನಕ್ಕೆ ಅನುಕೂಲವಾಗುವಂತೆ ಇಡಲಾಗುತ್ತದೆ.

ಕಣಿಯನ್ನು ನೋಡುವಾಗ ಈ ಎರಡು ಶ್ಲೋಕಗಳನ್ನು ಹೇಳಿಕೊಂಡು ಮಂಗಳರೂಪಿಯಾದ ಲಕ್ಷ್ಮೀಸಹಿತ ನಾರಾಯಣನನ್ನು ಸ್ಮರಿಸಿಕೊಳ್ಳುವುದು.

ಮಂಗಲಂ ಭಗವಾನ್ ವಿಷ್ಣುಃ ಮಂಗಲಂ ಮಧುಸೂದನ।
ಮಂಗಲಂ ದೇವಕಿಪುತ್ರೋ ಮಂಗಲಂ ಗರುಡಧ್ವಜಃ- ।
ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ಮನೋಽಸ್ತುತೇ ॥

ಮಂಗಲದ್ರವ್ಯದರ್ಶನ (ಕಣಿದರ್ಶನ) ವಾದ ಮೇಲೆ ಹಿರಿಯರಿಗೆ ನಮಿಸಿ ತೈಲಾಭ್ಯಂಗಸ್ನಾನ. ವಸಂತಾದಿಯಲ್ಲಿ ಅಭ್ಯಂಗ ನಡೆಸಿದ್ದರೂ ಸೌರವರ್ಷವನ್ನು ಆಚರಿಸುವವರು

ಸೌರಯುಗಾದಿಯಂದೂ ಕೂಡ ಎಣ್ಣೆ ಹಚ್ಚಿ ಸ್ನಾನಿಸಬೇಕು. "ವತ್ಸರಾದೌ ವಸಂತಾದೌ' ಎಂಬ ನಿರ್ಣಯ ಸಿಂಧು ವಚನ ದಲ್ಲಿ ವತ್ಸರಾದೌ ಎಂಬ ಮಾತು ಈ ಆದೇಶವಿತ್ತಿದೆ. ಭಾನು, ಮಂಗಲ, ಗುರು, ಶುಕ್ರವಾರಗಳಲ್ಲೂ, ಜನ್ಮನಕ್ಷತ್ರಾದಿಗಳಲ್ಲೂ ತೈಲಾಭ್ಯಂಗವು ಪುರುಷರಿಗೆ ನಿಷಿದ್ಧ.ಯುಗಾದಿಯ ದಿನ ನಿಷಿದ್ಧ ನಕ್ಷತ್ರವಾರಗಳಿದ್ದರೂ ನರಕಚತುರ್ದಶಿಯಂದು ಇಂದು ತೈಲಾಭ್ಯಂಗವು ಕರ್ತವ್ಯ.

ಕೆಲವೊಮ್ಮೆ ಸೌರಯುಗಾದಿಯು ಏಕಾದಶಿಯಂದು ಅಥವಾ ದ್ವಾದಶಿಯಂದು ಬರುವುದಿದೆ. ಈ ಸಂದರ್ಭದಲ್ಲಿ ಅಭ್ಯಂಗವು ಬೇಡ. ಏಕೆಂದರೆ ಎಲ್ಲಾ ನಿಯಮಗಳಿಗಿಂತಲೂ ಏಕಾದಶೀವ್ರತ, ದ್ವಾದಶವ್ರತಗಳ ನಿಯಮ ಪ್ರಬಲ. ಏಕಾದಶಿಯಂದು ವಿಷುಯುಗಾದಿ ಬಂದಾಗ ಪರಮಾನ್ನ ನೈವೇದ್ಯ ನೂತನಾ ವಸ್ತ್ರಧಾರಣೆಗಳೂ ದ್ವಾದಶಿಯಂದೇ,ಕಣಿದರ್ಶನ ಮಾತ್ರ ಏಕಾದಶಿಯಂದು.



ಮುಂದೆ ನಿತ್ಯಾನುಷ್ಠಾನವನ್ನು ಮುಗಿಸಿ ನೂತನವಸ್ತ್ರ ಧಾರಣೆ. ಹೊಸ ಬಟ್ಟೆಯನ್ನು ದೇವರಿಗೆ ನಿವೇದಿಸಿ (ದೇವರ ಮುಂದೆ ಮಣೆಯ ಮೇಲಿಟ್ಟು ನಮಿಸುವುದು) 'ಉಪೇಂದ್ರ ಮೂರ್ತಯೇ ನಮಃ' ಎಂದು ಉಪೇಂದ್ರನನ್ನು ಧ್ಯಾನಿಸಿ ಧರಿಸುವುದು. ದೇವರಿಗೂ ಗುರು-ಹಿರಿಯರಿಗೂ ಮತ್ತೊಮ್ಮೆ ವಂದಿಸಿ ಪಂಚಾಂಗ ಶ್ರವಣವನ್ನು ಮಾಡಬೇಕು.

ವಸಂತಕಾಲ ದಾರೆಪೀರೆ, ಚೀನೀಕಾಯಿ, ನೀರುಸೌತೆ ಹಸಿಗೋಡಂಬಿ ಮುಂತಾದ ತರಕಾರಿಗಳಿಂದ ನಿರ್ಮಿಸಿದ ಕಾಯಿಹಾಲಿನ ಪಾಯಸವನ್ನು ದೇವರಿಗೆ ನಿವೇದಿಸಿ ಕಣಿಯಲ್ಲಿಟ್ಟಿದ್ದ ಪಂಚಾಂಗವನ್ನು ತೆರೆದು ವಾಚಿಸಬೇಕು.ಪತ್ನಿ ಪುತ್ರಾದಿಯಾಗಿ ಎಲ್ಲರೂ ಕುಳಿತು ಕೇಳಬೇಕು. ಪಂಚಾಂಗ ಪುಸ್ತಕದ ಆರಂಭದ ಪುಟಗಳಲ್ಲಿ ಬರೆದ ಸಂವತ್ಸರಫಲ, ವರ್ಷದ ರಾಜ, ಮಂತ್ರಿ ಮುಂತಾದ ವಿಷಯಗಳನ್ನು ಓದಿದ ಮೇಲೆ ಹೊಸ ಸಂವತ್ಸರದಲ್ಲಿ ಗ್ರಹಣಗಳು, ಅಧಿಕಮಾಸ, ಗುರು - ಶುಕ್ರಾಸ್ತಗಳು ಮುಂತಾದ ವಿಶೇಷಗಳನ್ನೂ ಗಮನಿಸಬೇಕು. ಕೊನೆಯಲ್ಲಿ ದಿನದ ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳೆಂಬ ಪಂಚ ಅಂಗಗಳನ್ನೂ ಶ್ರವಣ ಮಾಡಬೇಕು.

ಈ ಪಂಚಾಂಗ ಪಠಣವನ್ನು ವಸ್ತ್ರದಾನದಿಂದ ಪೂಜಿಸಲ್ಪಟ್ಟ ಜ್ಯೋತಿರ್ವೇತ್ತನಾದದ ವಿದ್ವಾಂಸನಿಂದ ಮಾಡಿಸಬೇಕೆಂಬ ವಿಧಿಯಿದೆ. 'ಸಂಪೂಜ್ಯೋ ಗಣಕಃ ಫಲಂ ಚ ಶೃಣುಯಾತ್ ತಸ್ಮಾಚ್ಚ ಲಾಭಪ್ರದಮ್"ಜ್ಯೋತಿಷಕನನ್ನು ಪೂಜಿಸಬೇಕು.ಫಲಶ್ರವಣವನ್ನು ಮಾಡಬೇಕು. ಇಲ್ಲಿ ಫಲವೆಂದರೆ ಸಂವತ್ಸರಫಲ. ಹೊರತು ತಮ್ಮ ತಮ್ಮ ರಾಶಿ ನಕ್ಷತ್ರದ ಫಲವಲ್ಲ. ಅದನ್ನುಶ್ರವಣ ಮಾಡಬೇಕೆಂದು ಎಲ್ಲೂ ಹೇಳಿಲ್ಲ.

**ಪಂಚಾಂಗ ಪಠನ ಕ್ರಮ -**

ಜ್ಯೋತಿಷವಿದ್ವಾಂಸರು ಅಲಭ್ಯರಾದಾಗ ಮನೆಯ ಯಜಮಾನ ಗೃಹಸ್ಥನೇ ಪಠಿಸಿ ಪತ್ನೀ ಪುತ್ರರಿಗೆ ಶ್ರವಣ ಮಾಡಿಸುವುದು. ತಾವೇ ಪಂಚಾಂಗಪಠನ ಮಾಡಬೇಕಾಗಿ ಬಂದಾಗ ಇಷ್ಟು ಮಾತ್ರ ಮಾಡಿದರೆ ಸಾಕು.

"ಶುಕ್ಲಾಂಬರಧರ.." ಮತ್ತು "ಸರ್ವಮಂಗಲ ಮಾಂಗಲ್ಯೇ." ಎರಡು ಶ್ಲೋಕಗಳನ್ನು ಪಠಿಸಿರಿ.- ಆದಿತ್ಯಾದಿ ನವಗ್ರಹದೇವತಾಭ್ಯೋ ನಮಃ ಎನ್ನಿರಿ.

- ನೂತನ ಸಂವತ್ಸರಸ್ಯ ಶೋಭನಫಲಪ್ರದತ್ವಸಿ ದ್ಧ್ಯರ್ಥಂ ಕಾಲನಿಯಾಮಕ ಶಿಂಶುಮಾತೃಕ ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ ಸಂವತ್ಸರಫಲ ಪಠನ ಪೂರ್ವಕಂ ಪಂಚಾಂಗ ಪಠನಂ (ಶ್ರವಣಂ) ಅಹಂ ಕರಿಷ್ಯೇ! ಎಂದು ಸಂಕಲ್ಪಿಸಿ

- ಪಂಚಾಂಗ ಪುಸ್ತಕವನ್ನು ತಲೆಗೆ ಆನಿಸಿ ನಮಿಸಿ ಪುಸ್ತಕ ತೆರೆಯಿರಿ.

- ಎರಡು ಅಥವಾ ಮೂರನೇ ಪುಟದಲ್ಲಿ ಸಂಸ್ಕೃತದಲ್ಲಿ 'ಸಂವತ್ಸರಸ್ಯ ಫಲಾನಿ' ಎಂದು ಬರೆದಿರುತ್ತಾರೆ. ಅದು ಸಂಸ್ಕೃತದಲ್ಲಿರುವುದರಿಂದ ಅರ್ಥವಾಗದು. ಅದನ್ನು ಬಿಟ್ಟು ಅದು ಮುಗಿದೊಡನೆ ಆರಂಭವಾಗುವ ಕನ್ನಡದ ಫಲ ಸಾರವನ್ನು ಅಕ್ಷರವನ್ನೂ ಬಿಡದೆ ಓದಿರಿ.

- ಅಂದಿನ ದಿನದ ತಿಥಿ - ವಾರ - ನಕ್ಷತ್ರ - ಯೋಗ- ಕರಣಗಳನ್ನು ಹೇಳಿಬಿಡಿ.

ಪಕ್ಕದ ಪುಟದದಲ್ಲಿ ಗ್ರಹಣದ ಬಗ್ಗೆ ಬರೆದಿರುತ್ತಾರೆ. ಅದನ್ನೂ ಓದಿಬಿಡಿ,. ಸಂಸ್ಕೃತ ಶ್ಲೋಕಗಳಲ್ಲಿರುವ ಫಲಶ್ರುತಿ

ಯನ್ನು ಓದಿ. ಅಲ್ಲಿಯೇ ಬರೆದಿರುವ 'ಲೋಕಾಃ ಸಮಸ್ತಾಃ ಸುಖಿನೋ ಭವಂತು' ಎಂಬ ಶ್ರೇಯಃಪ್ರಾರ್ಥನೆಯೊಂದಿಗೆ 'ಕೃಷ್ಣಾ ರ್ಪಣಮಸ್ತು' ಎನ್ನಿರಿ.

- ಪಂಚಾಂಗ ಪುಸ್ತಕದ ಮೇಲೆ ಮಂತ್ರಾಕ್ಷತೆ ಯನ್ನಿಟ್ಟು ಆರತಿಯೆತ್ತಿರಿ.

- ಆ ಮಂತ್ರಾಕ್ಷತೆಯನ್ನು ತಲೆಗೆ ಹಾಕಿಕೊಂಡು ಉಳಿದವರಿಗೂ ನೀಡಿದಾಗ ಪಂಚಾಂಗ ಪಠಣಕಾರ್ಯ ಮುಗಿಯುತ್ತದೆ.

ವರ್ಷಾದಿಯ ಯುಗಾದಿಯ ಆಚರಣೆಯನ್ನು ಒಂದೇ ಶ್ಲೋಕದಲ್ಲಿ ಹೀಗೆ ಸಂಗ್ರಹಿಸಿದ್ದಾರೆ -

ಪ್ರಪ್ತೇ ನೂತನವತ್ಸರೇ ಪ್ರತಿಮುಖಂ ದೃಷ್ಟ್ವಾ ಶುಭಂ ತೋರಣಂ
ಸ್ನಾನಂ ಮಂಗಲಮಾಚರೇತ್ ದ್ವಿಜವರಾನ್ ಸಂಪೂಜ್ಯ ಭಕ್ತ್ಯಾ ಹರಿಮ್।
ವೃದ್ಧಾಂಶ್ಚೈವ ಗುರೂನ್ ಪ್ರಣಮ್ಯ ಮಹಿಲಾಬಾಲಾನ್ ಸ್ವಯಂ ಭೂಷಿತೋ
ಲಂಕೃತ್ಯಾಂಬರಭೂಷಣೈಶ್ಚಶೃಣುಯಾತ್ ಪುಣ್ಯಂ ವಾರ್ಷಿಕಮ್ ॥

ವರ್ಷಾದಿಯ ಯುಗಾದಿಯಂದು ಕಣಿದರ್ಶನದೊಂದಿಗೆ ಕನ್ನಡಿಯಲ್ಲಿ ಪ್ರತಿ ಮುಖವನ್ನು ನೋಡಿ ಮನೆಯನ್ನು ತಳಿರು ತೋರಣಗಳಿಂದ ಅಲಂಕರಿಸಬೇಕು. ಮಂಗಲ ಸ್ನಾನವನ್ನು ಮಾಡಿ ದ್ವಿಜಶ್ರೇಷ್ಠರನ್ನು ಮುಂದಿಟ್ಟುಕೊಂಡು ಪಾಯಸದ ನೈವೇದ್ಯದೊಂದಿಗೆ ಶ್ರೀಹರಿಯನ್ನು ಪೂಜಿಸಿ ಹಿರಿಯರಿಗೂ, ಗುರುಗಳಿಗೂ ವಂದಿಸಿ.ನೂತನವಸ್ತ್ರ - ಆಭರಣಗಳಿಂದ ಅಲಂಕೃತವಾಗಿ, ಸ್ತ್ರೀಯರಿಗೂ ಮಕ್ಕಳಿಗೂ ನೂತನ ವಸ್ತ್ರಾದಿಗಳನ್ನಿತ್ತು, ಸಂವತ್ಸರಫಲವನ್ನು ಶ್ರವಣ ಮಾಡಬೇಕು.

## ತಿಂಗಳ್ತುದ್ಯ

ತಿಂಗಳೋದಯ' ಎಂಬ ಅರ್ಥದ ತುಳುಶಬ್ಧವಿದು. ತುಳುವಿನಲ್ಲಿ ಮೇಷ ಮೊದಲಾದ ಹನ್ನೆರಡು ತಿಂಗಳುಗಳಿಗೆ ಪ್ರತ್ಯೇಕ ಹೆಸರುಗಳಿವೆ. ಅವೆಂದರೆ

1. ಪಗ್ಗು (ಮೇಷ)
2. ಬೇಶ (ವೃಷಭ)
3. ಕಾರ್ತೆಲ್ (ಮಿಥುನ)
4. ಆಟಿ (ಕರ್ಕಾಟಕ)
5. ಸೋಣ (ಸಿಂಹ )
6. ನಿರ್ನಾಲ (ಕನ್ಯಾ)
7. ಬೊಂತಲ್ (ತುಲಾ)
8. ಜಾರ್ದೆ (ವೃಶ್ಚಿಕ)
9. ಪೆರಾರ್ದೆ(ಧನು)
10. ಪೊನ್ನಿ (ಮಕರ)
11. ಮಾಯಿ (ಕುಂಭ) 12. ಸುಗ್ಗಿ (ಮೀನ)

ಈ ತಿಂಗಳುಗಳ ಮೊದಲ ದಿನಕ್ಕೆ 'ತಿಂಗಳ್ತುದ್ಯ' ಎಂದು ಹೆಸರು. ಮೇಷಸಂ ಕ್ರಮಣದ ಮರುದಿನ ಪಗ್ಗು ತಿಂಗಳ ಮೊದಲ ದಿನ. ಇಂದು ತಿಂಗಳ್ತುದ್ಯ. ಹೀಗೆಯೇ ಎಲ್ಲಾ ಸಂಕ್ರಮಣಗಳ ಮಾರನೇ ದಿನವನ್ನು ತಿಂಗಳ ಉದಯವೆಂಬ ಕಾರಣದಿಂದ ತಿಂಗಳ್ತುದ್ಯ ಎನ್ನಲಾಗಿದೆ. ಈ ದಿನವೂ ಕನ್ಯಾದಾನ, ಯಾತ್ರಾ ಪ್ರಸ್ಥಾನಾದಿಗಳಿಗೆ ಪ್ರಶಸ್ತವಲ್ಲ. ತುಳುನಾಡಿನಲ್ಲಿ ಈ ದಿನ ಧನ- ಧಾನ್ಯಗಳನ್ನು ಕೊಡುವ ಕೊಳ್ಳುವ ವ್ಯವಹಾರ ನಡೆಯುವುದಿಲ್ಲ. ತವರು ಮನೆಗೆ ಬಂದ ಮಗಳನ್ನು ತಿಂಗಳ್ತುದ್ಯ ದಿನ ಭರ್ತೃಗೃಹಕ್ಕೆ ಕಳಿಸಿ ಕೊಡುವುದಿಲ್ಲ. ಶುಕ್ರವಾರ - ಮಂಗಳವಾರಗಳಂದೂ ಲಕ್ಷ್ಮೀರೂಪಿಣಿಯಾದ ಮಗಳನ್ನು ಕಳಿಸಿಕೊಡುವ ಕ್ರಮವಿಲ್ಲ.

## ಲೇಖಕರಿಗೆ ಸೂಚನೆ


**ಧಾರ್ಮಿಕ, ಸಾಂಸ್ಕೃತಿಕ, ವಸ್ತು ವಿಶೇಷಗಳಿಂದ ಭರಿತವಾದ ನಿಮ್ಮ ಸಪ್ತಗಿರಿಗೆ ನೀವು ಲೇಖನ ಬರೆಯಿರಿ ಹಬ್ಬ - ಹರಿದಿನ-ದೇವಾಲಯ ರಥೋತ್ಸವ-ಜಾತ್ರೆ - ಆಚರಣೆ -ಸಂತ ಯತಿಗಳ ಆರಾಧನೆ-ಜಯಂತಿಯ ಬಗ್ಗೆ 300 ಪದಗಳಿಗೆ ಮೀರದ್ದಂತೆ ಬರಹಗಳನ್ನು ಟೈಪ್ ಮಾಡಿ ಅಥವಾ ಬರೆದು -**

kannadasubeditor@gmail.com

**ಇಲ್ಲಿಗೆ ಕಳುಹಿಸಿ. ಪ್ರಕಟಿತ ಲೇಖನಗಳಿಗೆ ಸ್ವಾಮಿ ಪ್ರಸಾದ ರೂಪವಾದ ಗೌರವ ಧನ ನೀಡಲಾಗುವುದು.**

***- ಪ್ರಧಾನ ಸಂಪಾದಕರು***

# ಪುಸ್ತಕಾವಲೋಕನ




**ಪುಸ್ತಕದ ಹೆಸರು :** ಶ್ರೀಮತಿ ಅಂಬಾಬಾಯಿ ವಿರಚಿತ ಶ್ರೀರಾಮ ಕಥಾಮೃತ ಕಾವ್ಯ (ಕುಸುಮ ಷಟ್ಪದಿ)

**ಲೇಖಕರು :** ಡಾ. ಅನಂತಪದ್ಮನಾಭ ರಾವ್

**ದೂರವಾಣಿ ಸಂಖ್ಯೆ :** 94493 80915

**ಪುಟಗಳು :** 677

**ಬೆಲೆ : ರೂ.** 275/-

**ಪ್ರಕಾಶಕರು :** ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಟ್ರಸ್ಟ್ (ರಿ) ಬೆಂಗಳೂರು.

ಹೊಸಗನ್ನಡ ಕಾಲಘಟ್ಟದಲ್ಲಿ ಅಂದರೆ 19 ಮತ್ತು 20 ನೆಯ ಶತಮಾನಗಳಲ್ಲಿ ಹಳೆಯ ಮೈಸೂರು ಪ್ರಾಂತ್ಯದಲ್ಲಿ ದಾಸಕೂಟವು ತನ್ನ ನೆಲೆಯನ್ನು ಕಂಡುಕೊಂಡಿತು. ಬೆಂಗಳೂರು, ದೇವರಾಯನದುರ್ಗ, ಚಿತ್ರದುರ್ಗ ಪ್ರಾಂತ್ಯಗಳಲ್ಲಿ ದಾಸಕೂಟಗಳು ಮರುಹುಟ್ಟು ಪಡೆದವು.

ದಾಸ ಸಾಹಿತ್ಯಕ್ಕೆ ಮಹಿಳೆಯ ಕೊಡುಗೆಯೂ ಇದೆ. ಅದರಲ್ಲೂ ಇತ್ತೀಚಿನ ಕಾಲದಲ್ಲಿ ಮುದ್ದುಮೋಹನದಾಸರಿಂದ ಅಂಕಿತ ಪಡೆದುಕೊಂಡಿರುವ ಮತ್ತೊಂದು ಮೇರು ಪ್ರತಿಭೆ ಎಂದರೆ ಶ್ರೀಮತಿ ಅಂಬಾಬಾಯಿಯವರು, ಇವರು ರಚಿಸಿರುವ ಕೀರ್ತನ ಸಾಹಿತ್ಯಗಾತ್ರದಲ್ಲೂ, ಪಾತ್ರದಲ್ಲೂ, ಮೌಲಿಕವಾಗಿದ್ದು, ಮಹಿಳಾ ಸಾಹಿತ್ಯದಲ್ಲಿ ಉಲ್ಲೇಖನೀಯವಾಗಿದೆ. 'ಗೋಪಾಲ ಕೃಷ್ಣವಿಠಲ'' ಎಂಬ ಅಂಕಿತವನ್ನು ಅಂಬಾಬಾಯಿಯವರು ಪಡೆದು ಹರಿದಾಸರಾದರು. ತೀರ್ಥಯಾತ್ರೆ ಮಾಡುವುದು ಅಂಬಾಬಾಯಿಯವರ ಪ್ರಿಯವಾದ ಸಂಗತಿಯಾಗಿತ್ತು. ದುಷ್ಟ ಮನಸ್ಸಿನ ಕಲ್ಮಶವನ್ನು ಕಳೆದು ಶಿಷ್ಟ ಜನರ ಸಹವಾಸದಲ್ಲಿ ಸೃಷ್ಟಿಕರ್ತನ ಭಜನೆ ಮಾಡುತ್ತ ಕಷ್ಟಗಳನ್ನು ಈಡಾಡಲು ತೀರ್ಥ ಮಾರ್ಗವನ್ನು ಕಂಡುಕೊಂಡರು. ತೀರ್ಥಯಾತ್ರೆಯನ್ನೂ ಅವರು ವಿಜಯಯಾತ್ರೆ ಎಂದೇ ಕರೆಯುತ್ತಿದ್ದರು.

ಅಂಬಾಬಾಯಿಯವರು ರಚಿಸಿರುವ ದೀರ್ಘ ಕೃತಿಗಳಲ್ಲಿ "ಶ್ರೀರಾಮಕಥಾಮೃತವು'' ಒಂದು ಇದು ಹೆಣ್ಣು ಮಕ್ಕಳಿಗಾಗಿಯೇ ರಚಿತವಾದ ಹಾಡುಗಬ್ಬ. ಅಂದಿನ ಕಾಲದಲ್ಲಿ ಪೂಜೆ, ಪುನಸ್ಕಾರ, ಸಂಪ್ರದಾಯ ದೇವರು ಧರ್ಮಗಳಲ್ಲಿ ಉದ್ದೇಶವಾಗಿತ್ತು. 'ಶ್ರೀರಾಮ ಕಥಾಮೃತ' ಒಂದು ದೀರ್ಘಕಾವ್ಯ ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ ಮತ್ತು ಯುದ್ಧಕಾಂಡ - ಈ ವಿಭಾಗ ಕ್ರಮದಲ್ಲಿ 2497 ಕುಸುಮ ಷಟ್ಪದಿಗಳನ್ನು ಕಾವ್ಯ ಒಳಗೊಂಡಿದೆ. ಅಂಬಾಬಾಯಿ ಅವರು ಕಾವ್ಯರಚನೆಯನ್ನು ಪ್ರಾರಂಭಿಸಿದ್ದು ಬಾವ ಸಂವತ್ಸರದ ಮಾರ್ಗಶಿರ ಶುದ್ಧ ಬಿದಿಗೆಯಂದು (8/12/1934) ಅದೇ ಸಂವತ್ಸರದ ಮಾಘ ಶುದ್ಧ ಚತುರ್ದಶಿ (19/2/1935) ಕಾವ್ಯವನ್ನು ಮುಕ್ತಾಯಗೊಳಿಸಿದ್ದಾರೆ. ಎರಡೂವರೆ ತಿಂಗಳ ಅವಧಿಯಲ್ಲಿ ಈ ದೀರ್ಘ ಕಾವ್ಯ ಪೂರ್ಣಗೊಂಡಿದೆ.

ಈ ಕೃತಿಯಲ್ಲಿ ಉದಾತ್ತವಾದ ವಸ್ತು ಸಂವಿಧಾನ, ದೀರ್ಘವಾದ ಕಥಾಚೌಕಟ್ಟು, ಭಾಷೆಯ ಬಳಕೆಯಲ್ಲಿ ಪರಿಪಕ್ವತೆ, ಜನಪ್ರಿಯ ಹಾಡುಗಬ್ಬದ ಶೈಲಿ ಧೀರೋದಾತ್ತ ನಾಯಕ - ನಾಯಕಿಯರಿಂದ ಕೂಡಿದ ವಿಶಾಲವಾದ ಪಾತ್ರ, ಪ್ರಪಂಚ, ವರ್ಣನೆ ಮತ್ತು ಉಪಕತೆಗಳ ನಿರ್ವಹಣೆಯಲ್ಲಿ ಉಚಿತಾನುಚಿತ ವಿವೇಕ,ಚುರುಕಾದ ಸಂಭಾಷಣೆಗಳು, ಅಡೆತಡೆಯಿಲ್ಲದೆ ಸಾಗುವ ಕಥನ ಕಲೆ, ಛಂದಸ್ಸಿನ ನಿರರ್ಗಳತೆ, ಸಾಂದರ್ಭಿಕ ನೀತಿ ನಿರೂಪಣೆ ಇವುಗಳಿಂದ 'ಪರಮ ಕವಿ ಪ್ರಧಾನರ' ಕಾವ್ಯಗಳ ಗುಂಪಿಗೆ ಈ ಕೃತಿಯೂ ಸೇರುತ್ತದೆ. ಇದು 20 ನೇ ಶತಮಾನದ ಪೂರ್ವಾರ್ಧದಲ್ಲಿ ರಚಿತವಾದ ಮಹಾಕಾವ್ಯ "ಮಹಾಕಾವ್ಯಗಳ ಕಾಲ'' ಎಂದೋ ಮುಗಿದು ಹೋಗಿದೆ. ಈ ಕಾಲಕ್ಕೆ ಮಹಾಕಾವ್ಯಗಳು ಪ್ರಸ್ತುತವಲ್ಲ, ಮಹಾಕಾವ್ಯಗಳ ರಚನೆ ಈ ಕಾಲದಲ್ಲಿ ಸಾಧ್ಯವೂ ಇಲ್ಲ, ಸಾಧುವೂ ಅಲ್ಲ ಎಂಬ ಅಭಿಪ್ರಾಯಗಳು ಸಾಹಿತ್ಯವಲಯದಲ್ಲಿ ಪ್ರಚಲಿತವಾಗಿದ್ದ ಕಾಲದಲ್ಲಿ ಈ ಯಾವುದರ ಅರಿವೂ ಇಲ್ಲದೆ ಅವಿದ್ಯಾವಂತಳಾದ ಮಹಿಳೆಯೊಬ್ಬಳು ಬರೆದ ಮಹಾಕೃತಿ ಇದು. 20 ನೇ ಶತಮಾನದ ಕನ್ನಡ ಮಹಾಕಾವ್ಯಗಳ ಪರಂಪರೆಯಲ್ಲಿ ದಾಖಲೆಯೂ ಆಗದೆ ಅಜ್ಞಾತವಾಗಿ ಉಳಿದವರು ಅಂಬಾಬಾಯಿ.20 ನೇ ಶತಮಾನದಲ್ಲಿ ಮಹಿಳೆಯೊಬ್ಬರು ಬರೆದ ಮೊದಲ ರಾಮಾಯಣ ಮಹಾಕಾವ್ಯ "ಶ್ರೀ ರಾಮಕಥಾಮೃತ'' ಎನ್ನಬಹುದು.

- ಪುಸ್ತಕ ಪರಿಚಯ : ಪ್ರಣವ

90356 18076

6

## ಕರ್ನಾಟಕದ ವೈಷ್ಣವ ದೇವಾಲಯಗಳು

# ಸೆಟ್ಟಕೆರೆಯ ಯೋಗಮಾಧವ ದೇವಾಲಯ ಮತ್ತು ಹುಳಿಯಾರಿನ ರಂಗನಾಥ ದೇವಾಲಯ

- ಕೆಂಗೇರಿ ಚಕ್ರಪಾಣಿ

94483 86886



ಸೆಟ್ಟಿಕೆರೆಯು ತುಮಕೂರು ಜಿಲ್ಲೆ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನ ಒಂದು ಗ್ರಾಮ. ಚಿಕ್ಕನಾಯಕನ ಹಳ್ಳಿಯಿಂದ ಎಂಟು ಕಿ.ಮೀ. ದೂರದಲ್ಲಿ ಹಾಗೂ ತಿಪಟೂರಿನಿಂದ ಹದಿನೇಳು ಕಿ.ಮೀ ದೂರದಲ್ಲಿ ಚಿಕ್ಕನಾಯಕನ ಹಳ್ಳಿ-ತಿಪಟೂರು ರಸ್ತೆಯಲ್ಲಿದೆ.

ಸೆಟ್ಟಿಕೆರೆಯು ಹೊಯ್ಸಳರ ಹಾಗೂ ವಿಜಯನಗರ ಕಾಲದಲ್ಲಿ ಸೆಟ್ಟಿಕೆರೆ ಸೀಮೆ ಎಂದು ಪ್ರಸಿದ್ಧಿ ಪಡೆದ ಅಗ್ರಹಾರವಾಗಿತ್ತು. ಪ್ರಸ್ತುತ ಗ್ರಾಮದಲ್ಲಿ ಹೊಯ್ಸಳರ ಕಾಲದ ಯೋಗಾಮಾಧವ ದೇವಾಲಯ ಮತ್ತು ನಂತರ ಕಾಲದ ಕಾಲ ಭೈರವ ಮತ್ತು ಕೆಂಪಮ್ಮ ದೇವಾಲಯಗಳಿವೆ.

ಸೆಟ್ಟಿಕೆರೆ ಗ್ರಾಮದ ಮಧ್ಯದಲ್ಲಿರುವ ಯೋಗಮಾಧವ ದೇವಾಲಯವು ಒಂದು ಸುಂದರವಾದ ಆಲಯವಾಗಿದೆ.ಇಲ್ಲಿ ದೊರೆತಿರುವ ಶಾಸನದಲ್ಲಿ ಯೋಗನಾಥ ಪ್ರಸನ್ನ ಯೋಗನಾಥ, ಶ್ರೀಭರಿತ ಪ್ರಸನ್ನ ಯೋಗನಾಥ ಮುಂತಾದ ಹೆಸರುಗಳಿಂದ ಕರೆದಿರುವ ಯೋಗಮಾಧವ ದೇವಾಲಯವನ್ನು ಹೊಯ್ಸಳ ದೊರೆ ಮೂರನೆಯ ನರಸಿಂಹನ ಸೇನಾಧಿಪತಿ ಗೋಪಾಲ ದಂಡನಾಥನು ಕ್ರಿ.ಶ. 1261 ರಲ್ಲಿ ನಿರ್ಮಿಸಿರುವನು.

ಈ ದೇವಾಲಯವು ತ್ರಿಕೂಟಾಚಲವಾಗಿದ್ದು ಪ್ರಧಾನ ಗರ್ಭಗುಡಿಯಲ್ಲಿ ಯೋಗಮುದ್ರೆಯಲ್ಲಿ ಕುಳಿತಿರುವ ಮಾಧವ ಉತ್ತರ ಗರ್ಭಗುಡಿಯಲ್ಲಿ ಲಕ್ಷ್ಮಿನಾರಾಯಣ ಹಾಗೂ ದಕ್ಷಿಣ ಗರ್ಭಗೃಹದಲ್ಲಿ ಕೊಳಲು ಗೋಪಾಲ ಕೃಷ್ಣರ ಸುಂದರ ಮೂರ್ತಿಗಳಿವೆ.

ಯೋಗಮಾಧವ ದೇವಾಲಯವು ಮೂರು ಗರ್ಭಗೃಹ ಅಂತರಾಳ, ನವರಂಗ ಹಾಗೂ ಚಿಕ್ಕ ಮುಖಮಂಟಪ ಹಾಗೂ ರಾಜ ಗೋಪುರಗಳನ್ನು ಹೊಂದಿರುವ ಪ್ರವೇಶ ಮಂಟಪಗಳನ್ನು ಹೊಂದಿವೆ. ಒಂಬತ್ತು ಅಂಕಣವನ್ನು ಹೊಂದಿರುವ ನವರಂಗದಲ್ಲಿ ತಿರುಗಣೆಯಿಂದ ಮಾಡಿದ ನಾಲ್ಕು ಕಂಬಗಳಿವೆ. ನವರಂಗವು ಒಂಭತ್ತು ಭುವನೇಶ್ವರಿಗಳನ್ನು ಹೊಂದಿದೆ. ನಡುವಿನ ಭುವನೇಶ್ವರಿಯು ವೃತ್ತಾಕಾರದ ಪದ್ಮಗ್ರಳ ನಡುವೆ ಕಮಲವಿದ್ದು ಚಿತ್ತಾಕರ್ಷಕವಾಗಿ ಮೂಡಿ ಬಂದಿದೆ. ನವರಂಗದಲ್ಲಿ ಶ್ರೀಲಕ್ಷ್ಮಿ, ಮಹಿಷಾಸುರ ಮರ್ದಿನಿ ಮತ್ತು ಗಣಪತಿಯ ಹೊಯ್ಸಳರ ಕಾಲದ ಸುಂದರ ಮೂರ್ತಿಗಳಿವೆ.

ಶ್ರೀ ಮಹಾವಿಷ್ಣುವಿನ ಮೂರ್ತಿಶಿಲ್ಪದ ಪ್ರಭೇದಗಳು ಸ್ಥಾನಕ (ನಿಂತಿರುವ ಭಂಗಿ) ಅಸೀನ (ಕುಳಿತಿರುವ ಭಂಗಿ) ಮತ್ತು ಶಯನ (ಪವಡಿಸಿರುವ) ಮೂರ್ತಿಗಳಾಗಿರುತ್ತವೆ. ಪ್ರತಿಯೊಂದು ಭಂಗಿಯಲ್ಲೂ ಯೋಗ, ಭೋಗ ಹಾಗೂ ವೀರ ಎಂಬ ಉಪಪ್ರಭೇದಗಳಿವೆ. ಈ ದೇವಾಲಯದ ಪ್ರಧಾನ ಗರ್ಭಗುಡಿಯಲ್ಲಿ ನಾರಾಯಣನು ಯೋಗಾಸನ ಭಂಗಿಯಲ್ಲಿದ್ದರೆ ಉತ್ತರ ಗರ್ಭಗುಡಿಯಲ್ಲಿ ಸ್ವಾಮಿಯು ಲಕ್ಷ್ಮೀಸಹಿತ ಭೋಗಾಸನದಲ್ಲಿರುವುದು ವಿಶೇಷ.

ಯೋಗ ರೂಪದಲ್ಲಿರುವ ವಿಷ್ಣುವನ್ನು ಯೋಗಿಗಳು, ಋಷಿಗಳೂ ಆರಾಧಿಸುವರೆಂದೂ ಭೋಗರೂಪದಲ್ಲಿರುವ ಮೂರ್ತಿಯನ್ನು ಲೌಕಿಕ ಸುಖಗಳನ್ನು ಬಯಸುವವರು ಆರಾಧಿಸುವರೆಂದು ಶಾಸ್ತ್ರ ಗ್ರಂಥಗಳಲ್ಲಿ ಹೇಳಲಾಗಿದೆ. ಗರುಡ ಪೀಠದ ಮೇಲಿರುವ ಪದ್ಮದಳಗಳ ನಡುವೆ ಯೋಗಾಸನ ಹಾಕಿ ಕುಳಿತಿರುವ ದೇವನು ಚತುರ್ಭುಜನಾಗಿದ್ದು ಕಿರೀಟ ಮಕುಟಧಾರಿಯಾಗಿರುತ್ತಾನೆ. ಕಣ್ಣುಗಳು ತೆರೆದಿದ್ದು, ಮುಖದಲ್ಲಿ ಮಂದಹಾಸವನ್ನು ಸೂಸುತ್ತಿರುವನು. ದೇವನಿಗೆ ತೊಡಿಸಿರುವ ಭುಜಕೀರ್ತಿ, ಕಂಠಾಭರಣ, ತೋಳಬಂದಿ, ಕುಂಡಲಗಳು, ಉದರ ಭಂದ ಇಳೆವಸ್ತ್ರ ನೋಡಲು ಚಿತ್ತಾಕರ್ಷಕವಾಗಿವೆ. ಸುಮಾರು ಒಂಭತ್ತು ಅಡಿ ಎತ್ತರದ ಮೂರ್ತಿಯ ಪ್ರಭಾವಳಿಯಲ್ಲಿ ಆಸೀನ ಭಂಗಿಯಲ್ಲಿರುವ ದಶಾವತಾರದ ಸಣ್ಣ ಶಿಲ್ಪಗಳಿವೆ. ಹೊಯ್ಸಳರ ಕಾಲದ ಶಾಸನೋಕ್ತ ಯೋಗನಾರಾಯಣನ ದೇವಾಲಯವು ಸೆಟ್ಟಿಕೆರೆಯಲ್ಲದೆ ಕರ್ನಾಟಕದ ಬೇರೆಲ್ಲೂ ಕಾಣಬರುವುದಿಲ್ಲ. ಹೀಗಾಗಿ ಅಸೀನ ಯೋಗ - ಭೋಗ ಸಂಗಮವಿರುವ ಈ ದೇವಾಲಯವು ತನ್ನದೇ ಆದ ವಿಶೇಷತೆಯನ್ನು ಪಡೆದಿದೆ.

ಈ ದೇವಾಲಯದ ದಕ್ಷಿಣ ಗರ್ಭಗುಡಿಯಲ್ಲಿ ವೇಣುಗೋಪಾಲನು ಸುಮಾರು ಐದು ಅಡಿಗಳಷ್ಟು ಎತ್ತರವಿದ್ದು ಕೊಳಲು ನುಡಿಸುತ್ತಿರುವನು. ಗೋಪಾಲನ ಬದಿಗಳಲ್ಲಿ ಗೋಪಾಲಕರು, ಗೋವುಗಳು ಸುತ್ತುವರೆದಿರುವರು ಗೋವುಗಳು ಮುರಳಿಯ ನಾದವನ್ನು ತಲೆಯೆತ್ತಿ ತನ್ಮಯವಾಗಿ ಆನಂದಿಸುತ್ತಿರುವಂತೆ ಚಿತ್ರಿಸಲಾಗಿದೆ.

ದೇವಾಲಯವು ಆರು ಹಂತಗಳ ನಕ್ಷತ್ರಾಕಾರದ ಜಗಲಿಯ ಮೇಲೆ ನಿಂತಿದೆ.ಜಗುಲಿಯ ಮೇಲೆ ಪ್ರದಕ್ಷಿಣಾಪಥವನ್ನು ಕಲ್ಪಿಸಲಾಗಿದೆ. ದೇವಾಲಯವು ಅಂದವಾದ ಶಿಖರವನ್ನು ಹೊಂದಿದೆ. ದೇವಾಲಯದ ಹೊರಭಿತ್ತಿಯ ಮೇಲೆ ಯಾವ ಮೂರ್ತಿಗಳೂ ಇರದೆ ಕಿರುಕಂಬಗಳು ಹಾಗೂ ಕಿರು ಶಿಖರಗಳಿಂದ ಅಲಂಕರಿಸಲಾಗಿದೆ.

ಹೊಯ್ಸಳ ದೊರೆ ಮೂರನೆಯ ನರಸಿಂಹನ ಮಹಾಪ್ರಧಾನಿ ಗೋಪಾಲ ದಂಡನಾಯಕನು ತನ್ನ ದೊರೆಯಿಂದ ಆಸಂದಿ ನಾಡ ಹುಳಿಯಾರು ಪ್ರಾಂತ್ಯಕ್ಕೆ ಸೇರುವ ಸೆಟ್ಟಿಕೆರೆ ಮತ್ತು ಹೊಸಕೆರೆ ಪ್ರಾಂತ್ಯವನ್ನು ಪಡೆದು ಸೆಟ್ಟಿಕೆರೆಯನ್ನು ಶ್ರೀ ಭರಿತ ಪ್ರಕಾಶಪುರವೆಂದು ನಾಮಕರಣ ಮಾಡಿ,ಅದನ್ನು ಅಗ್ರಹಾರವಾಗಿ ಪರಿವರ್ತಿಸಿ ಕ್ರಿ.ಶ. 1261 ರಲ್ಲಿ ಯೋಗಮಾಧವ ದೇವಾಲಯವನ್ನು ನಿರ್ಮಿಸಿರುವನು.

ಪ್ರಧಾನಿ ನಾಚರಸ ಮತ್ತು ಸೋಮಲಾದೇವಿಯರ ಪುತ್ರನಾದ ಗೋಪಾಲದಂಡನಾಯಕನ ಪತ್ನಿಯ ಹೆಸರು ಮಾಧವಿ ಹಾಗೂ ಈತನಿಗೆ ಬಾಯಕ್ಕ ಎಂಬ ಪುತ್ರಿಯಿದ್ದಳು.

ಗೋಪಾಲದಂಡನಾಯಕನು ತನ್ನ ದೊರೆಯಿಂದ ಸೆಟ್ಟಿಕೆರೆ ಹಾಗೂ ಸುತ್ತಮುತ್ತಲಿನ ಗ್ರಾಮವನ್ನು ಪಡೆದು ಅದರಲ್ಲಿ ಬರುವ

ಆದಾಯದಲ್ಲಿ ಹತ್ತು ವಿತ್ತಿಗಳನ್ನು ಯೋಗನಾಥ ದೇವಾಲಯದ ನಿರ್ವಹಣೆಗೆ ಬಿಟ್ಟಿದ್ದನು. ದೇವಾಲಯದ ಮೂರ್ತಿಗಳ ನಿತ್ಯ ಪೂಜೆ ಪಕ್ಷ ಪೂಜೆ ಅಮೃತಪಡಿ ಮುಂತಾದ ಸೇವೆಗಳು ನಿರಂತರವಾಗಿ ನಡೆಯಲು ವ್ಯವಸ್ಥೆ ಮಾಡಿರುವ ಸಂಗತಿ ಇಲ್ಲಿ ದೊರೆತಿರುವ ಶಾಸನದಲ್ಲಿ ತಿಳಿಯುತ್ತದೆ.

ಮಾಧವ ದೇವಾಲಯದ ನಂಬಿಗಳಿಗೆ, ಸಿಂಗಾರಿಗಳಿಗೆ, ಪರಿಚಾರಕರಿಗೆ, ಬಾಣಸಿಗರಿಗೆ (ಅಡುಗೆಯವರು) ಅಪ್ಪುಣಿಗಳಿಗೆ (ಮೂರ್ತಿಗಳ ಅಭಿಷೇಕಕ್ಕೆ ನೀರು ಒದಗಿಸುವವರು)ಡವರಿಗರಿಗೆ (ಡೋಲು ಭಾರಿಸುವವರಿಗೆ) ದೇವಾಲಯವನ್ನು ಕಾಯುವ ಅಂಗರಕ್ಷಕರಿಗೆ, ಮಾಲೆಕಾರರಿಗೆ (ಹೂವಾಡಿಗರಿಗೆ) ಕಸಗುಡಿಸುವವರಿಗೆ ಮುಂತಾದ ದೇವಾಲಯ ಸಿಬ್ಬಂದಿಗೆ ಇಷ್ಟಿಷ್ಟೆ ಸಂಬಳವನ್ನು ನಿಗದಿ ಪಡಿಸಿ ಯೋಗ ಮಾಧವ ದೇವಾಲಯದ ಪೂಜಾಕೈಂಕರ್ಯವು ನಿರಂತರವಾಗಿ ನಡೆಯುವ ವ್ಯವಸ್ಥೆ ಮಾಡಿರುವುದು ಇಲ್ಲಿ ದೊರೆತಿರುವ ಶಾಸನದಲ್ಲಿ ತಿಳಿದು ಬರುತ್ತದೆ. ಗೋಪಾಲದಂಡನಾಯಕನು ಈ ದೇವಾಲಯಕ್ಕೆ ಬಿಟ್ಟಿರುವ ತೋಟ, ಹೊಲಗದ್ದೆಗಳು, ದೇವರ ಕೋಣೆಗಳು, ಕಣಜ ಮುಂತಾದವುಗಳ ನಿರ್ವಹಣೆಯ ಜವಾಬ್ದಾರಿಯನ್ನು ತನ್ನ ಸ್ವಂತ ಮಗಳಾದ ಬಾಯಕ್ಕಳಿಗೆ ವಹಿಸಿರುವುದು ಬಹಳ ವಿಶೇಷವಾಗಿರುವುದು.

ಸೆಟ್ಟಿಕೆರೆಯ ಇನ್ನೊಂದು ಬದಿಯಲ್ಲಿ ಕಾಲಭೈರವೇಶ್ವರನ ದೇವಾಲಯವಿದೆ. ದೇವಾಲಯವು ತಗ್ಗಿನಲ್ಲಿದ್ದು ಇಳಿಯಲು ಮೆಟ್ಟಿಲುಗಳಿವೆ. ದೇವಾಲಯದ ಒಂದು ಗರ್ಭಗುಡಿಯಲ್ಲಿ ಶಿವಲಿಂಗವಿದ್ದರೆ ಮತ್ತೊಂದು ಗುಡಿಯಲ್ಲಿ ಭೈರವನ ಮೂರ್ತಿಯಿದೆ. ಶ್ರೀ ಭೈರವೇಶ್ವರನು ಅಪಾರ ಭಕ್ತವೃಂದವನ್ನು ಹೊಂದಿದ್ದು, ಸದಾಕಾಲ ಭಕ್ತಾದಿಗಳಿಂದ ತುಂಬಿರುತ್ತದೆ.ಕಾಲಭೈರವನ ರಥೋತ್ಸವವು ಶಿವರಾತ್ರಿಯ ತರುವಾಯ ಇಪ್ಪತ್ತೊಂದು ದಿನಗಳ ನಂತರ ಬರುವ ಸೋಮವಾರದಂದು ಬಹಳ ವೈಭವವಾಗಿ ಜರುಗುವುದು. ಸೆಟ್ಟಿಕೆರೆಯಲ್ಲಿರುವ ಗ್ರಾಮ ದೇವತೆ ಕೆಂಪಮ್ಮನು ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿರುವಳು. ಯುಗಾದಿಯ ನಂತರ ಮೂರನೆಯ ದಿನದಿಂದ ಆರಂಭವಾಗುವ ಜಾತ್ರಾ ಮಹೋತ್ಸವವು ನಾಲ್ಕು ದಿನಗಳ ಕಾಲ ಬಹಳ ವೈಭವದಿಂದ ಜರುಗುವುದು.

### ಹುಳಿಯಾರಿನ ರಂಗನಾಥ ದೇವಾಲಯ....

ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿರುವ ಹೋಬಳಿ ಕೇಂದ್ರವಾದ ಹುಳಿಯಾರು ಚಿಕ್ಕನಾಯಕನ ಹಳ್ಳಿಯಿಂದ 23 ಕಿ.ಮೀ. ದೂರದಲ್ಲಿ ಶ್ರೀರಂಗಪಟ್ಟಣ - ಬೀದರ್ ರಸ್ತೆಯಲ್ಲಿ ಕಿಬ್ಬನ ಹಳ್ಳಿ ಕ್ರಾಸ್‌ನಿಂದ ಸುಮಾರು 44 ಕಿ.ಮೀ. ದೂರದಲ್ಲಿದೆ.

ಹುಳಿಯಾರಿನ ಬಸ್ ನಿಲ್ದಾಣದ ಅತೀ ಸಮೀಪವಿರುವ ರಂಗನಾಥ ದೇವಾಲಯವು ಮೂಲತಃ ಹೊಯ್ಸಳರ ಕಾಲಕ್ಕೆ ಸೇರಿದ್ದು, ನಂತರ ಕಾಲದಲ್ಲಿ ಸಾಕಷ್ಟು ಬದಲಾವಣೆಗೊಂಡರೂ ಗರ್ಭಗುಡಿಯಲ್ಲಿ ರುವ ಮೂಲಮೂರ್ತಿಯು ಹೊಯ್ಸಳರ ಕಾಲದ ಸುಂದರ ಅನಂತ ಪದ್ಮನಾಭನ ಮೂರ್ತಿಯಾಗಿದೆ.

ಮಹಾವಿಷ್ಣುವು ಶಯನ ಭಂಗಿಯಲ್ಲಿರುವ ಮೂರ್ತಿಗಳಿಗೆ ರಂಗನಾಥ, ಅನಂತಶಯನ,ಶೇಷಶಾಯಿ,ಅನಂತ ನಾರಾಯಣ ಮುಂತಾದ ನಾಮಗಳಿವೆ.

ಹುಳಿಯಾರಿನ ರಂಗನಾಥ ದೇವಾಲಯದಲ್ಲಿರುವ ಅನಂತ ಪದ್ಮನಾಭ ಮೂರ್ತಿಯು ಅತ್ಯಂತ ಮನೋಹರವಾಗಿದ್ದು ನೋಡುಗರನ್ನು ವಿಸ್ಮಯಗೊಳಿಸುತ್ತದೆ. ಏಳು ಹೆಡೆ ಆದಿಶೇಷನ ಮೇಲೆ ಪವಡಿಸಿರುವ



ಸ್ವಾಮಿಯನ್ನು ವರ್ಣಿಸಲು ಪದಗಳು ಸಾಲವು. ದೇವನು ಬಲತೋಳನ್ನು ಮಡಿಸಿ, ಎತ್ತಿದ ಬಲಗೈಯನ್ನು ತಲೆಯ ಕೆಳಗಿರಿಸಿ ಯೋಗನಿದ್ರೆಯಲ್ಲಿ ಅರ್ಧಶಯನ ಭಂಗಿಯಲ್ಲಿದ್ದು, ಎಡಗೈಯನ್ನು ನೀಳವಾಗಿ ಚಾಚಿಕೊಂಡಿರುವನು ಹಾಗೂ ಪ್ರಭಾಚಕ್ರಸಹಿತವಾದ ಸೂಕ್ಷ್ಮಕೆತ್ತನೆಗಳನ್ನು ಹೊಂದಿರುವ ಕಿರೀಟಧಾರಿಯಾದ ದೇವನು ಬಲಗಾಲನ್ನು ನೇರವಾಗಿ ಚಾಚಿಕೊಂಡು ಮತ್ತು ಎಡಗಾಲನ್ನು ಲಂಬವಾಗಿ ಮಡಿಸಿಕೊಂಡು ಸರ್ಪದ ಮೇಲೆ ಪವಡಿಸಿರು ವನು.

ಕೈಕಡಗ, ಭುಜಕೀರ್ತಿ, ಹಾರ, ಕೇಯುರ, ವನಮಾಲೆ, ಉಪವೀತ, ಕಾಲ್ಕಡಗಳನ್ನು ಧರಿಸಿರುವ ಅನಂತಶಯನನ ನಾಭಿಯಿಂದ ಬ್ರಹ್ಮನು ಉದಯಿಸುತ್ತಿರುವನು.

ಸ್ವಾಮಿಯು ಮಲಗಿರುವ ಆಭರಣಗಳು ವಾಲಿದಂತೆ ಬಿಡಿಸಲಾಗಿದೆ. ದೇವನ ತಲೆಯ ಬಳಿ ನಮನ ಭಂಗಿಯಲ್ಲಿರುವ ಶ್ರೀದೇವಿಯ ಮೂರ್ತಿಯಿದ್ದರೆ, ಕಾಲ ಬಳಿ ಭೂದೇವಿಯ ವಿಗ್ರಹವಿರುವುದು. ದೇವನ ಪ್ರಭಾವಳಿಯಲ್ಲಿ ದಶಾವತಾರದ ಶಿಲ್ಪಗಳನ್ನು ಕಂಡರಿಸಲಾಗಿದೆ. ಹಸನ್ಮುಖಿನಾಗಿರುವ ಅನಂತಪದ್ಮನಾಭ ದೇವನು ಅತ್ಯಂತ ಪ್ರಮಾಣಬದ್ಧನಾಗಿರುವನು. ಶ್ರೀದೇವಿ ಭೂದೇವಿ ಸಹಿತನಾಗಿ ಯೋಗ ನಿದ್ರೆಯಲ್ಲಿರುವ ರಂಗನಾಥನನ್ನು ಯೋಗಭೋಗ ಶಯನ ಮೂರ್ತಿಯೆಂದು ಕರೆಯಬಹುದು.

ಹೊಯ್ಸಳರ ಕಾಲದಲ್ಲಿ ದೊರೆತಿರುವ ಶಯನ ಮೂರ್ತಿಗಳಲ್ಲಿಯೇ ಹುಳಿಯಾರಿನ ರಂಗನಾಥ ಮೂರ್ತಿಯು ಅತ್ಯಂತ ಸುಂದರಮೂರ್ತಿಯಾಗಿದೆ.

### ಹೀಗೆ ಬನ್ನಿ........

ಬೆಂಗಳೂರು - ಹೊನ್ನಾವರ ರಸ್ತೆಯಲ್ಲಿ ತಾಲ್ಲೂಕು ಕೇಂದ್ರ ತಿಪಟೂರಿಗೆ ಬಂದು ತಿಪಟೂರು ಚಿಕ್ಕನಾಯಕನಹಳ್ಳಿ ರಸ್ತೆಯಲ್ಲಿ ತಿಪಟೂರಿನಿಂದ ಹದಿನೇಳು ಕಿ.ಮೀ ದೂರದಲ್ಲಿ ಸೆಟ್ಟಿಕೆರೆ ಬರಬಹುದು. ಬೆಂಗಳೂರಿನಿಂದ ಬರುವ ಪ್ರವಾಸಿಗರು ಅದೇ ರಾಜ್ಯ ಹೆದ್ದಾರಿಯಲ್ಲಿ ಕಿಬ್ಬನಹಳ್ಳಿ ಕ್ರಾಸ್‌ಗೆ ಬಂದು ಬಲಕ್ಕೆ ಚಿಕ್ಕನಾಯಕನಹಳ್ಳಿ ರಸ್ತೆ ಕಡೆ ಸಾಗಿದರೆ ಎರಡು ಕಿ.ಮೀ. ದೂರದಲ್ಲಿ ಹಟ್ನ ಎಂಬ ಗ್ರಾಮವು ಸಿಗುವುದು.ಇಲ್ಲಿ ಎಡಕ್ಕೆ ತಿರುಗಿ ಪಂಕಜನ ಹಳ್ಳಿಯ ಮೂಲಕವೂ ಸೆಟ್ಟಿಕೆರೆಯನ್ನು ಸೇರಬಹುದು.

ಸೆಟ್ಟಿಕೆರೆಯ ಯೋಗಮಾಧವನನ್ನು ದರ್ಶಿಸಿ ಚಿಕ್ಕನಾಯಕನ ಹಳ್ಳಿಯ ಮೂಲಕ ಹುಳಿಯಾರಿಗೆ ಬಂದು ರಂಗನಾಥನ ದರ್ಶನವನ್ನು ಪಡೆಯಬಹುದು.

# ಸನಾತನ ವೈದ್ಯಕೀಯದಲ್ಲಿ ಮುಪ್ಪೆ



**- ಮೂಲ : ಡಾ॥ ಸಿ. ಮಧುಸೂದನಶರ್ಮ**
**ಅನುವಾದ - - -**

ನಮ್ಮ ಆರೋಗ್ಯ ಸಂರಕ್ಷಣೆ ಗೋಸುಗ ಪ್ರಕೃತಿ ಮಾತೆಯು ಹಲವು ಆಹಾರ ಪದಾರ್ಥ ಗಳನ್ನೂ, ಹಲವು ಔಷಧೀಯ ಪದಾರ್ಥಗಳನ್ನು ನಮಗೆ ನೀಡಿದ್ದಾಳೆ.ಅದೇ ನಿಟ್ಟಿನಲ್ಲಿ ಬರುವ ತುಂಗಮುಪ್ಪೆ ಅಥವಾ ಮುಪ್ಪೆಯನ್ನು ನಾವು ಹೇಗೆ ವಿವಿಧ ಅನಾರೋಗ್ಯ ಸಮಸ್ಯೆಗಳ ಚಿಕಿತ್ಸೆಯಲ್ಲಿ ಸದ್ವಿನಿ ಯೋಗ ಪಡಿಸಿಕೊಳ್ಳಬಹುದೆಂದು ಪ್ರಸ್ತುತ ತಿಳಿದು ಕೊಳ್ಳೋಣ.

ತುಂಗಮುಪ್ಪೆಯು ಚಿಕ್ಕ ಚಿಕ್ಕ ಎಸಳು ಗಳಿಂದ ಕೂಡಿದ ಹುಲ್ಲು. ಹೊಲಗಳಲ್ಲಿ ಕಳೆ ಕೀಳುವ ಸಮಯದಲ್ಲಿ ಇವುಗಳನ್ನು ಕಿತ್ತಿ ಶೇಖರಿ ಸಿಟ್ಟು ಕೊಳ್ಳ ಬಹುದು.ಇದನ್ನು ನೆಲ ಹುಲ್ಲು, ಗರಿಕೆಯೆಂದು ಸಹಾ ಕರೆಯುತ್ತಾರೆ. ಸಂಸ್ಕೃತದಲ್ಲಿ ಇವುಗಳನ್ನು 'ಮುಸ್ತ' ಎನ್ನುತ್ತಾರೆ.''ಮುಸ್ಯತಿ ಖಂಡಯತಿ ರೋಗಾನ್ ಮುಸ್ತಃ''ಎಂಬ ವಾಕ್ಯದಂತೆ ಇದನ್ನು ರೋಗ ನಿರ್ಮಾಲಕ ಗರಿಕೆಯೆಂದು ಸಹಾ ಕರೆಯು ತ್ತಾರೆ.ಹಾಗೆಯೇ ತಂಪನ್ನುಂಟು ಮಾಡುವ ಗುಣವಿರುವುದರಿಂದ ಹಿಮೆ ಎಂದೂ ಸುಗಂಧ ಭರಿತವಾಗಿರುವುದರಿಂದ ಸುಗಂಧಿ ಎಂದೂ, ನೀರನ್ನು ಕೂಡಿರುವುದರಿಂದ ಜಲ ಮುಪ್ಪೆಯೆಂದೂ ಸಂಸ್ಕೃತ ನಾಮಧೇಯಗಳುಂಟು.

'ಸೈಪರೇಸಿ' ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ಈ ಹುಲ್ಲಿನ ಶಾಸ್ತ್ರೀಯ ನಾಮ 'ಸೈಪ ರಸ್ ರೋಟೆಂಡಸ್ ಇಂಗ್ಲೀಷಿನಲ್ಲಿ 'ನಟ್‌ಗ್ರಾಸ್', ಹಿಂದಿ ಯಲ್ಲಿ ಮೋಥ ಎಂದು ಕರೆಯುತ್ತಾರೆ.

ಒಣಗಿಸಿದ ಮುಪ್ಪೆ, ಮುಪ್ಪೆಯ ಪುಡಿ ಗಳಿಂದ ತಯಾರಾಗುವ ಮೂಲಿಕೆಗಳು ಪ್ರಸ್ತುತ ಆಯುರ್ವೇದ ಔಷಧಾಲಯಗಳಲ್ಲಿ ಲಭಿಸುತ್ತವೆ.

**ಅಧಿಕ ಉಷ್ಣತೆಯನ್ನು ತಗ್ಗಿಸಲು:**

ತುಂಗಮುಪ್ಪೆಯ ಚೂರ್ಣ, ಸುಗಂಧಿಪಾಲ ಚೂರ್ಣ,ಲಾವಂಚ ಚೂರ್ಣ ಒಂದೊಂದು 10 ಗ್ರಾಂನಷ್ಟು ತೆಗೆದುಕೊಂಡು 30 ಗ್ರಾಂ ಕಲ್ಲು ಸಕ್ಕರೆ ಕಲಿಸಿ ಒಂದು ಸೀಸೆಯಲ್ಲಿ ಶೇಖರಿಸಿಟ್ಟುಕೊಂಡು ಮುಂಜಾನೆ - ಸಂಜೆ, ಬಾರಿಗೊಂದು ಅರ್ಧ ಟೀ ಸ್ಪೂನ್‌ನಷ್ಟು ಅಥವಾ ಒಂದು ಟೀ ಸ್ಪೂನ್ ಪುಡಿಯನ್ನು 100 ಮಿ.ಲೀ ನೀರಿನಲ್ಲಿ ಕಲಿಸಿ ಸೇವಿ ಸುತ್ತಿದ್ದರೆ ಅಧಿಕ ದೇಹದುಷ್ಣತೆ ತಗ್ಗುತ್ತದೆ.

ಮಧುಮೇಹಿಗಳು ಈ ಔಷಧ ಸಿದ್ಧ ಪಡಿಸಿ ಕೊಳ್ಳುವಲ್ಲಿ ಕಲ್ಲುಸಕ್ಕರೆ ಬೆರೆಸಿಕೊಳ್ಳದೇ ಕಾಲು ಟೀ ಸ್ಪೂನ್‌ನಿಂದ ಅರ್ಧ ಟೀ ಸ್ಪೂನ್‌ವರೆಗೆ ಬಳಸ ಬಹುದು.

**ಶರೀರದ ದುರ್ವಾಸನೆ ತೊಲಗಲು:**

50 ಗ್ರಾಂನಷ್ಟು ಮುಪ್ಪೆಯ ಚೂರ್ಣ, ಲಾವಂಚದ ಚೂರ್ಣ, ಗಂಧದ ಚೆಕ್ಕೆಯ ಪುಡಿ ಯನ್ನು ಕಲಿಸಿಟ್ಟುಕೊಂಡು ಒಂದು ಬಕೆಟ್ ನೀರಿನಲ್ಲಿ 2-4 ಟೀ ಸ್ಪೂನ್ ಪುಡಿಯನ್ನು ಕಲಿಸಿ ಸ್ನಾನ ಮಾಡುತ್ತಿರಬೇಕು.

**ಸಾಮಾನ್ಯ ಕೆಮ್ಮಿಗೆ :**

20 ಗ್ರಾಂ ತುಂಗಮುಪ್ಪೆಯ ಪುಡಿಗೆ 20 ಗ್ರಾಂ ಕರಿಮೆಣಸಿನ ಪುಡಿ ಕಲಿಸಿಟ್ಟುಕೊಂಡು ದಿನವೂ 2-3 ಬಾರಿ ಬಾರಿಯೊಂದಕ್ಕೆ ಒಂದು ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಿರಬೇಕು.

**ಕೀಲು ನೋವಿಗೆ :**

50 ಗ್ರಾಂ ತುಂಗಮುಪ್ಪೆಯ ಚೂರ್ಣ, 50 ಗ್ರಾಂ ಅಶ್ವಗಂಧ ಚೂರ್ಣ ಕಲಿಸಿಟ್ಟುಕೊಂಡು ಬಾರಿಯೊಂದಕ್ಕೆ ಹಾಕಿ 100 ಮಿ.ಲೀ. ನೀರು ಉಳಿಯುವಂತೆ ಮರಳಿಸಿ, ಇಳಿಸಿ, ಬಿಸಿಯಾರಿದ ನಂತರ ಶೋಧಿಸಿ ಒಂದೆರಡು ಟೀ ಸ್ಪೂನ್ ಜೇನು ಕಲಿಸಿ ಸೇವಿಸುತ್ತಿರಬೇಕು.

**ಅಧಿಕ ದಾಹ ತೀರಿಸಲು :**

ತುಂಗಮುಪ್ಪೆಯ ಪುಡಿ 10 ಗ್ರಾಂ, ಏಲಕ್ಕಿ ಪುಡಿ 10 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ ಬಾರಿ ಯೊಂದಕ್ಕೆ ಒಂದು ಗ್ರಾಂ ಪುಡಿಗೆ ತಕ್ಕಷ್ಟು ಜೇನನ್ನು ಕಲಿಸಿ ಸೇವಿಸುತ್ತಿದ್ದಲ್ಲಿ ಅತಿ ದಾಹ ಸಮಸ್ಯೆಯೊಂದಿಗೆ ಬಾಯಿ ದುರ್ವಾಸನೆ ಸಹಾ ನಿರ್ಮಾಲನಗೊಳ್ಳುತ್ತದೆ.

**ಅಧಿಕ ತೂಕ ಇಳಿಸಲು:**

100 ಗ್ರಾಂ ಮುಪ್ಪೆಯ ಚೂರ್ಣದಲ್ಲಿ ಆಜ್ವಾನವನ್ನು ಕಲಿಸಿ ಕುಟ್ಟಿದ ಪುಡಿ 25 ಗ್ರಾಂ ಕಲಿಸಿಟ್ಟುಕೊಂಡು ಬೆಳಗ್ಗೆ - ಸಾಯಂಕಾಲ ಬಾರಿಗೆ 2-3 ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಅಧಿಕ ದೇಹ ಭಾರವಿಳಿದು , ಅದರಿಂದುಂಟಾಗುವ ಕೀಲುನೋವು ಸಹಾ ಕಡಿಮೆಯಾಗುತ್ತದೆ.

**ಐ.ಬಿ.ಎಸ್ . ಎಂಬ ಸೋಂಕು ಸಮಸ್ಯೆಯ ಶಮನಕ್ಕೆ :**

ದಿನವೂ ಎರಡು ಬಾರಿ ಬಾರಿಯೊಂದಕ್ಕೆ 200 ಮಿ.ಲೀ. ನೀರಿನಲ್ಲಿ 5 ಗ್ರಾಂ ತುಂಗಮುಪ್ಪೆಯ ಪುಡಿ ಸೇರಿಸಿ 100 ಮಿ.ಲೀ. ಉಳಿವಂತೆ ಮರಳಿಸಿ, ಇಳಿಸಿ, ಬಿಸಿಯಾರಿದ ನಂತರ ಶೋಧಿಸಿ ಸೇವಿಸುತ್ತಿದ್ದರೆ ತಿಂದ ತಕ್ಷಣ ಉಂಟಾಗುವ ಸೋಂಕು, ಪ್ರಯಾಣದ ಸಮಯದಲ್ಲಿ ಉಂಟಾಗುವ ಸೋಂಕು, ಮಾನಸಿಕ ಒತ್ತಡ, ಅಲರ್ಜಿಯಿಂದುಂಟಾಗುವ ಸೋಂಕು, ನಮ್ಮ ಶರೀರಕ್ಕೆ ಸರಿಯಾಗದ ಪದಾರ್ಥವನ್ನು ಸೇವಿಸುವುದರಿಂದ ಉಂಟಾಗುವ ಸೋಂಕು, ಹೀಗೆ ವಿವಿಧ ಬಗೆಯ ಸೊಂಕುಗಳನ್ನು ತಡೆಗಟ್ಟಬಹುದು.

**ಚರ್ಮವ್ಯಾಧಿಗೆ :**

ತುಂಗಮುಪ್ಪೆಯ ಪುಡಿ, ಶುದ್ಧವಾದ ಅರಿಶಿನ ಪುಡಿ, ಒಂದೊಂದು 25 ಗ್ರಾಂ ಕಲಿಸಿಟ್ಟುಕೊಂಡು ಮುಂಜಾನೆ ಸಂಜೆ ಬಾರಿಯೊಂದಕ್ಕೆ 1-2 ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಅಥವಾ 50 ಮಿ.ಲೀ. ಉಗುರು ಬೆಚ್ಚಗಿನ ಹಾಲಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಕಜ್ಜಿ, ನವೆ, ದದ್ದು, ತುರಿಕೆಗಳು, ಚರ್ಮವ್ಯಾಧಿಗಳು ತಗ್ಗುತ್ತವೆ.

ಷಡಂಗ ಪಾನೀಯ, ಗಂಗಾಧರ ಚೂರ್ಣ, ಮಸ್ತಕಾರಿ ಪ್ರದಂಥಹ ಆಯುರ್ವೇದ ತಯಾರಿಕೆ ಗಳಲ್ಲಿಯೂ, ಶಿವಾದಿ ಚೂರ್ಣ, ಚುಕ್ಕತ್ ತೈಲಿ, ನಿಲಿವೆಂಬು ಕುಡಿನೀರ್, ಕರುಣಾಯ್ ಲೇಹ್ಯದಂತಹ ತಮಿಳುನಾಡಿನ ಸಿದ್ಧ ವೈದ್ಯ ತಯಾರಿಕೆಗಳಲ್ಲಿಯೂ ಸಹಾ ಇದನ್ನು ಬಳಸುತ್ತಾರೆ.



ಧಾರಾವಾಹಿ - 1

# ಶ್ರೀವೇಂಕಟೇಶ್ವರಸ್ವಾಮಿ ಆಲಯ

- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್
- ಕನ್ನಡಾನುವಾದ : ದಿ॥ ಬಿ.ಎನ್. ಶ್ರೀನಿವಾಸನ್

## ಅಧ್ಯಾಯ - 1

### ಭೌಗೋಳಿಕ ಸನ್ನಿವೇಶ

ದಕ್ಷಿಣ ಭಾರತದೇಶದ 13-14 ಅಕ್ಷಾಂಶಗಳ ಮಧ್ಯದಲ್ಲಿ 179 ಪೂರ್ವರೇಖಾಂಶದಲ್ಲಿರುವ ಭೂಭಾಗದಲ್ಲಿ ವ್ಯಾಪಿಸಿರುವ ತಿರುಮಲೆ ಬೆಟ್ಟಗಳೆಂಬ ಪರ್ವತಶ್ರೇಣಿ ದೇಶದಲ್ಲಿಯೇ ಒಂದು ಭೌಗೋಳಿಕ ವಿಶೇಷವೆನಿಸಿದೆ.ಇದನ್ನು ತಿರುಮಲೆ ಪರ್ವತ ಪಂಕ್ತಿ ಎನ್ನುವರು.ಇಲ್ಲಿ ಏಳು ಮುಖ್ಯ ಶಿಖರ ಗಳಿವೆ. ಎಲ್ಲವೂ ಅತಿ ಪವಿತ್ರವಾಗಿರುವ ಪುರಾಣ ಕಥೆಗಳಿಗೆ ಸಂಬಂಧಿಸಿವೆ. ಇವುಗಳಲ್ಲಿ ಅತಿ ಮುಖ್ಯವಾದ ಶೇಷಾಚಲದ ಮೇಲೆ ತಿರುಮಲೆಯ ದೇವಾಲಯವಿದೆ.ಇದರಿಂದಾಗಿಯೇ ಇಡೀ ಪರ್ವತ ಶ್ರೇಣಿ ಶೇಷಾ ಚಲವೆಂದು ಕರೆಯಲ್ಪಡುತ್ತದೆ.

ಆಂಧ್ರಪ್ರದೇಶದಲ್ಲಿನ ಉತ್ತರಭಾಗದಲ್ಲಿ ಆರಂಭವಾಗುವ ಪೂರ್ವ ಘಟ್ಟಗಳು ಸಮುದ್ರ ತೀರದಲ್ಲಿ ಅನತಿ ದೂರದಲ್ಲಿ ಕೆಳಕ್ಕೆ ದಕ್ಷಿಣಕ್ಕಿಳಿದು ಕೃಷ್ಣಾನದಿಯನ್ನು ದಾಟಿದ ನಂತರ ಅನೇಕ ಕವಲುಗಳಾಗಿ ಸಮಾನಾಂತರ ಶಾಖೆಗಳಾಗಿ ಮದ್ರಾಸಿನವರೆಗೆ ಎಂದರೆ 13ನೇ ಉತ್ತರ ಅಕ್ಷಾಂಶದವರೆಗೆ ವ್ಯಾಪಿಸಿವೆ. ಇಂತಹ ಸಮಾನಾಂತರ ಶ್ರೇಣಿಗಳು ಮೂರು ನೋಡಬಹುದು.ಮೊದಲನೆಯದು ಸಮುದ್ರ ತೀರ ದಲ್ಲಿನದು. ಎರಡನೆಯದು ಕೃಷ್ಣಾನದಿಯ ದಕ್ಷಿಣದಲ್ಲಿ ಕರ್ನೂಲಿನಿಂದ ಆರಂಭವಾಗಿ ಅರ್ಧವೃತ್ತಾ ಕಾರ ದಲ್ಲಿ ಕಡಪ ಪ್ರಾಂತವನ್ನು ಸೇರಿ ಅಲ್ಲಿ ಗುಡ್ಡಗಳ ಗುಂಪಾಗಿ ಕಾಣುತ್ತವೆ. ಇವುಗಳಲ್ಲಿ ಒಂದು ಶೇಷಾಚಲ. ಮುಖ್ಯ ಶಾಖೆ ದಕ್ಷಿಣಕ್ಕಿಳಿದು ಮತ್ತೆ ತೀರಪ್ರಾಂತದಲ್ಲಿ ಮದ್ರಾಸಿಗೆ ಉತ್ತರದಲ್ಲಿ ಪೋನ್ನೇರಿಯನ್ನು ಸೇರು ವುದು. ಮೂರನೇ ಶ್ರೇಣಿ ಹಲವಾರು ಬಳುಕುಗಳಿಂದಲೂ ಅಷ್ಟೇನೂ ಎತ್ತರವಲ್ಲದೆ ಮೈಸೂರು ಪ್ರಸ್ಥ ಭೂಮಿಯಲ್ಲಿ ಆರಂಭವಾಗಿ ಅನಂತಪುರ ಕರ್ನೂಲು ಜಿಲ್ಲೆಗಳಲ್ಲಿ ಹರಡಿದೆ. ಈ ಮೂರರಲ್ಲಿ ಮಧ್ಯದ ಕರ್ನೂಲು ಜಿಲ್ಲೆಯ ಪರ್ವತಗಳು ನಲ್ಲಮಲೆಯೆಂದು ಪ್ರಸಿದ್ಧ.ಇದು ದಕ್ಷಿಣಕ್ಕೆ ಹರಡಿ ಪೂರ್ವದ ತೀರ ಪ್ರಾಂತದಲ್ಲಿ ಸೇರುವುದು. ಈ ಪರ್ವತಾವಳಿ ಮದ್ರಾಸಿಗೆ ಅರ್ಧ ಡಿಗ್ರಿ ಉತ್ತರದಲ್ಲಿ ಒಂದು ಗಡಿಯನ್ನು ಏರ್ಪಡಿಸಿದೆ. ಪೂರ್ವದಲ್ಲಿನ ಪೋನ್ನೇರಿಯವರೆಗೆ ಪೂರ್ವ ಶಾಖೆಯಾಗಿರುವುದರಿಂದ ತಿರುಮಲೆಯು ಪೂರ್ವ ಶಾಖೆಯ ಭಾಗಮಾತ್ರವೇ. ಇದು ದಕ್ಷಿಣದಲ್ಲಿ ಅನಮಲೆಯಿಂದ ಹೊರಟು ಕೊಯಮತ್ತೂರು




ಜಿಲ್ಲೆಯ ಮೂಲಕ ಮೈಸೂರಿನ ಗಡಿ ಪ್ರಾಂತವಾಗಿ ಹರಡಿ ಚಿತ್ತೂರು ಜಿಲ್ಲೆಯ ಪಲಮನೇರನ್ನು ಸೇರುವುದು. ತುಸು ಈಶಾನ್ಯ ದಿಕ್ಕಿನಲ್ಲಿ ತಲಕೋನ ಜಲಪಾತದವರೆಗೆ ಹೋಗಿ ಅಲ್ಲಿ ಮತ್ತೆ ಪೂರ್ವಕ್ಕೆ ತಿರುಗಿ ತಿರುಮಲೆಯನ್ನು ಸೇರುತ್ತದೆ. ತಿರುಮಲೆಗೆ ಪೂರ್ವದ ಒಂದು ತಪ್ಪಲಿನಲ್ಲಿ ಇದರ ಕೊನೆ. ತಲಕೋನದಿಂದ ತಿರುಮಲೆಯ ಮಧ್ಯದಲ್ಲಿ ಹದ್ದು ಹಾರಿದಂತೆ 12 ಮೈಲಿದೂರ.ಆದರೆ ಬೆಟ್ಟದ ಮೇಲೆ ಕಾಡಿನಲ್ಲಿ ನಡೆಯುವ ಹಾದಿ ಸುಮಾರು 20 ಮೈಲಿಯಾಗುವುದು. ಈ ಭಾಗವೆಲ್ಲ ಬಹು ಪ್ರಾಚೀನ ಕಾಲದಿಂದಲೇ ಪವಿತ್ರವೆಂದು ಭಾವಿಸಲ್ಪಟ್ಟಿದೆ. ತಲಕೋನ ಜಲಪಾತದಿಂದ ಸುರಿಯುವ ನೀರಿಗೆ ಪಾಪನಾಶನಂ ಜಲಪಾತ ಪಶ್ಚಿಮ ಗಡಿಯೆಂದು ತಿಳಿಯಲಾಗಿದೆ.

ತಲಕೋನ ಜಲಪಾತ ಹಾಗೂ ಆ ಝರಿ ಎರಡೂ ಅಲ್ಲಿನ ಬೆಟ್ಟದಲ್ಲಿ ಉತ್ತರದಿಂದ ಪೂರ್ವಕ್ಕೆ ತಿರುಗುತ್ತವೆಯಾಗಿ, ಅಲ್ಲಿ ಪ್ರಕೃತಿಸಿದ್ಧವಾದ ಬಳುಕುಗಳಿವೆ. ಇಲ್ಲಿ ಬೆಟ್ಟ ಉತ್ತರದಲ್ಲಿ ಸುಮಾರು 3583 ಅಡಿ ಎತ್ತರ ಹಾಗೂ ಪೂರ್ವದಕ್ಷಿಣಗಳಲ್ಲಿ 3800 ಅಡಿ ಎತ್ತರವಾಗಿದೆ. ನಿರಂತರ ಪ್ರವಾಹವಿರುವ ಜಲಪಾತದ ಎತ್ತರ ಸುಮಾರು 200 ಅಡಿಗಳು. ಬೆಟ್ಟದ ಪಶ್ಚಿಮದ ಮೈದಾನ ಸಮುದ್ರ ಮಟ್ಟಕ್ಕೆ 1800-2000 ಅಡಿ ಎತ್ತರ. ಈ ಕಣಿವೆ ಪ್ರಕೃತಿದತ್ತ ಸೌಂದರ್ಯದಿಂದ ಹಸಿರು ಕಾಡಿನಿಂದ ತುಂಬಿದೆ. ಬೆಟ್ಟ ಮೈದಾನದ ಕಡೆಗೆ ನೀಟಾಗಿವಾಲಿದೆ. ಬೆಟ್ಟಕ್ಕೆ ಹೊಂದಿಕೊಂಡಂತೆ ಪಶ್ಚಿಮದಲ್ಲಿ ಸಿದ್ಧೇಶ್ವರನ ಗುಡಿಯಿದೆ. ಈ ಜಲಪಾತ ಬೆಟ್ಟದಲ್ಲಿರುವ ಅನೇಕ ಜಲಪಾತಗಳಲ್ಲಿ ಮೊದಲನೆಯದಾಗಿರುವ ಇದನ್ನು ತಲಕೋನ ಎಂದು ಕರೆಯುವರು. ಪ್ರಾಚೀನ ಕಾಲದಲ್ಲಿದು ತಮಿಳುನಾಡಿಗೂ, ಬಡಗನಾಡಿಗೂ ಸರಹದ್ದಿನ ಪ್ರಾಂತವಾಗಿದ್ದಿತು.ಬಡಗುದೇಶವೆಂದರೆ ಇಂದು ಕನ್ನಡ ತೆಲುಗು ಮಾತನಾಡುವ ಜನರಿರುವ ದೇಶ. ಈ ಸರಹದ್ದಿನಲ್ಲಿ ವೇಂಗಡ ಅಥವಾ ತಿರುಮಲೆ ಒಂದು ಮುಖ್ಯವಾದ ಸ್ಥಳ. ಮೇಲೆ ವಿವರಿಸಿದ ಮಧ್ಯಗಿರಿಪಂಕ್ತಿಯನ್ನು ಪುರಾಣಗಳಲ್ಲಿ ಮಲಗಿರುವ ಸರ್ಪಕ್ಕೆ ಹೋಲಿಸಿ ವರ್ಣಿಸಲಾಗಿದೆ. ಇದರ ಬಾಲದಲ್ಲಿ ಶ್ರೀಶೈಲವಿದ್ದು ಅಲ್ಲಿ ಮಲ್ಲಿಕಾರ್ಜುನ ದೇವಾಲಯವೂ, ಅಹೋಬಿಲದಲ್ಲಿನ ನರಸಿಂಹ ಸ್ವಾಮಿ ಆಲಯವನ್ನು ದೇಹಭಾಗವಾಗಿಯೂ, ತಿರುಮಲೆಯ ಶ್ರೀವೆಂಕಟೇಶ್ವರಸ್ವಾಮಿ ಆಲಯವನ್ನು ಫಣಾಗ್ರವಾಗಿಯೂ, ಶ್ರೀಕಾಳಹಸ್ತಿಯ ಶ್ರೀಕಾಳಹಸ್ತೀಶ್ವರಸ್ವಾಮಿ ಆಲಯವನ್ನು ಮುಖಾಗ್ರ ಭಾಗವೆಂದೂ ವರ್ಣಿಸಿದ್ದಾರೆ.

ತಿರುಪತಿ ತಿರುಚಾನೂರುಗಳು ಒಂದು ವಿಸ್ತಾರವಾದ ಕಣಿವೆಯಲ್ಲಿ ಪರ್ವತರಾಜಿಯಿಂದ ಆವರಿಸಲ್ಪಟ್ಟಿವೆ. ಈ ಸಾಲಿನಲ್ಲಿ ಉತ್ತರಕ್ಕೆ ತಿರುಮಲೆಯಿದೆ. ತಿರುಪತಿ ನಗರ ಇದಕ್ಕೆ ಎರಡು ಮೈಲು ದೂರದಲ್ಲಿ (ಹದ್ದು ಹಾರಿದಂತೆ) ಇದೆ.

ಶ್ರೀವೆಂಕಟೇಶ್ವರನ ಆಲಯವಿರುವ ಬೆಟ್ಟ ವೆಂಕಟಾಚಲವೆಂದು ಪ್ರಸಿದ್ಧವಾಗಿದೆ. ಇದು ಸ್ವಲ್ಪ ಹಳ್ಳದಂತೆ ಇದ್ದು ಸುತ್ತಲು ಎತ್ತರವಾದ ಬೆಟ್ಟಗಳಿವೆ. ಶ್ರೀಶೈಲದಲ್ಲಿ ಮಲ್ಲಿಕಾರ್ಜುನಸ್ವಾಮಿ ಆಲಯವೂ ಹೀಗೆಯೇ ಇದೆ. ವೇಂಕಟೇಶ್ವರಾಲಯವನ್ನು ಸೇರಲು ಐದು ಮಾರ್ಗಗಳಿವೆ. ಇವುಗಳಲ್ಲಿ ಎರಡು ತಿರುಪತಿಯಿಂದ ಹೊರಡುವವು. ಒಂದು ಮೆಟ್ಟಿಲು ಮಾರ್ಗ - 7 ಮೈಲಿ ದೂರದ್ದು. ಎರಡನೆಯದು



ಮೋಟಾರು ವಾಹನಗಳ ಮಾರ್ಗ. (ಈಗ ಮೇಲೇರಲಿಕ್ಕೆ ಒಂದು, ಕೆಳಗಿಳಿಯಲಿಕ್ಕೆ ಮತ್ತೊಂದು - ಹೀಗೆ ಎರಡು ಮೋಟಾರು ಮಾರ್ಗಗಳು.) ಮೂರನೆಯದು ಚಂದ್ರಗಿರಿಯಿಂದ ಶ್ರೀವಾರಿ ಮೆಟ್ಟು ಮುಖಾಂತರವಾದದ್ದು. ನಾಲ್ಕನೆಯದು ಮಾಮಂಡೂರು ರೈಲ್ವೆ ಸ್ಟೇಷನ್ನಿನಿಂದಲೂ, ಐದನೆಯದು ನಾಗಪಟ್ಲದ ಕಡೆಯಿಂದಲೂ ಹೊರಡುವುದು.

ತಿರುಮಲೆಯ ಗುಡಿಗೆ ಸಂಬಂಧಿಸಿದಂತೆ ಎರಡು ಕಣಿವೆಗಳು ಪ್ರಮುಖವಾದವು. ಒಂದು ಪೂರ್ವದಲ್ಲಿನ ಪಾಪನಾಶನಂ ಕಣಿವೆ. ಎರಡನೆಯದು ಅವ್ವಚಾರಿ ಕಣಿವೆ. ಇವುಗಳಲ್ಲಿ ಪಾಪನಾಶನಂ ಕಣಿವೆ ಬೆಟ್ಟದ ಮೇಲೆ ಉತ್ತರಕ್ಕೆ ಹರಿಯುವ ನೀರನ್ನು ಸಂಗ್ರಹಿಸಿದರೆ, ಅವಚಾರಿವಂಕಬೆಟ್ಟದ ಆಗ್ನೇಯ ಭಾಗದ ನೀರನ್ನು ಗ್ರಹಿಸುತ್ತದೆ. ಎರಡೂ ಕಣಿವೆಗಳೂ ಅನೇಕ ಪವಿತ್ರ ತೀರ್ಥಗಳನ್ನು ಹೊಂದಿ ಪ್ರಸಿದ್ಧವಾಗಿವೆ.

## ಮೇಲ್ಮೈಲಕ್ಷಣ:

ಸಾಮಾಜಿಕ ಆರ್ಥಿಕ ಸ್ಥಿತಿಗಳಂತೆಯೇ ತಮಿಳು, ತೆಲುಗು ದಾಕ್ಷಿಣಾತ್ಯ ಸಂಸ್ಕೃತಿಗಳ ಸಮ್ಮೇಳನವೇ ಇಲ್ಲಿನ ಮುಖ್ಯಲಕ್ಷಣವಾಗಿದೆ. ತಿರುಮಲೆಯ ಆಲಯವಿರುವ ಬೆಟ್ಟವೇ ವಿಶಿಷ್ಟವಾದದ್ದು. ಶಿಲಪ್ಪದಿಕಾರದಲ್ಲಿ ಹೀಗೆ ಹೇಳಲಾಗಿದೆ-

**ವೆಂಗಡಮೆನ್ನು ಎಂಗುಯಿರ್ ಡಮಲೈಯತ್ತುಚ್ಚಿ ಮಿವನ್ನೈ**

ಈ ಸ್ವಾಮಿ ಉಚ್ಚಿಯಿಲ್ ನಿನ್ರಾನ್-ಎಂದರೆ ಉನ್ನತ ಸ್ಥಳದಲ್ಲಿ ನಿಂತವನು ಎಂಬುದು 13ನೇ ಶತಕದ ಮಧ್ಯಭಾಗದವರೆಗೆ ಪ್ರಸಿದ್ಧವಾದ ಮಾತು. ಆದರೆ ಆ ದೇವರ ಗುಡಿ ಸುತ್ತಲಿರುವ ಪ್ರದೇಶಕ್ಕಿಂತ ತಗ್ಗಿನಲ್ಲಿದೆ ಎಂಬುದನ್ನು ನಂತರದಲ್ಲಿ ಗುರುತಿಸಿ ದಾಖಲಿಸಲಾಯಿತು. ಗುಡಿಯು 3426 ಅಡಿ ಎತ್ತರದ ಬೆಟ್ಟದ ಮೇಲಿದೆ. ಸ್ವಲ್ಪದೂರದ ಜಾಬಾಲಿ ತೀರ್ಥ 3177 ಅಡಿ ಎತ್ತರದಲ್ಲಿದೆ. ಪೂರ್ವಕ್ಕೆ ಬೆಟ್ಟವು 2250-2750 ಅಡಿಗಳೂ,ನೈರುತ್ಯಕ್ಕಿರುವ ನಾರಾಯಣಗಿರಿಯು 3620 ಅಡಿ ಎತ್ತರವೂ ಆಗಿದೆ.

ತಿರುಮಲೆಯಿರುವ ಚಿತ್ತೂರು ಮಂಡಲದ ಭಾಗ ಮೈಸೂರು ಪ್ರಸ್ಥಭೂಮಿಯ ಮೂಲಕ ಹಾಯ್ದಿರುವ ಹಾಸುಗಲ್ಲಿನ ಶಿಲಾಖಂಡಗಳಿಂದುಂಟಾಗಿದೆ. ಪೂರ್ವಕ್ಕೆ ಹೋದಂತೆಲ್ಲ ಗುಡ್ಡಗಳು ವಿರಳವಾಗುತ್ತ ಅಲ್ಲಲ್ಲಿ ಹಲವು ಎತ್ತರವಾಗಿ ಕಡವ ಭೌಗೋಳಿಕ ಲಕ್ಷಣಗಳು ಕಂಡು ಬರುತ್ತವೆ. ವೆಲಿಗೊಂಡದ ದಕ್ಷಿಣದ ಕೊನೆ,ತಿರುಮಲೆ ಬೆಟ್ಟಗಳು, ಮಾಮಂಡೂರು ಕಣಿವೆಗಳು ಹಿಟ್ಟುಗಲ್ಲು, ಬೆಣಚುಕಲ್ಲುಗಳಿಂದ ಕೂಡಿವೆ. ಅತಿ ವಿಸ್ತಾರವಾದ ಹಾಸು ಗಲ್ಲುಗಳು ನೇರವಾದ, ಕಡಿದಾದ ಶಿಖರಗಳೂ, ಹೆಚ್ಚಾಗಿ ಶೇಷಾಚಲ ಪಂಕ್ತಿಯ ಬೆಟ್ಟಗಳಲ್ಲಿ ಮನೋಹರವಾಗಿ ಕಂಡು ಬರುತ್ತವೆ.

(- ಮುಂದುವರಿಯುವುದು)


ತಿರುಮಲ ತಿರುಪತಿ ದೇವಸ್ಥಾನಗಳು
ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ
ವಸಂತೋತ್ಸವ
ಏಪ್ರಿಲ್ 24 ರಿಂದ 26 ರ ವರೆಗೆ
.....file photos




# ಶ್ರೀರಾಮಾನುಜ ನಾಮಗಳು (ಗೋವಿಂದ ನಾಮಗಳ ರೀತಿಯಲ್ಲಿ)

ಅಷ್ಟಭುಜ ಸೇವಕ ರಾಮಾನುಜ !
ಅನಂತರೂಪಾ ರಾಮಾನುಜ !
ಅನಾಥರಕ್ಷಕ ರಾಮಾನುಜ !
ಅಮೃತಮೂರ್ತಿ ರಾಮಾನುಜ !
ಅದ್ಭುತರೂಪಾ ರಾಮಾನುಜ !
ಅಧರ್ಮ ಶತ್ರು ರಾಮಾನುಜ !
ಆಮುದಲ್ವನ್ ರಾಮಾನುಜ !
ಆಶ್ರಿತರಕ್ಷಕ ರಾಮಾನುಜ !
ಆನಂದರೂಪಾ ರಾಮಾನುಜ !
ಆದಿಶೇಷಾ ರಾಮಾನುಜ !
ರಾಮಾನುಜ ಶ್ರೀಯತಿರಾಜಾ!
ಯತಿರಾಜಾ ಶ್ರೀರಾಮಾನುಜ!
ಆಪದ್ಬಾಂಧವಾ ರಾಮಾನುಜ !
ಇಲೈಯಾಳ್ವಾರ್ ರಾಮಾನುಜ !
ಉದಯವರೇ ರಾಮಾನುಜ !
ಎಂಬಾರುನಾಥಾ ರಾಮಾನುಜ !
ಕರುಣಾಂತರಂಗಾ ರಾಮಾನುಜ !
ಕಲಿಧ್ವಂಸಕಾ ರಾಮಾನುಜ !
ಕಲ್ಪವೃಕ್ಷ ರಾಮಾನುಜ !
ದಾಸಪಾವನಾ ರಾಮಾನುಜ !
ಧರ್ಮಸಂಸ್ಥಾಪಕ ರಾಮಾನುಜ !
ದಾಶರಥಿಗುರು ರಾಮಾನುಜ !
ದೀನಜನೋದ್ಧಾರ ರಾಮಾನುಜ !
ರಾಮಾನುಜ ಶ್ರೀಯತಿರಾಜಾ !
ಯತಿರಾಜಾ ಶ್ರೀರಾಮಾನುಜ !
ದೀನಶರಣ್ಯ ರಾಮಾನುಜ !
ದೀನದಯಾಳೋ ರಾಮಾನುಜ !
ದೀನಬಂಧೋ ರಾಮಾನುಜ !
ದೇವರಾಜಪ್ರಿಯ ರಾಮಾನುಜ !
ಕಾಷಾಯಾಂಬರ ರಾಮಾನುಜ !

ಕಾರುಣ್ಯಜಲಧೇ ರಾಮಾನುಜ !
ರಾಮಾನುಜ ಶ್ರೀಯತಿರಾಜಾ !
ಯತಿರಾಜಾ ಶ್ರೀರಾಮಾನುಜಾ !
ಕಾಮಧೇನೂ ರಾಮಾನುಜ !
ಕಾಮಾದಿಹರಾ ರಾಮಾನುಜ !
ಕಾಮಿತಫಲದಾ ರಾಮಾನುಜ !
ಕಾಂತಿಮತಿಸುತ ರಾಮಾನುಜ !
ಕೂರೇಶಪೂಜಿತ ರಾಮಾನುಜ !
ಕೇಶವತನಯಾ ರಾಮಾನುಜ !
ಕೋಯಿಲಣ್ಣನ್ ರಾಮಾನುಜ !
ಗದ್ಯತ್ರಯಕರ ರಾಮಾನುಜ !
ಗೋಪಿಮೋಕ್ಷದಾ ರಾಮಾನುಜ !
ರಾಮಾನುಜ ಶ್ರೀಯತಿರಾಜಾ !
ಯತಿರಾಜಾ ಶ್ರೀರಾಮಾನುಜ !
ಗೋದಾಗ್ರಜಾ ಶ್ರೀ ರಾಮಾನುಜ !
ತಿರುಪ್ಪಳಿಯಾಳ್ವಾರ್ ರಾಮಾನುಜ !
ತ್ರಿದಂಡಧಾರಿ ರಾಮಾನುಜ !
ದಯಾಸಿಂಧೋ ರಾಮಾನುಜ !
ಪುರಾಣಪುರುಷಾ ರಾಮಾನುಜ !
ಪುರುಷಪುಂಗವಾ ರಾಮಾನುಜ !
ಪುಂಡರೀಕಾಕ್ಷಾ ರಾಮಾನುಜ !
ಪೆರಿಯನಂಬಿಚ್ಚಾತ್ರಾ ರಾಮಾನುಜ !
ಬಲಭದ್ರಾಜಯ ರಾಮಾನುಜ !
ರಾಮಾನುಜ ಶ್ರೀಯತಿರಾಜಾ !
ಯತಿರಾಜಾ ಶ್ರೀ ರಾಮಾನುಜಾ !
ಭಕ್ತ ಜನಪ್ರಿಯ ರಾಮಾನುಜ !
ಭವಭಯಹರಾ ರಾಮಾನುಜ !
ಭಕ್ತ ಮಂದಾರಾ ರಾಮಾನುಜ !
ದೇಶಿಕೇಂದ್ರ ರಾಮಾನುಜ !
ನಿತ್ಯ ನಿರ್ಮಲಾ ರಾಮಾನುಜ !

ಪರಮದಯಾಳೋ ರಾಮಾನುಜ !
ಪಂಚಾಚಾರ್ಯಪದಾಶ್ರಿತ ರಾಮಾನುಜ!
ಪರಾಂಕುಶಸೇವಕ ರಾಮಾನುಜ !
ರಾಮಾನುಜ ಶ್ರೀಯತಿರಾಜಾ !
ಯತಿರಾಜಾ ಶ್ರೀ ರಾಮಾನುಜಾ !
ಪರಮಹಂಸಾ ರಾಮಾನುಜ !
ಪಾವನ ಪುರುಷಾ ರಾಮಾನುಜ !
ಪಾಪವಿಮೋಚನಾ ರಾಮಾನುಜ!
ಫಣಿ ಶರೀರಾ ರಾಮಾನುಜ !
ಪ್ರಿಯಂವದಾ ಶ್ರೀರಾಮಾನುಜ !
ಯತಿರಾಜಾ ಶ್ರೀ ರಾಮಾನುಜಾ !
ಯಾಮುನಪ್ರಿಯಾ ರಾಮಾನುಜ !
ರಂಗನಾಥ ಪುತ್ರಾ ರಾಮಾನುಜ !
ಲಕ್ಷ್ಮಣಮುನೆ ರಾಮಾನುಜ !
ಲೀಲಾ ಮಾನುಷ ವಿಗ್ರಹ ರಾಮಾನುಜ !
ವರದರಾಜಸುತ ರಾಮಾನುಜ !
ರಾಮಾನುಜ ಶ್ರೀಯತಿರಾಜಾ !
ಯತಿರಾಜಾ ಶ್ರೀ ರಾಮಾನುಜಾ !
ವೀರಾಧಿವೀರಾ ರಾಮಾನುಜಾ !
ವೈಷ್ಣವ ಪ್ರಿಯಾ ರಾಮಾನುಜ !
ಶಂಖಚಕ್ರಪ್ರದ ರಾಮಾನುಜ !
ಶಾರದಾಶೋಕನಾಶ ರಾಮಾನುಜ !
ಶಿಷ್ಟರಂಜನಾ ರಾಮಾನುಜ !
ಶಿಷ್ಟ ಪರಿಪಾಲಾ ರಾಮಾನುಜ !
ಶ್ರೀ ಭಾಷ್ಯಕರ್ತ ರಾಮಾನುಜ !
ಶ್ರೀರಾಮಾನುಜ ರಾಮಾನುಜ !
ಶ್ರೀಲಕ್ಷ್ಮಣಾರ್ಯಾ ರಾಮಾನುಜ !
ಶ್ರೀರಂಗಪ್ರಿಯ ರಾಮಾನುಜ !
ರಾಮಾನುಜ ಶ್ರೀ ಯತಿರಾಜಾ !
ಯತಿರಾಜಾ ಶ್ರೀರಾಮಾನುಜಾ!
ಭಕ್ತವತ್ಸಲಾ ರಾಮಾನುಜ !

ಭಾಗವತಪ್ರಿಯ ರಾಮಾನುಜ !
ಭಾಷಾಸನ್ನುತ ರಾಮಾನುಜ !
ಭುವನ ಪಾವನಾ ರಾಮಾನುಜ !
ಭೂರಿದಯಾನಿಧೇ ರಾಮಾನುಜ !
ಭೂತಪುರೀಶಾ ರಾಮಾನುಜ !
ಮನ್ನಾಥಾಜಯ ರಾಮಾನುಜ !
ರಾಮಾನುಜ ಶ್ರೀಯತಿರಾಜಾ !
ಯತಿರಾಜಾ ಶ್ರೀ ರಾಮಾನುಜಾ !
ಮಂತ್ರ ಪ್ರಕಾಶಾ ರಾಮಾನುಜ !
ಮುಕ್ತಿದಾಯಕಾ ರಾಮಾನುಜ!
ಮೇಷಾದ್ರಾಸಂಭವ ರಾಮಾನುಜ !
ಶ್ರೀರಾಮ ಸೋದರ ರಾಮಾನುಜ !
ಶ್ರೀರಂಗಾಶ್ರಿತ ರಾಮಾನುಜ !
ಶ್ರೀಕೃಷ್ಣಾಗ್ರಜ ರಾಮಾನುಜ !
ಶ್ರೀ ಭಾಷ್ಯಕಾರಾ ರಾಮಾನುಜ !
ಶೆಲ್ವಪಿಳ್ಳ ಜನಕ ರಾಮಾನುಜ !
ಶ್ವೇತವರ್ಣಾ ರಾಮಾನುಜ !
ಶೇಷಾವತಾರಾ ರಾಮಾನುಜ !
ಶೋಕನಾಶನಾ ರಾಮಾನುಜ !
ಸಹಸ್ರನಾಮಾ ರಾಮಾನುಜ !
ಸತ್ಯ ಸಂಕಲ್ಪ ರಾಮಾನುಜ !
ಸಜ್ಜನಪ್ರಿಯಾ ರಾಮಾನುಜ !
ಸಾಕ್ಷಿಭೂತಾ ರಾಮಾನುಜ !
ಸುಧೀರ್ಘಬಾಹು ರಾಮಾನುಜ !
ಸುಗುಣಾಕರ ರಾಮಾನುಜ !
ಸೂರಿಶಿಖಾಮಣಿ ರಾಮಾನುಜ !
ಸೌಶೀಲ್ಯಭೂಷಾ ರಾಮಾನುಜ !
ಕ್ಷಾಂತಿವರ್ಧನಾ ರಾಮಾನುಜ !
ಕ್ಷೀರಪುರೀಶಾ ರಾಮಾನುಜ !
ರಾಮಾನುಜ ಶ್ರೀಯತಿರಾಜಾ !
ಯತಿರಾಜಾ ಶ್ರೀರಾಮಾನುಜಾ !



25-03-2021 ರಂದು ತಿ.ತಿ.ದೇ. ಆಡಳಿತ ಮಂಡಳಿಯ ಪ್ರತ್ಯೇಕ ಆಹ್ವಾನಿತರಾಗಿ ನಿಯಮಿತರಾದ ಶ್ರೀಮಲ್ಲಾದಿ ವಿಷ್ಣು (ವಿಜಯವಾಡ ಸೆಂಟ್ರಲ್ ಶಾಸನ ಸದಸ್ಯರು) ಯವರಿಗೆ ಸ್ವಾಮಿಯವರ ಚಿತ್ರಪಟವನ್ನು ನೀಡುತ್ತಿರುವ ತಿ.ತಿ.ದೇ. ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಏ.ವಿ. ಧರ್ಮಾರೆಡ್ಡಿಯವರು.



ತಿರುಮಲೆಯ ಕ್ಷೇತ್ರಪಾಲಕನಾದ ರುದ್ರನಿಗೆ ಮಹಾಶಿವರಾತ್ರಿ ಸಂದರ್ಭವಾಗಿ ನಡೆದ ವಿಶೇಷ ಪೂಜೆ





ತಿ.ತಿ.ದೇ. ವತಿಯಿಂದ ಶ್ರೀ ಕಾಳಹಸ್ತೀಶ್ವರನಿಗೆ ಬ್ರಹ್ಮೋತ್ಸವದ ಸಂದರ್ಭವಾಗಿ ತಿ.ತಿ.ದೇ. ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ, ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್. ಜವಹರ್ ರೆಡ್ಡಿ, ಐ.ಎ.ಎಸ್., ರವರು ರೇಷ್ಮೆವಸ್ತ್ರಗಳನ್ನು ಸಮರ್ಪಿಸುತ್ತಿರುವ ದೃಶ್ಯ.



ತಿ.ತಿ.ದೇ. ವತಿಯಿಂದ ಮಂತ್ರಾಲಯ ಶ್ರೀ ಗುರು ರಾಘವೇಂದ್ರ ಸ್ವಾಮಿಯವರ 426ನೇ ವರ್ಧಂತಿ ಉತ್ಸವ ಸಂದರ್ಭವಾಗಿ ಶೇಷವಸ್ತ್ರವನ್ನು ಸಮರ್ಪಿಸುತ್ತಿರುವ ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ. ಏ.ವಿ. ಧರ್ಮಾರೆಡ್ಡಿಯವರು.



ತಿ.ತಿ.ದೇ. ಇತ್ತೀಚೆಗೆ ತಿರುಮಲೆಯಲ್ಲಿ ನಿರ್ವಹಿಸಿದ ಶ್ರೀಅನಂತಾಳ್ವಾರ್ 967 ನೇ ಅವತಾರೋತ್ಸವದ ದೃಶ್ಯ. ಶ್ರೀ ಶ್ರೀ ಶ್ರೀ ದೊಡ್ಡಜೀಯರ್ ಸ್ವಾಮಿ, ಶ್ರೀ ಶ್ರೀ ಶ್ರೀ ಚಿಕ್ಕಜೀಯರ್ ಸ್ವಾಮಿ, ತಿ.ತಿ.ದೇ. ಹಿಂದೂ ಧರ್ಮಪ್ರಚಾರ ಪರಿಷತ್ ಕಾರ್ಯದರ್ಶಿ ಆಚಾರ್ಯ ಕೆ. ರಾಜಗೋಪಾಲನ್, ಅನಂತಾಳ್ವಾರು ವಂಶೀಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡುರು.

# ಪುರಂದರದಾಸರ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆ

- ಡಾ॥ ಪ್ರಾಣೇಶ ರಾ ಅರ್ಚಕ

'ಹರಿದಾಸ' ಎಂದರೆ , ಶ್ರೀ ಹರಿಯದಾಸ ಅರ್ಥಾತ್ ಭಕ್ತ ಎಂದರ್ಥ. ಶ್ರೀ ಹರಿಯನ್ನು ಬಗೆಬಗೆಯಾಗಿ ತಮ್ಮ ನುಡಿಯಲ್ಲಿ ಹಾಡಿ, ನರ್ತಿಸಿ, ಆರಾಧಿಸಿ ಕೀರ್ತಿಸಿದವರು ಸಂತ, ಕವಿಗಳಾಗಿ ಹಾಗೂ ಪರಮ ಭಕ್ತರಾಗಿ ಖ್ಯಾತಿ ಹೊಂದಿರುವುದು ಎಲ್ಲರಿಗೂ ತಿಳಿದ ವಿಷಯ. ಮಹಾ ಭಾರತದ ಅರಣ್ಯಪರ್ವದಲ್ಲಿ ಒಂದು ಶ್ಲೋಕವು ಈ ರೀತಿಯಾಗಿದೆ.

ಮಾನಸಂ ಶಮಯೇತ್ತಸ್ಮಾತ್ ಜ್ಞಾನೇನಾಗ್ನಿಮಿವಾಂಬುದಾ।
ಪ್ರಶಾಂತೇ ಮಾನಸೇ ಹಸ್ಯ ಶಾರೀರ ಮುಪಶಾಮ್ಯಾತಿ॥
(ಮ.ಅ.ಪ ೨-೨೬)

ನೀರಿನಿಂದ ಬೆಂಕಿಯನ್ನು ಆರಿಸುವಂತೆ, ಜ್ಞಾನದಿಂದ ಮಾನಸ ದುಃಖವನ್ನು ಶಾಂತಗೊಳಿಸಬೇಕು.ಮಾನಸ ದುಃಖವು ಶಾಂತವಾದರೆ, ದೇಹವು ಸ್ವಸ್ಥವಾಗುವುದು. ಮಾನಸಿಕ ಸಮತೋಲನವು ಕೇವಲ ಭಗವಂತನ ಆರಾಧನೆ ಇದ್ದರೆ ಮಾತ್ರ ಸಾಧ್ಯ ಹಾಗೂ ಅವನ ಅನುಗ್ರಹದಿಂದಲೆ ತಮ್ಮ ಆತ್ಮೋದ್ಧಾರ ಸಾಧ್ಯ ಎಂದು ತಿಳಿದರು. ಹೀಗೆಯೇ ಭಗವಂತನ ಮಹಿಮೆಯನ್ನು ಕೊಂಡಾಡಿದ ಜನರೂ ಜನರ ಮಾತುಗಳು ಆಯಾ ಕಾಲದ ಜನರಿಗೆ, ಆಯಾ ಭಾಷೆಗಳ ಪದ ಪದ್ಯಗಳಾಗಿ ಮುಂದಿನ ಪೀಳಿಗೆಗೆ ಮಾರ್ಗದರ್ಶಿಗಳಾಗಿವೆ.

ಹೀಗೆ ಭಕ್ತಿಯೇ ಪ್ರಧಾನವಾಗಿ ಉನ್ನತ ವಿಚಾರಗಳು ತತ್ವಗಳು, ಜೀವನದ ಮೌಲ್ಯಗಳನ್ನೊಳಗೊಂಡು, ಸಮಾಜದ ಹಿತದೃಷ್ಟಿಯನ್ನು ಒಳಗೊಂಡು ರಚಿಸಲ್ಪಟ್ಟಿತು. ಇಂತಹ ಕಾರ್ಯವು ೧೨ ನೇ ಶತಮಾನದಲ್ಲಿ ಶ್ರೀಮಧ್ವಾಚಾರ್ಯರಿಂದ ಪ್ರಾರಂಭವಾದರೂ, ಅವರ ಶಿಷ್ಯರಾದ ನರಹರಿ ತೀರ್ಥರಿಂದ ಕನ್ನಡ ಕೃತಿಗಳಾಗಿ ಹೊರಹೊಮ್ಮಿದೆ. ನಂತರ ೧೪ ನೇ ಶತಮಾನದಲ್ಲಿ ಬಂದ ಶ್ರೀಪಾದರಾಜರು, ೧೫ ನೇ ಶತಮಾನದಲ್ಲಿ ಶ್ರೀವ್ಯಾಸರಾಜರು ದಾಸಸಾಹಿತ್ಯವೆಂಬ ಸ್ವರೂಪ ಕೊಟ್ಟು ಸಮಾಜವನ್ನು ಉದ್ಧರಿಸಿದರು.

"ಪರಿವರ್ತನೆಯೇ ಜಗದ ನಿಯಮ" ಸಮಾಜದ ಪರಿವರ್ತನೆಗೆ ಇರುವ ದಾರಿಯೆಂದರೆ, ವ್ಯಕ್ತಿಗಳ ಪರಿವರ್ತನೆಯೇ ಆಗಿದೆ. ಇದು ಅನೇಕರ ಅಭಿಪ್ರಾಯ, ಸಾಮಾಜಿಕ ಬದಲಾವಣೆ, ಇದೊಂದು ನಿರಂತರ ಪ್ರಕ್ರಿಯೇ ಬದುಕಿಗೆ ಅಂಟಿಕೊಳ್ಳದೆ ಕಾಮನೆಗಳನ್ನು ನಿಗ್ರಹಿಸುತ್ತಾ ಬದುಕಿನ ಸತ್ಯಾಸತ್ಯತೆಯನ್ನು ಭಕ್ತಿರೂಪವಾಗಿ ಮೂಡಿಸಿದ ಒಂದು ಸಾಹಿತ್ಯ ಪ್ರಾಕಾರವೇ ದಾಸಸಾಹಿತ್ಯ. ಸಮಾಜದ ಬಗೆಗಿನ ಪ್ರೀತಿ, ಅನುಕಂಪ, ಕಳಕಳಿಗಳು ದಾಸರ ಕೀರ್ತನೆಗಳ ಮೂಲಕ ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಆಯಾಮವನ್ನು ಕೊಟ್ಟಿದೆ.ಬದುಕಿನ ಕಷ್ಟ ಕೋಟಲೆಗಳಿಂದ ಹೊರಬರುವುದೇ ಜೀವನದ ಧ್ಯೇಯ. ಆಂತರಿಕ ಮತ್ತು ಬಾಹ್ಯ ನೋಟಗಳ ಸಮರೂಪವೇ ಅವರು ಸಾಧಿಸ ಬಯಸಿದ ಸಾಮರಸ್ಯ. ಈ ಪ್ರತಿಯೊಂದು ಅಂಶಗಳನ್ನು ಬಿಡಿಬಿಡಿಸಿ ಜಗತ್ತಿಗೆ ಸಾರಿದವರೆ ದಾಸ ವರೇಣ್ಯ ಶ್ರೀ ಪುರಂದರದಾಸರು.

ಬಡವರೊಳಗೆ ಎನ್ನಿಂದಾರು ಬಡವರಿಲ್ಲ।
ಕೊಡುವವರೊಳಗೆ ನಿನ್ನಿಂದಾರು ಕೊಡುವವರಿಲ್ಲ।
ದೃಡಭಕ್ತಿ ನಿನ್ನಲ್ಲಿ ಎನಗೆ ಕಲ್ಪಿಸಿ ಬಿಡದೆ ಸಲಹೋ ಶ್ರೀಪುರಂದರವಿಠಲ।

ಅವಿವೇಕಿಗಳಾದ ಈ ಜನರು ಹಣದ ಸಂಪಾದನೆಗಾಗಿ ಯಾವ ಯಾವ ಕಷ್ಟಗಳನ್ನು ಸಹಿಸುತ್ತಾರೆಯೋ, ಅದರ ನೂರರಲ್ಲಿ ಒಂದು ಪಾಲನ್ನು ಸಹಿಸಿಯಾದರೂ ಸಹಮೋಕ್ಷವನ್ನು ಬಯಸುವವನು ಮುಕ್ತಿ



ಪಡೆದಾನು.ಆದ್ದರಿಂದ ಪುರಂದರದಾಸರು ಸ್ವಲ್ಪ ಸಮಯವನ್ನು ಭಗವಂತನ ಧ್ಯಾನಕ್ಕೆ ಮೀಸಲಾಗಿದೆಯೆಂದು ಪರಿಪರಿಯಾಗಿ ಬೇಡಿಕೊಂಡಿದ್ದಾರೆ.

ದಾಸನಾಗುವದಕ್ಕೆ ಏಸು ಜನ್ಮದ ಸುಕೃತ।
ಭಾಸುರ ರವಿಕೋಟಿ ಶ್ರೀಶ ಸುಗುಣವಂತ।
ನಾಶರಹಿತ ನಿನ್ನ ದಾಸರ ದಾಸ್ಯ ವ।
ಲೇಸಾಗಿ ಕೊಡು ಕಂಡೆಯ ಪುರಂದರವಿಠಲ॥

ಮುಂದೆ ಗುರಿ ಹಿಂದೆ ಗುರು ಇರುವಾಗ ಯಶಸ್ಸು ನಿಶ್ಚಿತ ಎಂಬ ನಾಣ್ಣುಡಿಯಂತೆ, ಮನುಕುಲದ ಉದ್ಧಾರಕ್ಕಾಗಿ ಅನಂತಾನಂತ ಗುಣ ಪರಿಪೂರ್ಣನಾದ ಭಗವಂತನ ದಾಸ್ಯತ್ವವನ್ನು ಪಡೆದಾಗ ಮಾತ್ರ ಸಾಧನೆಯು ಪರಿಪೂರ್ಣ ಎನ್ನುವ ಅಭಿಪ್ರಾಯವನ್ನು ಇಲ್ಲಿ ಪುರಂದರದಾಸರು ವ್ಯಕ್ತ ಪಡಿಸಿದ್ದಾರೆ.

ಪುರಂದರದಾಸರು ಶ್ರೀಮದಾನಂದತೀರ್ಥರ ತತ್ವವಾದದ ಅತಿ ಮುಖ್ಯ ಅಂಶಗಳಾದ ಶ್ರೀಹರಿ ಸರ್ವೋತ್ತಮ, ವಾಯುಜೀವೋತ್ತಮ, ಜಗತ್ತು ಸತ್ಯ, ಜೀವ ಪರಮಾತ್ಮ, ಜೀವ- ಜೀವ , ಜೀವ -ಜಡ, ಜಡ - ಪರಮಾತ್ಮ, ಜಡ - ಜಡ ವಸ್ತುಗಳ ನಡುವೆ ಭೇದವುಂಟು, ದೇವರು ಎಂದಿಗೂ ಭಗವಂತನ ದಾಸರೇ ವೇದಗಳು ಅಪೌರುಷೇಯ, ಪರಮಾತ್ಮನ ಮೂಲ ರೂಪಕ್ಕೂ ಅವತಾರಕ್ಕೂ ಗುಣಶಕ್ತಿಗಳಲ್ಲಿ ಭೇದವಿಲ್ಲ. ಅಲ್ಲದೆ ಭಾಗವತ, ಮಹಾಭಾರತ, ರಾಮಾಯಣ ಇತರ ಅಂಶಗಳನ್ನು (ದಾಸ ಸಾಹಿತ್ಯ) ಪದ್ಯಗಳ ಮೂಲಕ ಜನ ಸಾಮಾನ್ಯರಿಗೆ ತಲುಪಿಸಿದ್ದಾರೆ.

ಜೀವ ಜೀವಕೆ ಭೇದ ಜಡ ಜಡಕೆ ಭೇದ
ಜೀವ ಜಡ ಪರಮಾತ್ಮನಿಗೆ ಭೇದ
ಜೀವಾಜೀವ ಮುಕ್ತಾ ಮುಕ್ತರ ಭೇದ।
ಸಂಸಾರದೊಳು ಭೇದ।
ಮುಕ್ತರೊಡೆಯ ಹರಿ ಭಕ್ತರಾಧೀನ ಜಗತ್ಕರ್ತು
ನೀ ಸಲಹಯ್ಯ ಪುರಂದರವಿಠಲ ॥

ಈ ಪಂಚಭೇದಗಳು ಈಗ ಮಾತ್ರವಲ್ಲದೆ ಎಂದೆಂದಿಗೂ ಇರುವಂತಹದು. ಈ ಜ್ಞಾನವು ಸದಾ ಇರಲೆಂದು "ಸಂತತ ವರದ ಶ್ರೀಪತಿ ಪುರಂದರವಿಠಲರೇಯ ಇಂತು ಜ್ಞಾನವು ನಿತ್ಯವಾಗಲಿ ಎನಗೆ" ಎಂದು ನಮ್ಮೆಲ್ಲರ ಪರವಾಗಿ ಪ್ರಾರ್ಥಿಸಿರುವ ದಾಸರಿಗೆ ಅನಂತಾನಂತ ನಮನಗಳು. ಪುರಂದರದಾಸರು ಸಣ್ಣ ಸಣ್ಣ ಪದ್ಯಗಳಲ್ಲಿ ಹರಿತವಾದ ವಿಷಯಗಳನ್ನು ಸ್ಪಷ್ಟಪಡಿಸಿದ್ದಾರೆ.

ಮನಶುದ್ಧಿಯಿಲ್ಲದವನಿಗೆ ಮಂತ್ರದಿಂದ ಫಲವೇನು।
ತನುಶುದ್ಧಿಯಿಲ್ಲದವನಿಗೆ ತೀರ್ಥದಿಂ ಫಲವೇನು
ಮೀನು ಮೊಸಳೆಗಳಂತೆ ಇದ್ದಲ್ಲಿ ಫಲವೇನು।
ಶ್ರೀ ಶೈಲದ ಕಾಗೆಯಂತೆ ಹೊರಗೆ ಮಿಂದು
ಒಳಗೆ ಮೀಯವ ಜನರ ಕಂಡು।
ನಗುತಿಪ್ಪ ಬೆರಗಾಗಿ ಪುರಂದರವಿಠಲ ॥

ಮಂತ್ರಪಠಣಗಳಿಂದ ಶ್ರೀಹರಿಯು ಪರಮಾತ್ಮನ ಬಗ್ಗೆ ಚಿಂತನೆ ಹೆಚ್ಚುತ್ತದೆ. ಇದಕ್ಕೆ ಅವರ ಅವಶ್ಯಕವಾದದ್ದು ಸ್ಥಿರ ಮನಸ್ಸು ಸಂಸಾರದ ಬಂಧನಕ್ಕೂ ವಿಮೋಚನೆಗೂ ಮುಖ್ಯ ಕಾರಣವಾದದ್ದೂ ಮನಸ್ಸು ಮನಸ್ಸಿನ ಗುಣ ಚಂಚಲತೆ ಮನಸ್ಸಿನ ಏಕಾಗ್ರತೆಯು ಅಸಾಧ್ಯವಾದುದು.

ಆದ್ದರಿಂದ ಮನಸ್ಸು ತಿಳಿಯಾಗುವ ತನಕ ಯಾವುದೇ ಕಾರ್ಯವು ಪೂರ್ಣವಾಗುವುದಿಲ್ಲ. ಅಂತಃಕರಣ ಶುದ್ಧಿಯಿಂದ ಪಠಿಸಿದ ಮಂತ್ರವು ಫಲಕಾರಿಯಾಗುವುದು ನಿಶ್ಚಿತ. ಮಂತ್ರಗಳ ಅರ್ಥ ತಿಳಿದು ಅದರ ಅನುಸಂಧಾನದಿಂದ ಮಾತ್ರ ಫಲವು ಸಿದ್ಧಿಸುತ್ತದೆ. ಅಶುದ್ಧ ಮನಸ್ಸಿನಿಂದ ಏಕಾಗ್ರತೆ ಅಸಾಧ್ಯ. ನಮ್ಮ ಶರೀರವು ಬಾಹ್ಯ ಆಂತರಿಕದಿಂದಲೂ ಶುಚಿತ್ವವನ್ನು ಹೊಂದಿರಬೇಕು. ನಿತ್ಯ ಕರ್ಮಾದಿಗಳು, ಶುದ್ಧವಾದ ಆಹಾರ, ಸದ್ಧರ್ಮ ಸದಾಚಾರಗಳಿಂದ ತನು ಶುದ್ಧಿಯಾಗುವುದು. ಗಂಗಾದಿ ಪವಿತ್ರ ತೀರ್ಥಗಳಲ್ಲಿ ಜಲಚರಗಳು ವಾಸಿಸುತ್ತವೆ. ಅದರಂತೆ ತೀರ್ಥ ಕ್ಷೇತ್ರಗಳಲ್ಲಿ ಹಾರಾಡುವ ಕಾಗೆ ಮುಂತಾದ ಪಕ್ಷಿಗಳನ್ನು ನಾವು ನೋಡಿದ್ದೇವೆ.ಯಾವ ಪ್ರಜ್ಞೆಯು ಇಲ್ಲದ ಈ ಪ್ರಾಣಿಗಳಿಗೆ ಸರ್ವಥಾ ಸದ್ಗತಿಯು ಇಲ್ಲ. ಮಾನವ ಜನ್ಮ ಬಂದಾಗ, ದುರ್ಮಾರ್ಗವನ್ನನುಸರಿಸದೆ, ಸನ್ಮಾರ್ಗವನ್ನು ಅನುಸರಿಸಿ,ಸುಕೃತ, ಸದಾಚಾರಗಳಿಂದ ಮಾಡಿದ ಕರ್ಮಗಳು ಸದ್ಗತಿಗೆ ಕಾರಣವಾಗುತ್ತದೆ.

ಸ್ತ್ರೀಲೋಲುಪರ ಬಗ್ಗೆ ಪುರಂದರದಾಸರು ಕಟುವಾದ ಭಾವನೆಯನ್ನು ಹೊಂದಿದ್ದಾರೆ. ಅದರ ಪರಿಣಾಮಗಳನ್ನು ಈ ಕೆಳಗಿನಂತೆ ತಿಳಿಸುತ್ತಾರೆ.

ಕಣ್ಣಿಟ್ಟು ಕೀಚಕ ಕೆಟ್ಟ ಪರ ಹೆಣ್ಣಿಗಾಗಿ ರಾವಣ ತಲೆಕೊಟ್ಟ
ಇನ್ನೆಷ್ಟು ಹೇಳಲಿ ನಷ್ಟ ಪರ ಹೆಣ್ಣ ಮೋಹಿಸಿದವ ಬಲು ಭ್ರಷ್ಟ ॥

ಸಮಾಜದಲ್ಲಿ ವ್ಯಕ್ತಿಯು ಹೊಂದಿಕೊಂಡು ಹೋಗಬೇಕು. ವಿಚಾರವಂತರು ಒಂದು ಒಳ್ಳೆಯ ನೀತಿಯನ್ನು ಅನುಸರಿಸಿಕೊಂಡು ಹೋಗಬೇಕು. ಈ ಸಂಸ್ಕೃತಿಯನ್ನು ಪಾಲಕರು ಚೆನ್ನಾಗಿ ಅರಿತವರಾಗಿರಬೇಕು. ಏಕೆಂದರೆ ಆಧುನಿಕ ಯುಗದಲ್ಲಿ ಕೇವಲ ದುಡ್ಡಿನದೆ ಕಾರುಬಾರು. ಪಾಲಕರು ತಮ್ಮ ಮಕ್ಕಳಿಗೆ ಮೂಲಭೂತ ಕರ್ತವ್ಯಗಳನ್ನು ತಿಳಿಸಿಕೊಡಬೇಕು. ಅಲ್ಲದೆ ತಾವು ಅವುಗಳನ್ನು ಅನುಸರಿಸಿದಲ್ಲಿ ಮಾತ್ರ ಮಕ್ಕಳು ಆ ಕರ್ಮಗಳನ್ನು ಅನುಕರಣೆ ಮಾಡುತ್ತಾರೆ.ಇಲ್ಲದಿದ್ದರೆ ನಮ್ಮ ಕಣ್ಣ ಮುಂದೆಯೇ ನಮ್ಮ ಮಕ್ಕಳು ನಾಶವಾಗುವುದನ್ನು ನೋಡಬೇಕಾಗುತ್ತದೆ. ಈ ವಿಚಾರವನ್ನು ಪುರಂದರದಾಸರು ಪ್ರಧಾನವಾಗಿಟ್ಟುಕೊಂಡು ಈ ಕೆಳಗಿನ ಉಗಾಭೋಗವನ್ನು ರಚಿಸಿದ್ದಾರೆ.

ಅಲ್ಲದ ಕರ್ಮನವ ಆಚರಿಸಿ ಕೆಟ್ಟ।
........................................
ಬಲ್ಲರೊಳಗೆ ವಿರೋಧಿಸಿದವ ಕೆಟ್ಟ।
ಬಲ್ಲಿದರೊಡನೆ ಸೆಣಸಾಡುವವ ಕೆಟ್ಟ ಮಲ್ಲಿನಾಥ ಶ್ರೀ
ಪುರಂದರವಿಠಲನ್ನ। ಮೆಲ್ಲಡಿಗಳನ್ನು ನಂಬಿದವನು ಕೆಟ್ಟ ನರಗೇಡಿ ॥

ಧರ್ಮ - ಅರ್ಥ - ಕಾಮ - ಮೋಕ್ಷ ಈ ಚತುರ್ವಿಧ ಪುರುಷಾರ್ಥಗಳಲ್ಲಿ ನಂಬಿಕೆಯಿಟ್ಟ ಪುರಂದರದಾಸರು ಸಮಾಜವನ್ನು ಒಟ್ಟಿಗೆ ಎತ್ತಿ ನಿಲ್ಲಿಸುವ ಸಾಧನವೆಂದು ತಿಳಿದಿದ್ದರು. ವ್ಯಕ್ತಿಯನ್ನು ಬಿಟ್ಟು ಸಮಾಜವಿಲ್ಲ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಗತ ಧರ್ಮಜೀವನದ ಅವಶ್ಯಕತೆಯಿದೆ. ಧರ್ಮವು ಸತ್ಯ, ನ್ಯಾಯ, ನಿಷ್ಠೆ, ಪ್ರಾಮಾಣಿಕತೆ, ದಯೆ, ಪರೋಪಕಾರ, ತ್ಯಾಗ ಮನೋಭಾವಗಳನ್ನು ಬೆಳೆಸಿ ಸಮಾಜದ ಹಿತವನ್ನು ಬಯಸುತ್ತದೆ. ನಮ್ಮ ಸನಾತನ ಧರ್ಮ ಗ್ರಂಥಗಳು ಈ ಮೇಲಿನ ವಿಷಯಗಳನ್ನು ಎತ್ತಿ ಹಿಡಿದಿವೆ.

ಪರಿಸರ ದೃಷ್ಟಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸುಖ ದುಃಖಗಳಿಗೆ ತಾನೆ ಕಾರಣನು,.."ಯಾರು ಸಂಗಡ ಬಾಹೋರಿಲ್ಲ" ಸತ್ಯದ ಅರಿವು ಮಾಡಿಸುತ್ತಾ ಧರ್ಮವೆಂಬ ಸಂಬಳಗಳಿಸಿಕೊಳ್ಳಿರೋ ಎಂದು ಕರೆ ನೀಡಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯು ಕರ್ತವ್ಯ ವಿಮುಖನಾಗದೆ ತನ್ನ ಪರಿವಾರದೊಂದಿಗೆ ಸಮಾಜದಲ್ಲಿ ಒಂದು ಸ್ಥಾನವನ್ನು ಪಡೆಯಬೇಕು ಎನ್ನುವ ಸಲಹೆಯನ್ನು ನೀಡಿದ್ದಾರೆ. ಆಧ್ಯಾತ್ಮಿಕಕ್ಕೂ ಸಾಮಾಜಿಕ ಪ್ರಜ್ಞೆಗೂ ಬಹಳ ಹತ್ತಿರದ ಸಂಬಂಧವಿದೆ. ತನ್ನ ಅವನತಿಗೆ ತಾನೆ ಕಾರಣನೆಂದು ತಿಳಿದ ನರನು ಇಂದ್ರಿಯ ನಿಗ್ರಹ, ದುರ್ಗುಣ ಗಳನ್ನು ಬಿಡಲು ಪ್ರಯತ್ನಿಸುವನು. ಆಧ್ಯಾತ್ಮ ಚಿಂತಕರು ಧರ್ಮದಲ್ಲಿ ಆಸ್ಥೆವಹಿಸಿ ವೃದ್ಧಾಪ್ಯದಲ್ಲಿಯೂ ಮಾನಸಿಕವಾಗಿ ನೆಮ್ಮದಿಯಾಗಿರಲು ಆಧ್ಯಾತ್ಮವೇ ಕಾರಣ. ಸಂಸಾರ ಸಾಗರದಲ್ಲಿ ತೊಳಲಾಡುತ್ತಿರುವ ಜೀವಿಯು ಪರರಿಂದ ಹಂಗಿಸಿ ಕೊಂಡಾಗಲೂ, ನಿಂದನೆಗೆ ಒಳಗಾದಾಗಲೂ, ಅಪಹಾಸ್ಯಕ್ಕೆ ಗುರಿಯಾದಾಗಲೂ, ತಾಳ್ಮೆಕಳೆದುಕೊಳ್ಳದೇ ಅದರಿಂದಾದ ಉಪಕಾರವೆಂದು ತಿಳಿ ಎಂದಿದ್ದಾರೆ. 'ನಿಂದಕರಿರಬೇಕು ನಿಂದಕರಿರಬೇಕು' ಅವರಿದ್ದಲ್ಲಿ ಮಾತ್ರ ಸಜ್ಜನರು ಇನ್ನೂ ಶುದ್ಧವಾಗಿರಲು ಸಾಧ್ಯ ಎಂದು ಪುರಂದರದಾಸರು ತಿಳಿಸಿದ್ದಾರೆ. ಪುರಂದರದಾಸರು

ನೂರಾರು ಉಗಾಭೋಗಗಳನ್ನು ರಚಿಸಿದ್ದಾರೆ. ಸುಳಾದಿಯಂತೆಯೇ ಉಗಾಭೋಗವು ವಿಶಿಷ್ಟವಾದ ಕೃತಿ. ಅಲ್ಲದೆ ಲಕ್ಷಕ್ಕಿಂತ ಹೆಚ್ಚು ಪದ್ಯಗಳನ್ನು ರಚಿಸಿದ್ದಾರೆ. ಅವೆಲ್ಲವೂ ನಿತ್ಯ ಸಮಾಜದಲ್ಲಿ ನಡೆಯುವ ಘಟನೆಗಳ ತಿರುಳಾಗಿವೆ. ಹೀಗೆ "ಈಸಬೇಕು ಇದ್ದು ಜೈಸಬೇಕು" ಎಂದು ಪುರಂದರ ದಾಸರು ಮಾನವನು ಸುಖವಾಗಿ ಬಾಳಬೇಕಾದರೆ ಏನು ಮಾಡಬೇಕು? ಬದುಕುವ ಬಗೆ ಹೇಗೆ ಎಂಬುದನ್ನು ತೋರಿಸಿದ್ದಾರೆ.

ಸಜ್ಜನ ಸಂಗವ ಮಾಡೋ ಮಾಡೋ।
ದುರ್ಜನ ಸಂಗವ ಬಿಡೋ ಬಿಡೋ।
ಅರ್ಜುನ ಸಾರಥಿಯ ನೋಡೋ ನೋಡೋ।
ಹರಿಭಜನೆಯಲಿ ಮನ ಇಡೋ ಇಡೋ॥
ಹರಿ ಎಂಬೊದೆ ಲಗ್ನ ಬಲವು॥
ಹರಿ ಎಂಬೋದೆ ಸುದಿನ ಬಲವು।
ಹರಿ ಎಂಬೋದದೆ ತಾರಾಬಲವು।
ಹರಿ ಎಂಬೋದೆ ವಿದ್ಯಾಬಲವು
ಅಣಕದಿಂದಾಗಲಿ। ಡಂಬದಿಂದಾಗಲಿ।
ಎದ್ದಾಡಾಗಲಿ। ಬಿದ್ದಾಡಾಗಲಿ।;
ತಾಗಿದಾಡಾಗಲಿ। ತಾಕಿಲ್ಲದಾಡಾಗಲಿ।
ಮರೆದು ಮತ್ತೊಮ್ಮೆಯಾಗಲಿ।
ಹರಿ ಹರಿ ಎಂದವನಿಗೆ ನರಕದ
ಭಯವೇಕೆ ಯಮ ಪಟ್ಟಣ ಕಟ್ಟಿದರೇನು।

ಪುರಂದರದಾಸರ ದೃಷ್ಟಿಯಲ್ಲಿ ಯಾರ ಕೋಪವೂ ಪರಿಣಾಮ ಕಾರಿಯೋ, ಯಾರು ಕಷ್ಟಗಳನ್ನು ಹೋಗಲಾಡಿಸಬಲ್ಲನೋ ಅಂತಹವನಿಗೆ ಜನರು ತಾವಾಗಿ ವಶವಾಗುತ್ತಾರೆ. ಕೋಪವೆ ಇಲ್ಲದ ಮನುಷ್ಯನೊಡನೆ ಸ್ನೇಹದಿಂದ ಆದರವಿಲ್ಲ, ಹಗೆತನದಿಂದ ಭಯವು ಇಲ್ಲ. ಆದ್ದರಿಂದ ಭಗವಂತನಲ್ಲಿ ಅಂಥಹ ಶಕ್ತಿಯಿರುವುದರಿಂದ, ಅವನನ್ನು ನಿತ್ಯ ಪೂಜಿಸುವು ದರಿಂದ, ಮನಸ್ಸಿನ ದುಗುಡ ಕಳೆದು ಒಂದು ಹೊಸ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. (ಎಲ್ಲವನ್ನು ಭಗವಂತನಿಗೆ ಅರ್ಪಿಸಿದಾಗ ಮಾತ್ರ ಸಾಧ್ಯ) ಸಮರ್ಪಣಾ ಭಾವನೆಯ ಮುಖ್ಯವಾಗಿದೆ. ಪುರಂದರದಾಸರು ಆರೋಗ್ಯ ವಂತ ಮನುಷ್ಯನ ಲಕ್ಷಣಗಳನ್ನು ಈ ರೀತಿಯಾಗಿ ತಿಳಿಸಿದ್ದಾರೆ.

ಆಯಸ್ಸು ಇದ್ದರೆ ಅನ್ನಕ್ಕೆ ಕೊರತಿಲ್ಲ।
ಜೀವಕ್ಕೆ ಎಂದೆಂದಿಗೆ ತನುಗಳ ಕೊರತಿಲ್ಲ।
ಹುಟ್ಟು ಸಾವು ಎಂಬೂ ಸಹಜ ಲೋಕದೊಳಗೆ।
ಕಾಲಕಾಲದಿ ಕಲ್ಯಾಣ ಗುಣಗಳ।
ಕೇಳದವನ ಜನ್ಮ ವ್ಯರ್ಥ ಪುರಂದರವಿಠಲ।

ಮನುಷ್ಯನು ಶರೀರ ಹಾಗೂ ಮನಸ್ಸನ್ನು ಸಮನಾಗಿ ಹತೋಟಿ ಯಲ್ಲಿಟ್ಟು ಕೊಂಡಾಗ ಮಾತ್ರ ಸ್ವಸ್ಥನೆನಿಸುತ್ತಾನೆ. ಶರೀರವನ್ನು ದೇಹವನ್ನು ದಂಡಿಸಿದಾಗ ಮಾತ್ರ ಆರೋಗ್ಯವು ಉತ್ತಮವಾಗಿರುತ್ತದೆ. ಒಳ್ಳೆಯ ವಿಚಾರ, ವ್ಯಕ್ತಿತ್ವ, ಸಹವಾಸ ಇದ್ದಾಗ ಮಾತ್ರ ಮನಸ್ಸು ಸ್ಥಿಮಿತದಲ್ಲಿರುತ್ತದೆ. ಭಗವಂತನ ಧ್ಯಾನದಿಂದ ದೇಹದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಬಹುದು. ಪುರಂದರದಾಸರು ನಮ್ಮ ನಿತ್ಯ ಕರ್ಮಾಚರಣೆಗಳನ್ನು ಶ್ರದ್ಧೆಯಿಂದ ಮಾಡಿ ದಾಗ, ಎಲ್ಲದಕ್ಕೂ ಪರಿಹಾರ ಕಂಡುಕೊಳ್ಳಬಹುದೆಂದು ತಿಳಿಸಿದ್ದಾರೆ. ನಾನು, ನನ್ನದು, ನನ್ನವರು, ಅಧಿಕಾರ, ಸಂಪತ್ತು ಎಂಬ ಭ್ರಮೆಗಳನ್ನು ತೊಡೆದು ಹಾಕಲು ಪುರಂದರದಾಸರು ಕರೆ ನೀಡಿದ್ದಾರೆ. ಹುಟ್ಟುವಾಗ ಏನು ತರಲಿಲ್ಲ, ಹೋಗುವಾಗ ಹಾಗೆಯೇ ಹೋಗುವ ಮನುಷ್ಯ ಹುಟ್ಟು ಸಾವಿನ ಮಧ್ಯದ ಜೀವನ ಶಾಶ್ವತವಲ್ಲ ಎಂದು ತಿಳಿದಿದ್ದರೂ ಧನದಾಸೆ ಬಿಡದಿರುವುದನ್ನು ತಿಳಿದು ದಾಸರು ಬುದ್ಧಿಮಾತು ಹೇಳುತ್ತಾರೆ.

ಏತರ ಕಟಪಟಿ ಒಂದು ದಿನ
ನೀ ಹೋಗುತಿ ಲಟಪಟಿ ಬರುವಾಗ ಏನು ತಂದಿ
ಬರುತಲೆ ಎಲ್ಲಾನು ನನ್ನದೆಂದೆ ದುಡ್ಡು
ಕೊಡಿಟ್ಟು ಬಂದು ಹೋಗುವಾಗ
ಬಳಲಿ ಬಳಲಿ ಅಳಮಾರಿಗೆ ಬಂದೆ॥

ಪುರಂದರದಾಸರು ನಾಮತ್ರಯರ ಮಹಾತ್ಮೆಯುಳ್ಳ ಉಗಾಭೋಗ ವನ್ನು ಸುಂದರವಾಗಿ ರಚಿಸಿದ್ದಾರೆ.

ಶ್ರೀರಾಮ ಎಂದರೆ ಭಾಗ್ಯಕ್ಕೆ ಕಾರಣ।
ಶ್ರೀಕೃಷ್ಣ ಎಂದರೆ ದುರಿತ ನಿವಾರಣ।
ಎಚ್ಚತ್ತಿರು ಎಲೆ ಮನವೆ ಎಚ್ಚತ್ತಿಕರು ಎಲೆ ಮನವೆ।
ಏಕೆ ಬೈಲನು ನೆನೆವೆ ಅಚ್ಯುತಾನಂತ ಗೋವಿಂದನೆಂಬ
ನಾಮದಲಿ ಎಚ್ಚತ್ತಿರೆಲೆ ಮನವೆ।

ಶ್ರೀ ಪುರಂದರದಾಸರ ಈ ಉಗಾಭೋಗದಲ್ಲಿ ಶ್ರೀರಾಮ, ಶ್ರೀಕೃಷ್ಣ, ಶ್ರೀಅಚ್ಯುತ, ಶ್ರೀಅನಂತ, ಶ್ರೀಗೋವಿಂದ ನಾಮಗಳ ಮಹತ್ವವನ್ನು ಸಾರಿ ದ್ದಾರೆ. ಇದರಿಂದ ಹರಿದಾಸ ಸಾಹಿತ್ಯವು ಹೇಗೆ ಆಡುನುಡಿಯಲ್ಲಿ ನಿರೂಪಿಸ ಲ್ಪಟ್ಟಿದೆ ಎಂಬುದನ್ನು ನಿರೂಪಿಸಲ್ಪಟ್ಟಿದೆ. ಇಂತಹ ಗುಣವುಳ್ಳದ್ದರಿಂದಲೇ ಶ್ರೀವ್ಯಾಸರಾಜ ಗುರುಸಾರ್ವಭೌಮರು ಸಕಲ ಶಾಸ್ತ್ರಾರ್ಥ ಸಾರರೂಪದಲ್ಲಿ ರುವ ದಾಸಶ್ರೇಷ್ಠರಾದ ಪುರಂದರದಾಸರ ಕೃತಿಗಳನ್ನು ಪುರಂದರೋಪನಿಷತ್ ಎಂದು ಮಾನ್ಯ ಮಾಡಿ ವ್ಯಾಸಪೀಠಕ್ಕೇರಿಸಿದರು.

ವ್ಯಾಸವಾಣಿಯಲ್ಲಿ ಉಲ್ಲೇಖಿಸಲ್ಪಟ್ಟ ಮಾತು ದಾಸವಾಣಿಯಲ್ಲಿ ಈ ಮೇಲಿನ ಉಗಾಭೋಗದಲ್ಲಿ ನೋಡಿದ್ದೇವೆ. 'ಯಾರೆ ಬಯಲು ನೆನೆವೆ' ಎಂದರೆ ಅನಂತಾನಂತ ಗುಣ ಪೂರ್ಣವಾದ ಶ್ರೀಹರಿಯನ್ನು ಶೂನ್ಯ. ನಿರ್ಗುಣ ಎಂದು ಅನ್ಯಥಾ ಉಪಾಸನೆಯನ್ನು ಏಕೆ ಮಾಡುವೆ ಎಂಬುದು ಹರಿದಾಸರ ಭಾವ. ಕೇವಲ ಸಮಾಜದ ಹಿರಿಯರ ಮಾರ್ಗದರ್ಶನ ದಿಂದಂದಲೆ ಬದಲಾವಣೆ ಅಸಾಧ್ಯ. ಧರ್ಮದ ತಿರುಳನ್ನು ಅರಿತು ತನ್ನ ಜೀವನದಲ್ಲಿ ಆ ಅಂಶಗಳನ್ನು ಅರಿತುಕೊಂಡಾಗ ಮಾತ್ರ ಕಷ್ಟಗಳಿಂದ ಹೊರಬರಲು ಸಾಧ್ಯ ದೇಶಗಳನ್ನು ಸುತ್ತಿ ಕಾಲಿಗೆ ಗೆಜ್ಜೆ ಕಟ್ಟಿ ಹಾಡು ಹೇಳುತ್ತ ತಿರುಗಿದ ದಾಸರು ಜನರ ಭಾವನೆಗಳಿಗೆ ಸ್ಪಂದಿಸಿ ಅದರ ಅಜ್ಞಾನದ ಅಂಧಕಾರವನ್ನು ಕಳೆದರು.ದಾಸಸಾಹಿತ್ಯದ ಮೂಲಕ ಸಮಾಜದ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನಗಳಿಂದ ಉತ್ತಮ ಸಮಾಜದ ನಿರ್ಮಾಣದ ಜೊತೆಗೆ ಗುರುಕರುಣೆಯು ದೊರೆಯುವುದು ಸತ್ಯ. ಗುರು ಗಳೊಲಿದ ಮೇಲೆ ಹರಿನೊಲಿಯದಿರುವನೆ.

**ಆಕರ ಗ್ರಂಥಗಳು : -**


1) ಮಹಾಭಾರತ

೨) ಭಾಗವತ

೩) ಹರಿದಾಸ ಸಾಹಿತ್ಯ ಅಧ್ಯಯನ

೪) ಹರಿದಾಸರ ಪದಗಳು

# ಸಂಸ್ಕೃತ ಕಲಿಯೋಣ...!!

## पञ्चमः पाठः ६
## ಪಾಠ : ಆರು

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

यः = ಯಾರು (ಯಾರಾದರೇನು), अन्यः = ಇತರರು स्वः = ತಾನು प्रभृति = ಮೊದಲುಗೊಂಡು, ಯಿಂದ

श्वः = ನಾಳೆ ह्यः= ನಿನ್ನೆ सन्तु = ಅವರು ಇರಲಿ स्त = ಇರುವವನು असाम = ನಾವಿರಲಿ

### ಪ್ರಶ್ನೆ

१. वयम् अद्यप्रभृति तत्र स्मः।
२. यूयं श्वः प्रभृति अत्र स्त।
३. ह्यः अहं तत्रासम्।
४. अन्यः तत्र नासीत्।
५. यः तत्रासीत् सः अहम्।
६. त्वं कः?
७.अहम् एकः।
८. कदा त्वं तत्रासीः?
९. ते ह्यस्तत्रासन्।
१०. तत्र ह्यः के आसन्, अद्य प्रातः प्रभृति के सन्ति?

### ಉತ್ತರ

1. ನಾವು ಇಂದಿನಿಂದ ಅಲ್ಲಿಯೇ ಇದ್ದೇವು.
2. ನೀವು ನಾಳೆಯಿಂದ ಇಲ್ಲ ಇರುವಿರಾ.
3. ನಿನ್ನೆ ನಾನು ಅಲ್ಲ ಇದ್ದೇನು.
4.ಇತರರು ಅಲ್ಲ ಇರಲಿಲ್ಲ.
5. ಯಾರು ಅಲ್ಲ ಇದ್ದನೋ ಅವನು ನಾನೇ.
6. ನಿನ್ಯಾರು?
7. ನಾನು ಒಬ್ಬನೇ
8. ನೀನು ಯಾವಾಗ ಅಲ್ಲದ್ದೇ?
9.ಅವರು ನಿನ್ನೆ ಅಲ್ಲದ್ದರೂ
10. ನಿನ್ನೆ ಅಲ್ಲ ಯಾರಿದ್ದರು. ಇಂದು ಬೆಳಗ್ಗೆಯಿಂದ ಯಾರಿದ್ದಾರೆ?

### ಪ್ರಶ್ನೆ

1. ನಿನ್ನೆ ನೀನು ಅಲ್ಲ ಇಲ್ವಾ ?
2. ನಾನು ಅಲ್ಲ ಇಲ್ಲ
3. ನಾವು ಅಲ್ಲದ್ದೇವೆ.
4. ಅವರು ಇಲ್ಲದ್ದಾರೆ.
5. ನೀವು ಇದಕ್ಕೂ ಮೊದಲು ಎಲ್ಲ ಇದ್ದೀರಿ?
6. ನಾವು ಇಲ್ಲಯೇ ಇದ್ದೆವು.
7. ನೀವು ಅಲ್ಲ ಇದ್ದೀರಾ.
8. ನೀವೆಲ್ಲದ್ದೀರಾ
9. ಅವರೆಲ್ಲರೂ ಇಲ್ಲಯೇ ಇದ್ದರು.
10. ಈಗ ಅಲ್ಲ ಒಬ್ಬನಿದ್ದಾನೆ.

### ಉತ್ತರ

१. ह्यः त्वं तत्र नासीः किम्?
२. अहम् तत्र नासम्।
३. वयं तत्र असाम।
४. ते अत्र सन्तु।
५. यूयम् अद्य प्रभृति कुत्र आस्त?
६. वयं अत्र आस्म।
७. यूयं तत्र आस्त।
८. एते कुत्रासन्!
९. ते सर्वे अत्रासन्।
१०. इदानीं तत्र एकः अस्ति।



# ಅಧ್ಯಾತ್ಮ ರಾಮಾಯಣ

ಡಾ|| ರಾಮಚಂದ್ರ ದಾಸ್ ಸಿ.ಜೆ.
94833 84584

ಪರಬ್ರಹ್ಮನೂ, ಪರಮಾತ್ಮನೂ, ಮರ್ಯಾದಾ ಪುರುಷೋತ್ತಮನೂ ಆದ ಶ್ರೀರಾಮಚಂದ್ರನ ಸ್ಮರಣೆಯು ಭರತ ಭೂಮಿಯಲ್ಲಿನ ಪ್ರತಿಯೊಬ್ಬ ಜೀವಿಯ ನರನಾಡಿಗಳಲ್ಲಿ ಹಾಸು ಹೊಕ್ಕಾಗಿ ಬೆರೆತುಹೋಗಿದೆ. ಶ್ರೀರಾಮನ ಕಥೆಯು ಎಲ್ಲ ಪುರಾಣಗಳಲ್ಲಿ, ಇತಿಹಾಸದಲ್ಲಿ ಪುನಃ ಪುನಃ ವರ್ಣಿತವಾಗಿದೆ. ಶ್ರೀರಾಮನ ಮಹಿಮೆಯನ್ನು ಸಾರಲು ಅನೇಕ ರಾಮಾಯಣಗಳು ಸಂಸ್ಕೃತ ಭಾಷೆಯಲ್ಲಿ ಪ್ರಕಟಗೊಂಡಿರುವುದಲ್ಲದೆ, ಪ್ರತಿಯೊಂದು ಲೋಕಭಾಷೆಯಲ್ಲಿಯೂ ಜಾನಪದಗಳಲ್ಲಿಯೂ ಶ್ರೀರಾಮನ ಕಥೆಯು ಪ್ರಖ್ಯಾತವಾಗಿದೆ.

ಮೂಲರಾಮಾಯಣ ಗ್ರಂಥದ ನಂತರ, ವೈಷ್ಣವಾಗ್ರೇಸರನೂ, ಪರಮ ಭಾಗವತೋತ್ತಮನೂ ಮಹರುದ್ರದೇವನು ತನ್ನ ಪತ್ನಿಯಾದ ಪಾರ್ವತಿಗೆ ಶ್ರೀರಾಮ ತತ್ವದ ಗೂಢ ರಹಸ್ಯ ಮತ್ತು ಚಾರಿತ್ರ್ಯವನ್ನು ವರ್ಣಿಸಿದ್ದನು. ಆ ಉತ್ತಮ ಕಥೆಯೇ "ಅಧ್ಯಾತ್ಮ ರಾಮಾಯಣ" ವೆಂಬ ಹೆಸರಿನಿಂದ ಪುರಾಣದ ರೂಪದಲ್ಲಿ ಜಗತ್ತಿನಲ್ಲಿ ಪ್ರಸಿದ್ಧಿ ಹೊಂದಿತು. ನಂತರದಲ್ಲಿ ಅದು ಅನೇಕ ಮಹರ್ಷಿಗಳು, ಕವಿಗಳು ಮತ್ತು ಮಹಾನುಭಾವರಿಂದ ಜಗತ್ತಿನಲ್ಲಿ ಪ್ರಕಟವಾಗಿ ಶ್ರೀರಾಮನ ಚರಿತೆಯನ್ನು ವರ್ಣಿಸುವ ರಾಮಾಯಣವೆಂಬ ಹೆಸರಿನಿಂದ ಪ್ರಖ್ಯಾತವಾಯಿತು. ಈ ಚರಿತೆಯು ಭಾರತೀಯರ ಜನ ಜೀವನದಲ್ಲಿಂತೂ ಸಾಂಸ್ಕೃತಿಕ ಸಂಪತ್ತಾಗಿ ಎಲ್ಲ ಆದರ್ಶಗಳ ಮಾರ್ಗದರ್ಶಿಯಾಗಿ, ಜೀವನ, ಉಜ್ಜೀವನಕ್ಕೂ ದಾರಿದೀಪವಾಗಿ ವಿಜೃಂಭಿಸುತ್ತಿದೆ.

ಈ ಅಧ್ಯಾತ್ಮ ರಾಮಾಯಣವು ಪಾರಮಾರ್ಥಿಕವಾಗಿ ವಿಶಿಷ್ಟ ಸ್ಥಾನ ಪಡೆದಿದೆ. ಇದರಲ್ಲಿ ಪರಮ ರಸಾಯನ ರಾಮ ಚರಿತ್ರೆಯ ಜೊತೆಗೆ ಜ್ಞಾನ, ಭಕ್ತಿ , ಉಪಾಸನೆ, ಲೋಕನೀತಿ, ಸದಾಚಾರ ಸಂಬಂಧಿ ದಿವ್ಯ ಉಪದೇಶಗಳು, ಅಲ್ಲದೆ ಪ್ರಮೇಯ ಪುಂಜಗಳಿಂದ ಕೂಡಿದ ಅಧ್ಯಾತ್ಮ ತತ್ವಗಳ ವಿವೇಚನೆಯು ಪ್ರಧಾನವಾಗಿ ಪ್ರಚುರಗೊಂಡಿರುವುದರಿಂದ ಈ ಗ್ರಂಥಕ್ಕೆ "ಅಧ್ಯಾತ್ಮ ರಾಮಾಯಣ" ವೆಂಬ ಹೆಸರು ಅನ್ವರ್ಥಕವಾಗಿದೆ. "ಅಧ್ಯಾತ್ಮ ರಾಮಾಯಣ ಮೇತದದ್ಭುತಮ್, ವೈರಾಗ್ಯ ವಿಜ್ಞಾನ ಯುತಂ ಪುರಾತನಂ."ಎಂಬುದಾಗಿ ಈ ಗ್ರಂಥದಲ್ಲಿಯೇ ವರ್ಣಿಸಿದೆ. ಶ್ರೀ ವೇದವ್ಯಾಸದೇವರು ಬ್ರಹ್ಮಾಂಡ ಪುರಾಣದ ಉತ್ತರ ಖಂಡಾತರ್ಗತ ನಿರೂಪಿಸಿದ್ದಾರೆ.

ಅಧ್ಯಾತ್ಮ ರಾಮಾಯಣವು ಬಾಲಕಾಂಡ, ಅಯೋಧ್ಯಾ ಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ, ಯುದ್ಧಕಾಂಡ, ಮತ್ತು ಉತ್ತರಕಾಂಡವೆಂಬ ಏಳು ಭಾಗಗಳಿಂದ ಕೂಡಿದ್ದು ಸುಮಾರು 4200 ಶ್ಲೋಕಗಳಿಂದ ರಚಿತವಾಗಿದೆ. ಪ್ರಾರಂಭದಲ್ಲಿ ಇದರ ಮಹಾತ್ಮೆಯನ್ನು ವರ್ಣಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ ಶ್ರೀರಾಮಹೃದಯ ಮತ್ತು ಶ್ರೀರಾಮಗೀತೆ ಎಂಬ ಭಾಗಗಳಲ್ಲಿ ಪ್ರಮೇಯಗಳ ಪುಂಜವೇ ತುಂಬಿದ್ದು, ರಾಮ ನಾಮ ಪಾಯಸದ ಮಧುರತೆಯನ್ನು ಸವಿಯುವುದರ ಜೊತೆಗೆ, ಪಾಪನಾಶವಾಗಿ ಧಾರ್ಮಿಕತೆಯ ಸೊಗಡು ನೆಲೆಗೊಳ್ಳುತ್ತದೆ. ಪಿತೃಗಳು ಉದ್ಧೃತರಾಗಿ ಹರಸುತ್ತಾರೆ ಎಂದು ಬ್ರಹ್ಮದೇವರು,

ನಾರದರಿಗೆ ಹೇಳಿದ್ದಾರೆ. ಈ ಗ್ರಂಥದಲ್ಲಿ ಕಥಾಭಾಗವನ್ನು ಸಂಕ್ಷಿಪ್ತಗೊಳಿಸಿ, ಪ್ರಮೇಯ, ಜ್ಞಾನ, ಭಕ್ತಿ ಮತ್ತು ವೈರಾಗ್ಯಗಳ ವಿಷಯಗಳ ಹೆಚ್ಚುಗೆಳು ವರ್ಣಿತವಾಗಿವೆ.

ಕಶ್ಯಪರ ತಪಸ್ಸಿಗೆ ಒಲಿದು, ಅವರಿಗೆ ಪುತ್ರರೂಪನಾಗಿ ರಾಮರೂಪದಿಂದ ದಾಶರಥಿಯಾಗಿ ಶ್ರೀಹರಿಯು ಅವತರಿಸಿದ್ದಾನೆ. ಈ ಸಮಯದಲ್ಲಿ ದೇವತೆಗಳು, ಗಂಧರ್ವರು, ಯಕ್ಷರು,ಋಷಿ ಮುನಿಗಳು ವಾನರರಾಗಿ ಭುವಿಯಲ್ಲಿ ಅವತರಿಸಿ ಭಗವಂತನ ಸೇವೆಯನ್ನು ಮಾಡಲು ಬ್ರಹ್ಮ ದೇವರು ಎಲ್ಲರಿಗೂ ಆಜ್ಞಾಪಿಸಿದ್ದಾರೆ.

ತಾತ್ವಿಕವಾಗಿ ಅಧ್ಯಾತ್ಮ ಸೊಗಡಿನಿಂದ ಕೂಡಿದ್ದು, ಅನೇಕ ಋಷಿಗಳು,ದೇವತೆಗಳ ಅವತಾರಕ್ಕೆ ಕಾರಣ, ಸನ್ನಿವೇಶ ಮುಂತಾದುವುಗಳು ಸಂದರ್ಭಾನುಸಾರ ವರ್ಣಿತವಾಗಿವೆ.ದಶರಥನಿಗೆ ವಂಶೋದ್ಧಾರಕ ಮಕ್ಕಳು ಇಲ್ಲದಿದ್ದ ಕಾರಣ ಪುತ್ರ ಕಾಮೇಷ್ಟಿಯಾಗವನ್ನು ಮಾಡುವಂತೆ ಕುಲ ಗುರುಗಳಾದ ವಶಿಷ್ಟರು ಹೇಳಿ, ಆ ಯಜ್ಞವನ್ನು ಋಷ್ಯ ಶೃಂಗರ ಅಧ್ವರ್ಯತ್ವದಲ್ಲಿ ನಡೆಸುವಂತೆ ಸೂಚಿಸಿದರು. ಇಲ್ಲಿ ಋಷ್ಯ ಶೃಂಗರ ಜನ್ಮ ಮಹಿಮೆಯನ್ನು ವರ್ಣಿಸಲಾಗಿದೆ.

ವಿಭಾಂಡಕ ಮುನಿಗಳು ಒಂದು ಕುಂಡದಲ್ಲಿ ಸಮಾಧಿಯಲ್ಲಿ ಕುಳಿತಾಗ, ಆಗ ಅಪ್ಸರೆಯಾದ ಊರ್ವಶಿಯನ್ನು ನೋಡಿದಾಗ ಅವರಿಗೆ ವೀರ್ಯಸ್ಖಲನವಾಗಿ ಅದರಲ್ಲಿನ ನೀರಿನೊಡನೆ ಬೆರೆತುಹೋಯಿತು. ಆ ನೀರನ್ನು ಒಂದು ಹೆಣ್ಣು ಜಿಂಕೆಯು ಕುಡಿದಾಗ ಇವರ ಜನ್ಮವಾಗಿ ತಲೆಯ ಮೇಲೆ ಕೋಡುಗಳು ಮೂಡುವ ಸಂಭವವಿತ್ತು.ಈ ಕಾರಣಕ್ಕಾಗಿ ಇವರಿಗೆ ಋಷ್ಯಶೃಂಗರೆಂದು ಹೆಸರಿಟ್ಟರು. ಅಂಗದೇಶದಲ್ಲಿ ಘೋರವಾದ ಕ್ಷಾಮ ತಲೆ ದೋರಿದಾಗ ಬಾಲ ಬ್ರಹ್ಮಚಾರಿ ತಪೋನಿಷ್ಠ ಋಷ್ಯಶೃಂಗರವನ್ನು ಕರೆತಂದರೆ ಶುಭವಾಗುವುದು ಎಂಬ,ಮುನಿಗಳ ಮಾತಿನಂತೆ ಅವರನ್ನು ಕರೆತಂದಾಗ ಧಾರಾಕಾರ ಮಳೆಯಾಗಿ ಕ್ಷಾಮ ನಿವಾರಣೆಯಾಯಿತು. ಇವರ ಪ್ರಭಾವವನ್ನು ನೋಡಿ, ತನ್ನ ದತ್ತು ಪುತ್ರಿಯಾದ ಶಾಂತಾಳನ್ನು (ಈಕೆಯು ದಶರಥನ ಪುತ್ರಿಯೆಂದೂ, ಅಂಗ ನರೇಶ ರೋಮಪಾದನಿಗೆ ದತ್ತಕವಾಗಿ ಕೊಟ್ಟಿದ್ದನೆಂಬ ಉಲ್ಲೇಖಗಳು ಕೆಲವು ಕಡೆ ಇದೆಯೆಂದು ಹೇಳಲಾಗಿದೆ.) ಅವರಿಗೆ ಕೊಟ್ಟು ವಿವಾಹ ಮಾಡಿದನು.

ಇಂತಹ ಋಷ್ಯಶೃಂಗರ ಅಧ್ವರ್ಯತ್ವದಲ್ಲಿ ನಡೆದ ಪುತ್ರ ಕಾಮೇಷ್ಟಿಯಾಗದ ಫಲಿತವಾಗಿ, ರಾಮ, ಭರತ, ಲಕ್ಷ್ಮಣ ಮತ್ತು ಶತ್ರುಘ್ನರು ದಶರಥನಿಗೆ ಮಕ್ಕಳಾಗಿ ದೊರೆತರು. ವಿಶ್ವಾಮಿತ್ರರ ನಿಮಿತ್ತವಾಗಿ ಭೂಭಾರ ಹರಣ ಮಾಡಲು ಉದ್ದೇಶಿಸಿ, ಮೊದಲು ಸ್ತ್ರೀರೂಪಿಯಾದ ತಾಟಕಿಯನ್ನು ವಧಿಸುವ ಮೂಲಕ ದೈತ್ಯರ ಸಂಹಾರಕ್ಕೆ ನಾಂದಿಯಾಯಿತು. ಸ್ತ್ರೀ ಎಂದರೆ ಮಿಥ್ಯಾಜ್ಞಾನ, ಅನ್ಯಥಾಜ್ಞಾನ ಎಂದು ಅರ್ಥೈಸಲಾಗಿದೆ. ಭಗವಂತನ ಅನುಗ್ರಹ ಆಗಬೇಕಾದರೆ ಮಿಥ್ಯಾಜ್ಞಾನ, ಅನ್ಯಥಾಜ್ಞಾನವನ್ನು ತೊರೆದು ಭಗವಂತನ ಉಪಾಸನೆಗೈದರೆ ಆತನ ಅನುಗ್ರಹವಾಗುವುದು ಎಂಬ ಭಾವ.

ವಿಶ್ವಾಮಿತ್ರರು ನಡೆಸುತ್ತಿದ್ದ ಯಜ್ಞಕ್ಕೆ ಕಂಟಕ ಪ್ರಾಯರಾಗಿದ್ದ ಸುಬಾಹು ಮಾರೀಚನನ್ನು ಸಂಹಾರ ಮಾಡದೆ ಸಮುದ್ರದಲ್ಲಿ ಕೆಡವಿದನು. ಏಕೆಂದರೆ ಭವಿಷ್ಯದಲ್ಲಿ ಸೀತಾಪಹರಣದ (ಪ್ರತಿಕೃತಿ) ಸಮಯದಲ್ಲಿ ಮಾರೀಚನ ಪಾತ್ರವಿದ್ದು ಆ ಸಮಯದಲ್ಲಿ ಅವನ ವಧೆಯಾಗುತ್ತದೆ. ನಂತರದಲ್ಲಿ ಮಿಥಿಲೆಯಲ್ಲಿ ಶಿವಧನುಸ್ಸನ್ನು ಮುರಿದು ಜನಕರಾಜನ ಪುತ್ರಿ ಸೀತೆಯನ್ನು ರಾಮನು ವಿವಾಹವಾದನು.ಜೊತೆಗೆ ಲಕ್ಷ್ಮಣನು ಊರ್ಮಿಳೆಯನ್ನು ಭರತನು ಮಾಂಡವಿಯನ್ನು ಶತ್ರುಘ್ನನು ಶೃತಕೀರ್ತಿಯನ್ನು ವಿವಾಹವಾದರು.

ರಾಮನಿಗೆ ಪಟ್ಟಾಭಿಷೇಕವಾಗುವ ಸಮಯದಲ್ಲಿ ಬ್ರಹ್ಮದೇವರ ಆದೇಶದಂತೆ ಸರಸ್ವತಿ ದೇವಿಯು ಮಂಥರೆಯ ನಾಲಿಗೆಯಲ್ಲಿ ನಿಂತು, ರಾಮಾಯಣದ ಎಲ್ಲ ಘಟನೆಗಳಿಗೆ ಅಡಿಪಾಯವಾಗುವಂತೆ, ಕೈಕೇಯಿಯು ದಶರಥನಿಂದ, ಭರತನಿಗೆ ಪಟ್ಟಾಭಿಷೇಕ ಮತ್ತು ರಾಮನನ್ನು 14 ವರ್ಷ ವನವಾಸಕ್ಕೆ ಕಳುಹಿಸುವಂತೆ ಹಟದಿಂದ ವರವನ್ನು ಪಡೆದುಕೊಂಡ ಕಾರಣದಿಂದಾಗಿ ದಶರಥನ ಅವಸಾನವೂ ಆಯಿತು.

ಭಗವಂತನು ದೇವತೆಗಳಿಗೆ ನೀಡಿದ ವರದಂತೆ ಭೂಭಾರ ಹರಣ ಮಾಡಲು ಸೀತೆ ಮತ್ತು ಲಕ್ಷ್ಮಣನೊಡನೆ ವನವಾಸಕ್ಕೆ ತೆರಳಿದನು. ಶೇಷದೇವರು ಪರಮಾತ್ಮನ ಹಾಸಿಗೆಯಾಗಿದ್ದು ಸದಾ ಜೊತೆಗಿರಬೇಕಾದ್ದರಿಂದ, ಶೇಷನೇ ಲಕ್ಷ್ಮಣನಾಗಿ ಅವತರಿಸಿ ಭಗವಂತನ ಸೇವೆಗೈಯುತ್ತಿದ್ದನು. ರಾಮಾವತಾರದಲ್ಲಿ ಚಕ್ರ ಮತ್ತು ಶಂಖದ ಅವಶ್ಯಕತೆ ಕಡಿಮೆ ಇದ್ದುದರಿಂದ ಭರತ (ಚಕ್ರ) ಮತ್ತು ಶತ್ರುಘ್ನ (ಶಂಖ) ಇವರುಗಳನ್ನು ಅಯೋಧ್ಯೆಯಲ್ಲಿಯೇ ಬಿಟ್ಟು ಗಂಗಾ ನದಿಯನ್ನು ಗುಹನ ಸಹಾಯದಿಂದ ದಾಟಿ ಭರದ್ವಾಜ ಮುನಿಗಳ ಭೇಟಿಯ ನಂತರ ಚಿತ್ರಕೂಟದಲ್ಲಿ ವಾಲ್ಮೀಕಿ ಋಷಿಗಳು ಆಶ್ರಮಕ್ಕೆ ತೆರಳಿದರು. ವಾಲ್ಮೀಕಿ ಮುನಿಗಳು ಮತ್ತು ರಾಮಾಯಣಕ್ಕೂ ಅವಿನಾಭಾವ

ಸಂಬಂಧವಿದೆ. ಇವರ ಹುಟ್ಟು, ಆಚಾರ ಇವುಗಳ ಬಗ್ಗೆ ವಿವರವಾದ ವರ್ಣನೆ ಇದೆ. ಇವರನ್ನು ಆದಿಕವಿ ಎಂದೇ ಕರೆಯಲಾಗುತ್ತಿದೆ. ಕೆಲವೊಂದು ಘಟನೆಗಳು ಜೀವನದ ದಿಕ್ಕನ್ನೇ ಬದಲಿಸಿ ಬಿಡುತ್ತವೆ. ಹಾಗೆಯೇ ಇವರ ಜೀವನದಲ್ಲಿ ಸಪ್ತರ್ಷಿಗಳೊಡನೆಯ ಭೇಟಿಯಿಂದ ಮನಸ್ಸು ಪರಿವರ್ತನೆಯಾಗಿ ಪಾಪ ಪುಣ್ಯ ಕರ್ಮಗಳ ಬಗ್ಗೆ ಅರ್ಥ ವಾಗಿ ವೈರಾಗ್ಯ ಮೂಡಿತು. ಅವರ ಅನುಗ್ರಹದಿಂದ “ಮರಾ..ಮರಾ” ಎಂಬ ಜಪಮಾಡಿ ರಾಮನ ಅನುಗ್ರಹಕ್ಕೆ ಪಾತ್ರರಾಗಿ ರಾಮಾಯಣ ಮಹಾಗ್ರಂಥವನ್ನು ರಚಿಸಿ ಅದನ್ನು ಕುಶ, ಲವರ ಮೂಲಕ ರಾಮನ ಆಸ್ಥಾನದಲ್ಲಿಯೇ ಪ್ರಚುರ ಪಡಿಸಿದ ಮಹಾಮಹಿಮರು.

ದಶರಥ ಮಹಾರಾಜನು ಸ್ವರ್ಗಸ್ಥನಾದ ಮೇಲೆ , ಭರತನ ಭ್ರಾತೃ ಪ್ರೇಮ, ನಿಸ್ವಾರ್ಥ ಬದುಕು ಇವುಗಳು ಜಗತ್ತಿಗೆ ಅನೇಕ ಸಂದೇಶಗಳನ್ನು ನೀಡಿದೆ. ರಾಮನನ್ನು ವನವಾಸದಿಂದ ಹಿಂದಕ್ಕೆ ಕರೆದುಕೊಂಡು ಹೋಗಲು ವಶಿಷ್ಟರ ಜೊತೆಗೆ ಕೌಸಲ್ಯಾದಿ ಎಲ್ಲರೂ ಬಂದು ಕೇಳಿದರೂ, ಕೈಕೇಯಿಯನ್ನು ಸ್ವತಃ ರಾಮನೇ ಸಮಾಧಾನ ಪಡಿಸಿದ್ದು ಅಚಿಂತ್ಯಾದ್ಭುತ ಘಟನೆ. ಶರಭಂಗ, ಸುತೀಕ್ಷ್ಣ, ಅಗಸ್ತ್ಯರ ದರ್ಶನ ಮಾಡಿದ ನಂತರ ಪಂಚವಟಿಯಲ್ಲಿ ಲಕ್ಷ್ಮಣನಿಗೆ ಉಪದೇಶ ಮಾಡಿದನು. ಖರ, ದೂಷಣರ ವಧೆ ಮಾಡಿ, ಶೂರ್ಪಣಖೆಯ ಕಿವಿ ಮೂಗುಗಳನ್ನು ಛೇದನ ಮಾಡಿದ್ದು ರಾಮ - ರಾವಣರ ಯುದ್ಧಕ್ಕೆ ನಾಂದಿಯಾಯಿತು. ಮಾರೀಚನ ಪ್ರವೇಶ ಇಲ್ಲಿ ಆಗಿ ಸೀತಾಪಹರಣದ ಕಾರ್ಯವಾಗಿದ್ದಲ್ಲದೆ, ಮಾರೀಚನ ವಧೆಯೂ ಆಯಿತು.

ರಾವಣನು ಸೀತಾಪಹರಣವನ್ನು ಮಾಡಿದರೂ, ಸೀತೆ (ಅವಳ ಪ್ರತಿಕೃತಿ)ಯನ್ನು ಬಲಾತ್ಕಾರ ಮಾಡುವಂತಿರಲಿಲ್ಲ. ಕಾರಣ ರಂಭಾ ಎನ್ನುವ ಅಪ್ಸರೆಯನ್ನು ಬಲಾತ್ಕಾರ ಮಾಡಿದಾಗ, ಕುಬೇರನ ಮಕ್ಕಳಾದ ನಳ,ಕೂಬರ ಇವರು ಶಾಪಕೊಟ್ಟಿದ್ದರು. ನಂತರ ಪುನಃ ಪುಂಜಿ ಕಸ್ಥಲಾ ಎಂಬ ಅಪ್ಸರೆಯನ್ನು ಇವನು ಭೋಗಿಸಿದಾಗ, ಬ್ರಹ್ಮದೇವರು ಶಾಪವನ್ನಿತ್ತು, “ನೀನು ಇಂದಿನಿಂದ ಯಾವುದೇ ಸ್ತ್ರೀಯನ್ನು ಬಲಾತ್ಕಾರ ಮಾಡಿದರೆ ನಿನ್ನ ತಲೆಯು ಸಾವಿರ ಹೋಳಾಗುತ್ತದೆ” ಎಂದು ಶಪಿಸಿದರು.

ಗಂಧರ್ವನೊಬ್ಬನು ರೂಪ ಯೌವ್ವನದ ಮದದಿಂದ ಇದ್ದು, ಅಷ್ಟಾವಕ್ರರೆಂಬ ಮುನಿಯ ಶಾಪದಿಂದ ರಾಕ್ಷಸನಾಗಿ ಜನ್ಮ ತಾಳಿದ್ದು, ಇಂದ್ರದೇವರ ಹೊಡೆತದಿಂದ ವಿಕಾರ ರೂಪದ ಕಬಂಧನೆಂಬ ಹೆಸರಿನಿಂದಿದ್ದು,ರಾಮನ ಅನುಗ್ರಹದಿಂದ ಉದ್ಧೃತನಾದನು. ಮತಂಗರ ಶಿಷ್ಯಳಾದ ಶಬರಿಯ ಆತಿಥ್ಯ ಸ್ವೀಕರಿಸಿ ಅವಳನ್ನು ಉದ್ಧರಿಸಿದನು ಹನುಮಂತನ ಮೂಲಕ ಸುಗ್ರೀವನ ಸಖ್ಯವನ್ನು ಬೆಳೆಸಿ, ಮಹಾಪರಾಕ್ರಮಿಯಾದ ವಾಲಿಯನ್ನು ವಧಿಸಿ, ಅವನಿಗೆ



ಸದ್ಗತಿಯನ್ನಿತ್ತನು. ವಾಲಿಯ ಪತ್ನಿ ಯಾದ ತಾರೆಯೊಡನೆ ರಾಮನ ಸಂವಾದವು ತತ್ವ ಪೂರಿತವಾಗಿದೆ. ಸುಗ್ರೀವನು ಕಪಿಗಳನ್ನು ನಾಲ್ಕೂ ದಿಕ್ಕಿಗೆ ಕಳುಹಿಸಿ ಸೀತೆಯನ್ನು ಹುಡುಕುವಂತೆ ಆದೇಶಿಸಿದ್ದನು. ಸಂಪಾತಿಯು, ಹನುಮಂತನಿಗೆ ಲಂಕೆಯಲ್ಲಿರುವ ಸೀತೆಯ ವಿಷಯವನ್ನು ತಿಳಿಸಿ ರಾಮಧ್ಯಾನ ಮಾಡಿದ್ದರಿಂದ ಅವನ ಸುಟ್ಟ ಹೋದ ರೆಕ್ಕೆಗಳು ಪುನಃ ಚಿಗುರಿದವು.

ಹನುಮಂತನು ಸಾಗರ ಲಂಘಿಸಿ ಸುರಸೆಗೆ ಸದ್ಗತಿಯಿತ್ತು, ಸಿಂಹಿಕೆಯನ್ನು ಸಂಹರಿಸಿ ಬ್ರಹ್ಮದೇವರಿಂದ ವರಪಡೆದ ಲಂಕಾಧಿದೇವತೆ ಲಂಕಿಣಿಯನ್ನು ಸೋಲಿಸಿ, ಅಶೋಕವನದಲ್ಲಿದ್ದ ಸೀತೆಗೆ ನಂಬಿಕೆ ಬರುವಂತೆ, ಶ್ರೀ ರಾಮನ ಕಥೆಯನ್ನು ಹೇಳುತ್ತಾ ರಾಮನು ಕೊಟ್ಟಿದ್ದ ಮುದ್ರೆಯುಂಗುರವನ್ನು ಕೊಟ್ಟನಂತರ ಹನುಮಂತನನ್ನು ನಂಬಿ ಎಲ್ಲ ವಿಷಯವನ್ನು ಹೇಳಿ ಚೂಡಾಮಣಿಯನ್ನು ಹನುಮಂತನಿಗೆ ಕೊಟ್ಟಳು. ನಂತರ ಸೀತೆಗೆ ವಂದಿಸಿ, ರಾವಣನನ್ನು ಸಂದರ್ಶಿಸಿ, ಇಲ್ಲಿಯ ಸೈನ್ಯ, ಶತ್ರುವಿನ ಬಲ ಇತ್ಯಾದಿಗಳನ್ನು ತಿಳಿದುಕೊಂಡು ಹೋಗಬೇಕೆಂದು ನಿಶ್ಚಯಿಸಿ, ಅದಕ್ಕೆ ಒಂದು ಕಾರಣವನ್ನು ಸೃಷ್ಟಿಸಲು ಅಶೋಕವನ್ನು ನಾಶಮಾಡಿದನು. ಈ ವಿಷಯ ತಿಳಿದ ರಾವಣನು ತನ್ನ ಸೈನ್ಯ ಮತ್ತು ಮಗನಾದ ಅಕ್ಷ ಕುಮಾರನನ್ನು ಕಳುಹಿಸಿದಾಗ ಹನುಮಂತನು ಅವ ರೆಲ್ಲರನ್ನು ಸಂಹರಿಸಿದನು. ನಂತರ ಇಂದ್ರಜಿತ್ (ಮೇಘನಾದ)ನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಹನುಮಂತನು ವಾಯುಪುತ್ರರಾಗಿದ್ದುದರಿಂದಲೂ ಆ ಅಸ್ತ್ರಕ್ಕೆ ಬ್ರಹ್ಮ ವಾಯುಗಳೇ ಅಭಿಮಾನಿಗಳಾದ್ದರಿಂದ ಅವನಿಗೆ ಏನೂ ಮಾಡಲಿಲ್ಲ. ಅಲ್ಲದೆ ಬ್ರಹ್ಮಾಸ್ತ್ರದಿಂದ ಬಂಧಿತನಾದಾಗ ಬೇರೆ ಹಗ್ಗ ಇತ್ಯಾದಿಗಳಿಂದ ಬಂಧಿಸಿದರೆ ಆ ಅಸ್ತ್ರವು ಹೊರಟು ಹೋಗುತ್ತದೆ. ಆದರೂ ರಾವಣನನ್ನು

ನೋಡುವ ಉದ್ದೇಶದಿಂದ ಬಂಧಿತನಾದಂತೆ ನಟಿಸಿ ರಾವಣನ ಬಳಿ ಬಂದನು. ಅವರಿಬ್ಬರ ಸಂವಾದದಲ್ಲಿ ರಾವಣನಿಗೆ, ಸೀತೆಯನ್ನು ಬಿಟ್ಟು ಬಿಡುವಂತೆ ಹೇಳಿದರೂ ಉಪಯೋಗವಾಗದೆ, ಹನುಮಂತನ ಬಾಲಕ್ಕೆ ಬೆಂಕಿಯನ್ನು ಹಚ್ಚಿದರು. ಅದೇ ಬೆಂಕಿಯಿಂದ ಲಂಕಾನಗರದಲ್ಲಿ ಅನೇಕ ಭವನಗಳನ್ನು ದಹಿಸಿ, ರಾಮನ ಬಳಿಗೆ ಕಿಷ್ಕಿಂಧೆಗೆ ಹಿಂತಿರುಗಿ, ಚೂಡಾಮಣಿ ಇತ್ತು ಎಲ್ಲ ವಿವರಗಳನ್ನು ನೀಡಿದನು.

ಲಂಕೆಯಲ್ಲಿ, ವಿಭೀಷಣನು ರಾವಣನಿಗೆ ಉಪದೇಶಿಸಿದರೂ ಪ್ರಯೋಜನವಾಗದೆ ಇದ್ದಾಗ, ಅವನನ್ನು ತೊರೆದು ರಾಮನ ಬಳಿ ಬಂದು ಶರಣಾಗತನಾದನು. ನಂತರ ವಾನರರೆಲ್ಲರೂ ರಾಮನಾಮವನ್ನು ಸ್ಮರಿಸುತ್ತಾ ಸಾಗರದಲ್ಲಿ ಸೇತುವೆಯನ್ನು ನಿರ್ಮಿಸಿ (ಇದೇ ರಾಮಸೇತು ಎಂದು ಜಗತ್ಪ್ರಸಿದ್ಧಿಯಾಗಿದೆ.) ರಾಮಲಕ್ಷ್ಮಣರೊಡನೆ ಎಲ್ಲರೂ ಲಂಕೆಯ ಸಮೀಪ ಬಂದು ನೆರೆದರು. ಯುದ್ಧವು ಪ್ರಾರಂಭವಾಗಿ ರಾವಣನ ಕಡೆಯ ಅನೇಕರು ನಾಶವಾಗಲು ರಾವಣನು ತಾನೇ ಸ್ವತಃ ಬಂದನು. ವಿಭೀಷಣನನ್ನು ಸಂಹರಿಸಲು ಶಕ್ತ್ಯಾಯುಧ ಪ್ರಯೋಗಿಸಿದಾಗ, ಅವನನ್ನು ಉಳಿಸಲು ಲಕ್ಷ್ಮಣನು ಅಡ್ಡ ಬಂದಿದ್ದರಿಂದ ಅದು ತಗುಲಿ ಮೂರ್ಛಿತನಾದನು. ಕೂಡಲೆ ರಾಮನು ಹನುಮಂತನಿಗೆ, ಔಷಧಗಳ ಭಂಡಾರದಂತಿರುವ ದ್ರೋಣಗಿರಿ (ಸಂಜೀವಿನಿ ಪರ್ವತ) ಪರ್ವತವನ್ನು ತರುವಂತೆ ಸೂಚಿಸಿದಾಗ ಹನುಮಂತನು ಹಾಗೆಯೇ ಕ್ಷಣ ಮಾತ್ರದಲ್ಲಿ ತಂದುದರಿಂದ ಲಕ್ಷ್ಮಣ ಮತ್ತು ಅನೇಕ ವಾನರರು ಜೀವಂತವಾದರು. ಬ್ರಹ್ಮ ದೇವರವರ ಬಲದಿಂದ ಕೊಟ್ಟಿದ್ದ ಇಂದ್ರಜಿತ್ತುವನ್ನು ಲಕ್ಷ್ಮಣನು ಸಂಹರಿಸಿದನು ರಾವಣನ ಸಂಹಾರವು ಮನುಷ್ಯ ಮಾತ್ರದಿಂದ ಎಂಬುದಾಗಿ ಬ್ರಹ್ಮ ದೇವರವರವಿತ್ತು. ಹಾಗಾಗಿ ರಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರವು ರಾವಣನ ನಾಭಿಯಲ್ಲಿದ್ದ ಅಮೃತಕಲಶ ನಾಶಪಡಿಸಿ, ಎದೆಯನ್ನು ಸೀಳಿದ್ದರಿಂದ ರಾವಣನು ಹತನಾದನು.

ಶ್ರೀರಾಮನು, ವಿಭೀಷಣ, ಹನುಮಂತ ಮೊದಲಾದವರೊಡನೆ ಲಂಕೆಯನ್ನು ಪ್ರವೇಶಿಸಿ, ವಿಭೀಷಣನನ್ನು ಲಂಕಾಧಿಪತಿಯನ್ನಾಗಿ ನೇಮಿಸಿದನು. ನಂತರ ಅಗ್ನಿ ದೇವನು ಸೀತೆಯನ್ನು ಕರೆದುಕೊಂಡು ಬಂದು ರಾಮನಿಗೆ ಒಪ್ಪಿಸಿದನು. ಪುಷ್ಪಕವಿಮಾನ ಮತ್ತು ಇತರ ವಾಹನಗಳಲ್ಲಿ ರಾಮನು, ಸೀತೆ, ಲಕ್ಷ್ಮಣ, ಹನುಮಂತ ಮುಂತಾದವರೊಡನೆ, ನಂದಿಗ್ರಾಮದಲ್ಲಿದ್ದ ಭರತನೊಡನೆ ಅಯೋಧ್ಯೆ ಪ್ರವೇಶಿಸಿದನು.

ಅಯೋಧ್ಯೆಯಲ್ಲಿ ಶ್ರೀರಾಮ ಪಟ್ಟಾಭಿಷೇಕವಾಗಿ ರಾಮರಾಜ್ಯ ಸ್ಥಾಪಿತವಾಯಿತು. ಅಧ್ಯಾತ್ಮ ರಾಮಾಯಣದಲ್ಲಿ ಅನೇಕ ಪ್ರಮೇಯ, ವಿಷಯಗಳ ವಿವರಣೆ ಮುಂತಾದವುಗಳಿವೆ. ಇವೆಲ್ಲ ಘಟನೆಗಳನ್ನು ಆಧರಿಸಿ ನಾರದರ ಉಪದೇಶದಂತೆ ವಾಲ್ಮೀಕಿ ಮುನಿಗಳು ರಾಮಾಯಣ ಗ್ರಂಥವನ್ನು ರಚಿಸಿ ಜಗತ್ತಿಗೆ ಮಹದುಪಕಾರ ಮಾಡಿದ್ದಾರೆ. ಮರ್ಯಾದಾ ಪುರುಷೋತ್ತಮನೂ, ಜಗದೊಡೆಯನೂ ಆದ ಶ್ರೀರಾಮನ ಚರಿತ್ರೆಯು ಪರಮ ಪವಿತ್ರಕರವಾಗಿದೆ.





ಯುಗಾದಿ

ತಿರುಮಲೆಯ ಯಾತ್ರಿಕರಿಗೆ , ಶ್ರೀ ವೆಂಕಟೇಶ್ವರಸ್ವಾಮಿಯ ಭಕ್ತರಿಗೆ, ಸಪ್ತಗಿರಿ ಮಾಸಪತ್ರಿಕೆಯ

ಓದುಗರಿಗೆ,ಚಂದಾದಾರರಿಗೆ, ಏಜಂಟರಿಗೆ

"ಪ್ಲವ ನಾಮ ಸಂವತ್ಸರ"

ಶುಭಪ್ರದವಾಗಿರಲಿ


ಶ್ರೀ ವೆಂಕಟೇಶ್ವರಸ್ವಾಮಿಯು ಅನುಗ್ರಹ ಪೂರ್ಣವಾಗಿ ಎಲ್ಲರನ್ನೂ ಕಾಪಾಡಲಿ ಎಂದು 'ಸಪ್ತಗಿರಿ' ಯ ಹೃತ್ಪೂರ್ವಕ ಹಾರೈಕೆಗಳು

- ಪ್ರಧಾನ ಸಂಪಾದಕರು

# ಶ್ರೀ ರಾಮಾನುಜರ ಶ್ರೀ ಭಾಷ್ಯ

- ಡಾ॥ ಸಿ.ಎಸ್. ಊರ್ಮಿಳಾ

98408 36940



ಯೋ ನಿತ್ಯ ಮಚ್ಯುತ ಪದಾಂಭುಜ ಯುಗ್ಮರುಕ್ಮ
ವ್ಯಾಮೋಹತ ಸ್ತದಿತರಾಣಿ ತೃಣಾಯಮೇನೆ ।
ಅಸ್ಮದ್ಗುರೋ ರ್ಭಗವತೋಸ್ಯ ದಯೈಕ ಸಿಂಧೋ
ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ ॥

ಶ್ರೀ ಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ - ಎಂದು ಇಡೀ ಜೀವಕೋಟಿಗೆ ಅಭಯವನ್ನಿತ್ತಿದ್ದಾನೆ. ಅಂತೆಯೇ ಕೃತಯುಗದ ದೇವಾಸುರ ಸಂಘರ್ಷದಲ್ಲಿ, ತ್ರೇತಾಯುಗದ ರಾವಣಾಸುರ ವಧೆಯಲ್ಲಿ,ದ್ವಾಪರಯುಗದ ದುಷ್ಟ ಶಿಕ್ಷಣ ಶಿಷ್ಟಪರಿಪಾಲನಾರ್ಥವಾಗಿ ಅವತರಿಸಿ ಮಮ ಪ್ರಾಣಾಃಹಿಪಾಂಡನಾ ಎಂಬ ಮಾತನ್ನು ಉಳಿಸಿಕೊಂಡು ದುರ್ಯೋಧನ ದುಶ್ಯಾಸನಾದಿಗಳನ್ನು ಸಂಹರಿಸಿ ಪಂಚಪಾಂಡವರನ್ನು ರಕ್ಷಿಸಿದನು. ಈ ಕಲಿಯುಗದಲ್ಲಿ ಯವನ, ಶಕ, ಹೂಣರ ಆಕ್ರಮಣದಿಂದ ಮಾತ್ರವಲ್ಲದೆ ವಿಗ್ರಹಭಂಜಕರಾದ ಬರ್ಬರರಿಂದಲೂ ಕುಟಿಲಪರಂಗಿಗಳ ಕುತಂತ್ರದಿಂದ ಸನಾತನ ಹಿಂದೂ ಸಂಸ್ಕೃತಿಯನ್ನು ರಕ್ಷಿಸಲು ಶ್ರೀರಂಗನಾಥನೇ ತನ್ನ ಆಪ್ತಕಿಂಕರನಾದ ಆದಿಶೇಷನನ್ನು ಈ ಭುವಿಗೆ ಕಳುಹಿಸಿದನು. ಆದಿಶೇಷನ ಅವತಾರವೇ ಶ್ರೀರಾಮಾನುಜಾಚಾರ್ಯ.

ಶ್ರೀರಾಮಾನುಜರ ಸಹಸ್ರಮಾನೋತ್ಸವದಲ್ಲಿ ನಾವೆಲ್ಲ ಇದ್ದು ಭಕ್ತಿ ಸಾಗರದಲ್ಲಿ ಮುಳುಗಿದೆವಲ್ಲಾ ಅದೇ ನಮ್ಮೆಲ್ಲರ ಭಾಗ್ಯ.ಶ್ರೀರಾಮಾನುಜರ ಕಾಲದಲ್ಲಿ ಜೈನ, ಬೌದ್ಧಮತಗಳು ಅತ್ಯಂತ ಪ್ರಬಲವಾಗಿದ್ದವು. ಹೀಗಾಗಿ ಸನಾತನ ಧರ್ಮವು ನಶಿಸಿ ಹೋಗುತ್ತಾ ಇದ್ದವು. ಈ ಸಂದರ್ಭದಲ್ಲಿ ಶ್ರೀರಾಮಾನುಜರು ಈ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ನಿರತರಾದರಷ್ಟೇ ಅಲ್ಲದೇ ಈ ಸನಾತನ ಧರ್ಮಕ್ಕೆ ಪುನಶ್ಚೇತನ ನೀಡುವಲ್ಲಿ ಯಶಸ್ವಿಯಾದರು. ಶ್ರೀವೈಷ್ಣವ ಭಕ್ತಿಯ ಆಂಧೋಲನವನ್ನೇ ಆರಂಭಿಸಿದರು.

ಶ್ರೀರಾಮಾನುಜರು ಚೋಳರಾಜನ ಕಿರುಕುಳವನ್ನು ಸಹಿಸದೆ ಕರ್ನಾಟಕಕ್ಕೆ (ಮೇಲುಕೋಟೆ) ವಲಸೆ ಬಂದರು. ಹೊಯ್ಸಳ ರಾಜನಾದ ಬಿಟ್ಟಿದೇವನು ಶ್ರೀರಾಮಾನುಜರ ದಿವ್ಯ ತೇಜಸ್ಸಿಗೆ ಮಾರು ಹೋದನು. ಅಷ್ಟೇ ಅಲ್ಲ ಬಿಟ್ಟಿದೇವನ ಮಗಳು ಭೂತಚೇಷ್ಠೆಯಿಂದ ನರಳುತ್ತಿದಳು. ಅವಳಿಗೆ ಚಿಕಿತ್ಸೆ ನೀಡಲು ಯಾರಿಗೂ ಸಾಧ್ಯವಾಗ ಅಲ್ಲ. ಶ್ರೀರಾಮಾನುಜರ ದಿವ್ಯ ಪ್ರಭಾವ ದಿಂದಾಗಿ ರಾಜನ ಮಗಳ ಭೂತಚೇಷ್ಠೆ ದೂರವಾಯಿತು. ನಂತರ ಈ ಹೊಯ್ಸಳ ರಾಜನೇ ರಾಮಾನುಜರನ್ನು ತನ್ನ ಗುರುಗಳನ್ನಾಗಿ ಸ್ವೀಕರಿಸಿ ಅವರಿಂದಲೇ ವೈಷ್ಣವ ದೀಕ್ಷೆ ಪಡೆದು ವಿಷ್ಣುವರ್ಧನ ಮಹಾರಾಜ ಎಂದು ಹೆಸರು ಪಡೆದನು. ಬಿಟ್ಟಿ ದೇವನ ಆಸ್ಥಾನದಲ್ಲಿ ಅನೇಕ ಜೈನ ವಿದ್ವಾಂಸರು ಈ ಘಟನೆಯಿಂದ ವಿಚಲಿತರಾಗಿ ಶ್ರೀರಾಮಾನುಜರೊಡನೆ ವಾದ ಮಾಡಿ ಸೋತರು. ಶ್ರೀರಾಮಾನುಜರು ವಿಷ್ಣುವರ್ಧನ ರಾಜನ ಬೆಂಬಲ ಪ್ರೋತ್ಸಾಹದಿಂದಾಗಿ ಪಂಚ ನಾರಾಯಣ ಕ್ಷೇತ್ರಗಳನ್ನು ಹಾಗೂ ಮೇಲುಕೋಟೆಯ ಬಳಿ ಇರುವ ತಿರುಮಲ ಸಾಗರವನ್ನು ನಿರ್ಮಿಸಿದರು. ಶ್ರೀರಾಮಾನುಜರ

ಆಧ್ಯಾತ್ಮಿಕ ಪ್ರಭಾವದಿಂದಾಗಿ ಇಡೀ ಭಾರತ ದಲ್ಲಿಯೇ ಹೊಸ ಚೈತನ್ಯ ಮೂಡಿತು.

ಆಧ್ಯಾತ್ಮಿಕ ಜಗತ್ತಿನಲ್ಲಿ ಶ್ರೀರಾಮಾನುಜರ ಕೊಡುಗೆ ಅತ್ಯಮೂಲ್ಯವಾದುದು ನವರತ್ನ ಗಳಂತೆ ಶೋಭಿಸುವ ನವಗ್ರಂಥಗಳನ್ನು ಇವರು ರಚಿಸಿದ್ದಾರೆ. ಅವುಗಳಲ್ಲಿ "ಶ್ರೀಭಾಷ್ಯ" ಎಂಬು ವುದು ಅತ್ಯಮೂಲ್ಯವಾದ ಗ್ರಂಥ ವೇದ, ಉಪ ನಿಷತ್ತುಗಳಲ್ಲಿ ಬರುವ ಪ್ರಮುಖವಾದ ವಾಕ್ಯ ಗಳನ್ನು ಆರಿಸಿ ಅವುಗಳಲ್ಲಿ ಬರುವಂತಹ ಸಂದೇಹಗಳನ್ನು ಪರಿಹರಿಸಲು ಶ್ರೀವೇದ ವ್ಯಾಸರು ಸೂತ್ರಗಳನ್ನು ರಚಿಸಿದರು. ಇದರಲ್ಲಿ 545 ಸೂತ್ರಗಳಿವೆ. ಈ ಸೂತ್ರಗಳಲ್ಲಿ ಎಲ್ಲಾ ಉಪ ನಿಷತ್ತುಗಳಲ್ಲಿಯೂ ಬರುವ ಪ್ರಮುಖ ವಾಕ್ಯಗಳಿಗೆ ನಿಷ್ಕೃಷ್ಟವಾದ ಅರ್ಥಗಳನ್ನು ನಿರೂಪಿಸಿ ವೇದಾಂತ ದರ್ಶನ ಸ್ಥಾಪನೆ ಮಾಡಿದವರು ಶ್ರೀವ್ಯಾಸಭಗವಾನರು. ಈ ಬ್ರಹ್ಮಸೂತ್ರವು ಬೋಧಾಯನ ಮುನಿಗಳಿಂದ ವಿವರಿಸಲ್ಪಟ್ಟು ಟಂಕ, ದ್ರವಿಡ, ಗುಹದೇವ ಮುಂತಾದ ವಿದ್ವಾಂ ಸರು ಅದನ್ನು ಸಂಗ್ರಹಿಸಿದರು. ಕಾಲಕ್ರಮದಲ್ಲಿ ಶ್ರೀಮನ್ನಾಥ ಮುನಿ, ಯಾಮುನಾಮುನಿಗಳಿಂದ ವಿಶಿಷ್ಟಾ ದ್ವೈತ ಸಿದ್ಧಾಂತವು ರಾಮಾನುಜರ ಶ್ರೀ ಭಾಷ್ಯ ಗ್ರಂಥದಲ್ಲಿ ಪರಿಷ್ಕರಣ ರೀತಿಯಲ್ಲಿ ಸ್ಪಷ್ಟ ವಾಗಿ ವಿಸ್ತಾರವಾಗಿ ನಿರೂಪಿಸಲ್ಪಟ್ಟಿವೆ.

ಶ್ರೀರಾಮಾನುಜರು ಮಂಡಿಸುವ ವಾದಸರಣಿಯಲ್ಲಿ ಇರುವ ವೈಶಿಷ್ಟ್ಯವೆಂದರೆ



ಲೋಪದೋಷಗಳನ್ನು ತೋರಿಸಿ ಖಂಡಿಸಬೇಕಾಗಿರುವ ಪೂರ್ವ ಪಕ್ಷಗಳನ್ನು ಭಿನ್ನಮತ ವಿಚಾರಗಳನ್ನೂ ಮರೆಮಾಚದೆ, ಲೋಪವಿಲ್ಲದೆ ಯಥಾವತ್ತಾಗಿ ಹಲವಾರು ಪ್ರಮಾಣಗಳಿಂದ ಪರಿಷ್ಕರಿಸಿ ಪುಷ್ಟಿಗೊಳಿಸುವುದು. ಶ್ರೀರಾಮಾ ನುಜರ ತರ್ಕಬದ್ಧವಾದ ವಿಷಯಗಳನ್ನು ಸಮರ್ಪಕವಾಗಿ ಪ್ರತಿಪಾದಿಸಿರು ವುದನ್ನು ಕಂಡು ವಿದ್ಯಾಧಿದೇವತೆಯಾದ ಶಾರದೆಯೇ ಮೆಚ್ಚಿದಳಷ್ಟೇ ಅಲ್ಲದೇ ನಿನ್ನ ಭಾಷ್ಯವು ಮಂಗಳಕರವಾಗಿದೆ. ಆದ್ದರಿಂದ ಇದು ಶ್ರೀಭಾಷ್ಯವೆಂದೇ ಲೋಕದಲ್ಲಿ ಪ್ರಸಿದ್ಧವಾಗಲಿ ಎಂದು ಹರಸಿದಳು. ಶಾರದೆಯ ಅನುಗ್ರಹವಾಣಿ ಯಿಂದ ರಾಮಾನುಜರು ಶ್ರೀಭಾಷ್ಯಕಾರರೆಂದೂ ಅವರ ಬ್ರಹ್ಮ ಸೂತ್ರ ಭಾಷ್ಯವು 'ಶ್ರೀ ಭಾಷ್ಯ'ವೆಂದೂ ಅಂದಿನಿಂದ ಪ್ರಸಿದ್ಧಿಗೆ ಬಂದಿತು.

ಕೇವಲ ಉಪನಿಷದ್ವಾಕ್ಯಗಳೆಲ್ಲಕ್ಕೂ ಸಾಮರಸ್ಯವನ್ನು ಐಕಮತ್ಯವನ್ನು ಕಲ್ಪಿಸುವುದು ಮಾತ್ರವಲ್ಲ ಕರ್ಮಕಾಂಡವೆನಿಸಿಕೊಂಡಿರುವ ವೇದದ ಪೂರ್ವ ಭಾಗಕ್ಕೂ ಜ್ಞಾನಕಾಂಡವೆಂಬ ವೇದದ ಉತ್ತರ ಭಾಗವಾದ ಉಪನಿಷತ್ತು ಗಳಿಗೂ ಸಾಮರಸ್ಯವನ್ನು ಕಲ್ಪಿಸಿರುವುದು ಶ್ರೀರಾಮಾನುಜರ ಮತ್ತೊಂದು ವೈಶಿಷ್ಟ್ಯ.


ರಾಮಾನುಜರ ಶ್ರೀಭಾಷ್ಯದಲ್ಲಿ ಮೊದಲನೆಯ ಸೂತ್ರವು' ಅಥಾತೋ ಬ್ರಹ್ಮಜಿಜ್ಞಾಸಾ" ಎಂದು ಆರಂಭವಾಗಿದೆ. "ಅಂತೆಯೇ ಅನಾವೃತ್ತಿಃ ಶಬ್ದಾತ್" ಅನಾವೃತ್ತಿ ಶಬ್ದಾತ್;" ಎಂದು ಪೂರ್ಣಗೊಂಡಿದೆ. ಈ ಎರಡೂ ಸೂತ್ರಗಳು 'ಅ' ಕಾರದ ಆರಂಭವಾಗಿದೆ. ಅದೇಕೆ? " ಅಕ್ಷರಾಣಾಂ ಅಕಾರೋಸ್ಮಿ" ಎಂದು ಗೀತೆಯಲ್ಲಿ ಶ್ರೀಕೃಷ್ಣ ಹೇಳಿದನಲ್ಲವೇ! ಅ ಕಾರದ ಪ್ರಭಾವವನ್ನು ಸ್ಪಷ್ಟ ಪಡಿಸಿದೆಯೇ ಈ ಆದಿ ಅಂತ್ಯ ಸೂತ್ರಗಳು ಶ್ರೀಭಾಷ್ಯದಲ್ಲಿ ಒಟ್ಟು 4 ಅಧ್ಯಾಯ ಗಳಿವೆ.

ಮೊದಲನೆಯ ಅಧ್ಯಾಯವನ್ನು ಸಮನ್ವಯ ಅಧ್ಯಾಯ ಎಂದು ಹೇಳಲಾಗಿದೆ. ಇದು ಜಗತ್ಕಾರಣ ಯಾರು, ಏನು ಎಂಬುದನ್ನು ತಿಳಿಸುತ್ತದೆ. ಅದನ್ನು ತಿಳಿಸುವಾಗ ಅನೇಕ ಪದಗಳು ಪರಬ್ರಹ್ಮ ವಸ್ತುವನ್ನು ಪರಮಾತ್ಮನನ್ನು ಅನ್ವಯಿಸುತ್ತದೆ. ಪರಮಾತ್ಮನೇ ಈ ಜಗತ್ತಿಗೆ ಕಾರಣನು ಎಂದು ತಿಳಿಸುತ್ತದೆ. ಶ್ರೀ ಭಾಷ್ಯದಲ್ಲಿ ಶ್ರೀರಾಮಾನುಜರು ಅವಿರೋಧಾಧ್ಯಾಯದಲ್ಲಿ, ಅನೇಕ ಸಂದೇಹ ವಿರೋಧಗಳನ್ನು ಪರಿಹಾರ ಮಾಡಿ, ಸಮಾಧಾನವನ್ನು ಹೇಳಿರುವ ಬಗ್ಗೆ ಒಂದು ಉದಾಹರಣೆಯನ್ನು ನೋಡೋಣ.

ಈ ಜಗತ್ತಿಗೆ ಕಾರಣವಾಗಿರುವ ಬ್ರಹ್ಮಕ್ಕಿಂತ ಕಾರ್ಯವಾದ ಜಗತ್ತು ಬೇರೆಯಾಗಿದೆಯೇ ಇಲ್ಲವೇ? ಎಂಬುದರ ಬಗ್ಗೆ ಉದಾಹರಣೆಯೊಂದಿಗೆ ಸ್ಪಷ್ಟ ಪಡಿಸಿದ್ದಾರೆ. ಇದು ಆರಂಭಣಾದಿಕರಣದಲ್ಲಿ ಬಂದಿದೆ. ಇದರಲ್ಲಿ ಕಾರ್ಯ ಕಾರಣ ಬೇರೆಯಿಲ್ಲ. ಎರಡಕ್ಕೂ ಅನನ್ಯತ್ವವೇ ಎಂಬ ಸಿದ್ಧಾಂತವನ್ನು ಸ್ಪಷ್ಟ ಪಡಿಸಿದ್ದಾರೆ.

(ಬ್ರಹ್ಮಸೂತ್ರದಲ್ಲಿ ಆರಂಭಣ ಶಬ್ದದಿಂದ ಮೊದಲಾಗುವ ವಾಕ್ಯಗಳಿಂದ ಜಗತ್ತು ಬ್ರಹ್ಮಕ್ಕಿಂತ ಬ್ರ.ಸೂ. 2-1-15) ಬೇರೆಯಾಗಿಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತದೆ. (ಬ್ರಹ್ಮ.ಸೂತ್ರ 2-1-15) ಛಾಂದೋಗ್ಯಉಪನಿಷತ್ತಿನಲ್ಲಿಯೂ (6-1-4)ಇದನ್ನು ಸ್ಪಷ್ಟವಾಗಿ ಉದಾಹರಣೆಯೊಂದಿಗೆ ತಿಳಿಸಲಾಗಿದೆ. ಮಣ್ಣಿನಿಂದ

ಮಾಡಿದ ಘಟ ಅಥವಾ ಮಡಿಕೆ. ಮಣ್ಣಿನ ಬೊಂಬೆ - ಮುಂತಾ ದವುಗಳನ್ನು ಒಂದೇ ಮೃತ್ತಿಕೆ ಎಂದರೆ ಮಣ್ಣಿನಿಂದ ಮಾಡಿದ್ದರೂ ಬೇರೆ ಬೇರೆ ಆಕಾರವನ್ನು ಹೊಂದಿರುತ್ತದೆ. ಆದರೆ ಘಟವೋ ಅಥವಾ ಬೊಂಬೆಯೋ ನಾಶವಾದರೆ ಅದು ಮಣ್ಣು ಎಂದೆನಿಸಿಕೊಳ್ಳು ವುದಿಲ್ಲ ಅಂತೆಯೇ ಆತ್ಮವು ದೇಹದಲ್ಲಿ ಯಾವುದೇ ಪರಿಣಾಮವನ್ನು ಹೊಂದದೆ ಇರುತ್ತದೆ. ಆದರೆ ದೇಹವಾದರೋ ಬಾಲ್ಯ ಯೌವನ ಮುಪ್ಪು ಮುಂತಾದ ಅವಸ್ಥೆ ಗಳನ್ನು ಹೊಂದಿರುತ್ತದೆ. ನಿರ್ವಿಕಾರವಾದ ಬ್ರಹ್ಮವು ತನ್ನ ಸ್ವರೂಪದಿಂದಲೇ ದೇವ ಮನುಷ್ಯ ಮುಂತಾದ ರೂಪವನ್ನು ಹೊಂದುವುದಿಲ್ಲ.ಆದರೆ ಚೇತನಾಚೇತನ ರೂಪ ವಾದ ಶರೀರದ್ವಾರ ಅನೇಕತೆ ಸಂಕಲ್ಪಿಸುತ್ತದೆ. ನೂಲಿನ ಎಳೆಗಳು ವಿಶಿಷ್ಟವಾದ ಹಾಸು ಹೊಕ್ಕುಗಳಾಗಿ ಬಟ್ಟೆಯ ರೂಪ ಹೊಂದಿ ಬೇರೆ ಬೇರೆ ಹೆಸರು. ರೂಪ ಮತ್ತು ಕಾರ್ಯಗಳನ್ನು ಪಡೆಯುವುದೋ ಹಾಗೆಯೇ ಬ್ರಹ್ಮವೂ ಸಹ ನಿರ್ವಿಕಾರ ವಾದುದು "ಆತ್ಮಕ್ಕೆ ಎಂದಿಗೂ ಅಳಿವಿಲ್ಲ. ದೇಹಕ್ಕೆ ಮಾತ್ರ ಅಳಿವು ಇರುತ್ತದೆ. ಒಂದೇ ವಾಯುವು ಶರೀರದಲ್ಲಿ ಬೇರೆ ಬೇರೆ ನಾಮ (ವ್ಯಾನ, ಅಪಾನ, ಇತ್ಯಾದಿ) ರೂಪ ಕಾರ್ಯಗಳನ್ನು ಹೊಂದು ತ್ತದೆಯೋ ಹಾಗೆಯೇ ಬ್ರಹ್ಮವೂ ಸಹ.ಇದರಿಂದ ಕಾರಣ ಭೂತ ವಾದ ಬ್ರಹ್ಮಕ್ಕಿಂತ ಕಾರ್ಯ ರೂಪವಾದ ಜಗತ್ತು ಬೇರೆಯಲ್ಲ ಎಂದು ಸ್ಪಷ್ಟವಾಗುತ್ತದೆ. ಕಾರ್ಯಕಾರಣ ಬೇರೆಯಲ್ಲ ಎರಡಕ್ಕೂ ಅನನ್ಯತ್ವ ಇದೆ ಎಂದು ಶ್ರೀಭಾಷ್ಯದಲ್ಲಿ ದೃಢೀಕರಿಸಲಾಗಿದೆ.



ಎರಡನೆಯ ಅಧ್ಯಾಯವನ್ನು ಅವಿರೋಧಾಧ್ಯಾಯ ಎಂದು ಕರೆಯುತ್ತಾರೆ ಇಲ್ಲಿ ವಿರೋಧವನ್ನೆಲ್ಲಾ ಪರಿಹಾರ ಮಾಡಿ ಅವುಗಳಿಗೆ ಸಮಾಧಾನವನ್ನು ಹೇಳಿ ಪರಬ್ರಹ್ಮ ವಸ್ತುವೇ ಈ ಜಗತ್ತಿಗೆ ಕಾರಣ ಎಂಬುವುದನ್ನು ದೃಢೀಕರಿಸುತ್ತದೆ.

ಮೂರನೆಯ ಅಧ್ಯಾಯವನ್ನು ಉಪಾಯ ಎಂದು ಕರೆ ಯುತ್ತಾರೆ. ಈ ಜಗತ್ತಿಗೆ ಬ್ರಹ್ಮ ವಸ್ತುವೇ ಕಾರಣ ಎಂದ ಮೇಲೆ ಅದನ್ನು ಪಡೆಯಲು ಯಾವ ಯಾವ ಉಪಾಯ ಅನುಷ್ಠಾನ ಗಳನ್ನು ಕೈಗೊಳ್ಳಬೇಕು? ಹೇಗೆ ಮಾಡಬೇಕು? ಎಂದು ನಿರೂಪಣೆ ಮಾಡಿ ಉಪಾಯಗಳನ್ನು ತಿಳಿಸುತ್ತದೆ.

ನಾಲ್ಕನೆಯ ಅಧ್ಯಾಯವನ್ನು ಫಲ ಎಂದು ಕರೆ ಯುತ್ತಾರೆ. ಬ್ರಹ್ಮೋಪಾದನೆ ಮಾಡಿದರೆ ಅದರಿಂದ ಬರುವ ಫಲ ವೇನು? ಅಂದರೆ ಪ್ರಯೋಜನವೇನು ಎಂಬುದನ್ನು ತಿಳಿಸುತ್ತದೆ.

ಈ ನಾಲ್ಕು ಅಧ್ಯಾಯಗಳನ್ನು "ಕಾರಣತ್ವಂ", ಅಬಾಧತ್ವಂ, ಉಪಾ ಯತ್ವಂ, ಉಪೇಯತಾ ಎಂದು ಸಂಗ್ರಹ ವಾಗಿ ಹೇಳಲಾಗುತ್ತದೆ. ಎಲ್ಲ ಭಾಷ್ಯಗಳಲ್ಲೂ ಇದನ್ನು ಎಲ್ಲರೂ ಅನುಸರಿಸಿದ್ದಾರೆ.

1. ಕಾರಣತ್ವಂ = ಎಂದರೆ ಜಗತ್ತಿಗೆ ಕಾರಣನಾದವನು ಪರಬ್ರಹ್ಮ

2. ಅಬಾಧತ್ವಂ = ಎಂದರೆ ಪರ ಬ್ರಹ್ಮವೇ ಕಾರಣ ಎನ್ನುವುದನ್ನು ಯಾರೂ ಯಾವ ವಾದದಿಂದಲೂ ವಿರೋಧಿಸಲಾಗು ವುದಿಲ್ಲ.

3. ಉಪಾಯತ್ವಂ : ಉಪನಿಷತ್ತುಗಳಲ್ಲಿ ಉಪಾಸನೆಯು ಹೆಚ್ಚಾಗಿ ಬರುತ್ತದೆ. ಉಪಾಸನೆ ಎಂದರೆ ನಿರಂತರವಾಗಿ ಆ ಪರಬ್ರಹ್ಮನ ರೂಪ ಗುಣ ವಿಭವಗಳನ್ನು ಸದಾ ಚಿಂತನೆ ಮಾಡು ವುದು ಇದನ್ನೇ ಅನುಸ್ಮೃತಿ ಎನ್ನವುದುಂಟು ಇದಕ್ಕೆ ವಿವರಣೆ ನೀಡುವಲ್ಲಿ "ತೈಲಧಾರಾವತ್ ಅವಿಚ್ಛಿನ್ನ ಸ್ಮೃತಿ ಸಂತತಿರೂಪ". ಎಂದಿದ್ದಾರೆ.ನಿರಂತರವಾಗಿ ಆ ಬ್ರಹ್ಮನ ಚಿಂತನ ಧ್ಯಾನ ಮಾಡು ವುದು.ಇದರಲ್ಲಿ 32 ಉಪಾಸನೆಗಳನ್ನು ಉಪನಿಷತ್ತುಗಳಲ್ಲಿರುವ ಹಾಗೆಯೇ ನಿರೂಪಣೆ ಮಾಡಿದ್ದಾರೆ.

4. ಫಲ (ಉಪೇಯತಾ) ಪರಮಾತ್ಮನ ಸಾಕ್ಷಾತ್ಕಾರ ವನ್ನು ಪಡೆದವನು ಈ ದೇಹವನ್ನು ಬಿಟ್ಟು ಅರ್ಚಿರಾದಿ ಮಾರ್ಗ ದಲ್ಲಿ ಹೋಗಿ ಪರಮಾತ್ಮನ ಸಾನ್ನಿಧ್ಯವನ್ನು ಪಡೆಯುವುದು ಅಲ್ಲಿ ಅವನ ಸ್ವರೂಪ ಹೇಗಿರುತ್ತದೆ.ಜ್ಞಾನ ಸ್ವರೂಪನಾಗಿರು ತ್ತಾನೆಯೇ ಎಂಬುದನ್ನು ನಿಶ್ಚಯಿಸುವುದೇ ಉಪೇಯತಾ.

ಅಥಾತೋ ಬ್ರಹ್ಮ ಜಿಜ್ಞಾಸಾ-ಎಂಬ ಸೂತ್ರದಲ್ಲಿ ಮೊದ ಲನೆಯ ಪದವೇ ಒಂದು ವಿಶಿಷ್ಟವಾದ ಅರ್ಥವನ್ನು ಹೊಂದಿದೆ ಇಲ್ಲಿ 'ಅಥ' ಎಂದರೆ ಆನಂತರ ಎಂದು ಅರ್ಥ. ಅದು ಆ ಮೇಲೆ ಯಾವುದು ಆದ ಮೇಲೆ? ಎಂದಾಗ ಉತ್ತರ ಹೇಳುತ್ತಾರೆ. ಕರ್ಮ ವಿಚಾರ ಆದಮೇಲೆ 'ಕರ್ಮ ವಿಚಾರಾ ನಂತರಂ ಎಂದು ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದ ಮಾಯಾತ್ ನಾಸ್ತ್ಯ ಕೃತಃ ಕೃತೇನ ತದ್ವಿ ಜ್ಞಾನಾರ್ಥಂ ಸ ಗುರು ಮೇವಾಭಿಗಚ್ಛೇತ್ ಸಮಿತ್ ಪಾಣಿಃ ಶ್ರೋತ್ರಿಯಂ ಬ್ರಹ್ಮ ನಿಷ್ಟಂ" ಎಂದಿದ್ದಾರೆ.

ಕರ್ಮದಿಂದ ದೊರಕುವ ಫಲ ಅತ್ಯಲ್ಪವಾದುದು. ಅಸ್ಥಿರವಾದುದು. ದುಃಖಮಯವಾದುದು. ಆತ್ಮಸ್ವರೂಪಕ್ಕೆ ವಿರುದ್ಧ ವಾದುದು.ಕರ್ಮದ ಬಗ್ಗೆ ಇಷ್ಟೆಲ್ಲಾ ತಿಳಿದ ಮೇಲೆ ಆ ವ್ಯಕ್ತಿಯ

ಆತ್ಮ ವಿಚಾರಕ್ಕೆ ಮುಂದಾಗುತ್ತಾನೆ. ಹಾಗೆಂದರೆ ಇಷ್ಟು ದಿನ ಈ ಅಸ್ಥಿರವಾದ ಕರ್ಮಫಲಕ್ಕೆ ಒದ್ದಾಡಿದೆನಲ್ಲಾ.ಯಾವುದು ಪರಮ ಪುರುಷಾರ್ಥ ಎಂದು ತಿಳಿಯದೆ ವ್ಯರ್ಥವಾಗಿ ಕಾಲ ಕಳೆದನಲ್ಲೊ ಎಂದು ಪರಿತಪಿಸಿ ಆತ್ಮ - ಪರಮಾತ್ಮ ಜ್ಞಾನವನ್ನು ಪಡೆಯಲು ಗುರುವನ್ನು ಅರಸಿ ಹೋಗುತ್ತಾನೆ. ಅದಕ್ಕಾಗಿ ವೇದಾಧ್ಯಯನ ಮಾಡಿ ಅರ್ಥಗಳನ್ನು ತಿಳಿಯಲು ಪ್ರಯತ್ನಿಸುತ್ತಾನೆ. ಆತ್ಮ ಪರಮಾತ್ಮ ಪ್ರಕೃತಿ ಮುಂತಾದವುಗಳ ಬಗ್ಗೆ ತಿಳಿಯಲು ಆಚಾರ್ಯರ ಹತ್ತಿರವೇ ಹೋಗಬೇಕು. ಅದರಲ್ಲೂ ಆಚಾರ್ಯರ ಬಳಿಗೆ ಸಮಿತ್ ಪಾಣಿಯಾಗಿಯೇ ಹೋಗಬೇಕು. ಇನ್ನೊಬ್ಬರನ್ನು ಕಳುಹಿಸಿ ತಿಳಿಯಲು ಪ್ರಯತ್ನಿಸಬಾರದು. ಗುರುಮೇವ ಅಭಿಗಚ್ಚೇತ್ ಎಂದು ಶ್ರೀರಾಮಾನುಜರು ಒತ್ತಿ ಹೇಳಿದ್ದಾರೆ. ವಿದ್ಯಾಭ್ಯಾಸಕ್ಕಾಗಿ ಶ್ರೀರಾಮಾನುಜರು ಹದಿನೆಂಟು ಬಾರಿ ಶ್ರೀರಂಗದಿಂದ ತಿರುಗೋಷ್ಠಿಯೂರಿಗೆ ಯಾತ್ರೆ ಮಾಡಿ ಗುರುಗಳಿಂದ ಕಲಿತರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಂದಿನ ಇಂಟರ್‌ನೆಟ್ ಯುಗದಲ್ಲಿ ಗುರುವಿನ ಪ್ರಾಮುಖ್ಯತೆ ಕಡಿಮೆಯಾಗುತ್ತಾ ಬರುತ್ತಿದೆ ಎಂಬುವುದು ವಿಶಾದನೀಯ. ಇಂದಿನ ವಿದ್ಯಾರ್ಥಿಗಳು. ಯುವಕರು. ಇಂಟರ್‌ನೆಟ್ ಮುಂದೆ ಕುಳಿತು ಎಲ್ಲವನ್ನು ಕಲಿತು ಸರ್ವಜ್ಞನಾಗುತ್ತೇನೆ ಎಂದು ಹಗಲುಗನಸು ಕಾಣುತ್ತಿದ್ದಾರೆ. ಈ ಪ್ರಂಪಚದಲ್ಲಿ ಯಾವುದೇ ವಿಷಯವಾಗಲಿ ಅಂದರೆ ಭೌತಿಕ ವಿಜ್ಞಾನವಾಗಲಿ. ಆಧ್ಯಾತ್ಮ ವಿಜ್ಞಾನವಾಗಲಿ, ಭೌಗೋಳಿಕ ಜ್ಞಾನ ವಾಗಲಿ ತನ್ನದೆ ಆದ ವೈಶಿಷ್ಟ್ಯವನ್ನು ಹೊಂದಿರುತ್ತದೆ. ಎಲ್ಲ ರೀತಿಯ ಜ್ಞಾನವನ್ನು ಆಳವಾಗಿ ಅಧ್ಯಯನ ಮಾಡಬೇಕಾದುದು ಅತ್ಯವಶ್ಯ. ಕೇವಲ ಇಂಟರ್‌ನೆಟ್ ಇನ್‌ಫರ್ ಮೇಷನ್‌ನಿಂದ ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳಲ್ಲಿ ಕಲಿಯುವ ಆಕಾಂಕ್ಷೆ ಏಕಾಗ್ರತೆ ಹಿಡಿದ ಕಾರ್ಯವನ್ನು ಸಾಧಿಸಬೇಕೆಂಬ ಛಲ ಅತ್ಯವಶ್ಯಕ ವಾಗಿ ಬೇಕಾಗುತ್ತದೆ. ಯಾವುದೇ ಗಹನವಾದ ವಿಷಯವನ್ನು ತಿಳಿಯಬೇಕಾದರೆ ಸದ್ಗುರುವಿನ ಮಾರ್ಗದರ್ಶನ ಅತ್ಯವಶ್ಯ ಎಂಬುದನ್ನು ನಾವು ಪ್ರಮುಖವಾದ ಅಂಶವೆಂದು ತಿಳಿಯಬೇಕಾಗಿದೆ.

---

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ತಿರುಮಲೆಯಲ್ಲಿ

**ಮಾಡಬೇಕಾದವು; ಮಾಡಬಾರದವುಗಳು ಹಾಗೂ ನಿಷಿದ್ಧವಾದವು.**

### ಮಾಡಬೇಕಾದವು :

- ☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
- ☑ ಶ್ರೀವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನಮಾಡಿ,
- ☑ ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
- ☑ ದೇವರ ದರ್ಶನಕ್ಕೆ ಸರದಿಯ ಸಾಲು ಸೇರಿರಿ.
- ☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
- ☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು
- ☑ ಮನಸ್ಸಿನಲ್ಲಿ "ಓಂ ನಮೋ ವೇಂಕಟೇಶಾಯ" ಎಂದು ಜಪಿಸಿರಿ.
- ☑ ತಿರುಮಲೆಯಲ್ಲಿ ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ.
- ☑ ತಿರುಮಲೆಗೆ ಬಂದಾಗ ಪ್ರಾಚೀನಪರಂಪರೆಯನ್ನೂ ಆಚಾರವನ್ನೂ ಗೌರವಿಸಿ.
- ☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
- ☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ.
  ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.

### ಮಾಡಬಾರದವು :

- ☒ ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
- ☒ ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
- ☒ ದೇವರ ದರ್ಶನಕ್ಕಾಗಿ ನೂಕುನುಗ್ಗುಲು ಮಾಡದಿರಿ.
- ☒ ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
- ☒ ಹೂವು ಮುಡಿಯದಿರಿ. (ಎಲ್ಲ ಹೂವುಗಳೂ ದೇವರಿಗೇ.)
- ☒ ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
- ☒ ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
- ☒ ಆಲಯದ ಒಳಗೆ, ಹೊರಗೆ ಪಾದರಕ್ಷೆಗಳನ್ನು ಧರಿಸಿ ಓಡಾಡಬೇಡಿರಿ.

### ನಿಷೇಧಿತ ಪದಾರ್ಥಗಳು :( ನಿಷೇಧಿಸಿದವು)

- ✘ ತಿರುಮಲೆಯಲ್ಲಿ ಮಾಂಸಾಹಾರವನ್ನು ಬಳಸಬೇಡಿರಿ. ಮಾದಕ ವಸ್ತು, ಪೇಯಗಳನ್ನು ಬಳಸಬೇಡಿರಿ. ಧೂಮಪಾನ ಮಾಡಬೇಡಿರಿ.
- ✘ ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
- ✘ ಬೀದಿವ್ಯಾಪಾರಿಗಳಿಂದ ನಕಲೀ ಪ್ರಸಾದ ಕೊಳ್ಳಬೇಡಿ.
- ✘ ದೇವಾಲಯದಲ್ಲಿ ಉಗುಳುವುದೇ ಮುಂತಾದವುಗಳನ್ನು ಮಾಡದಿರಿ.
- ✘ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
- ✘ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣಿ, ರಾಸ್ತಾರೋಕೋ, ಹರತಾಳ - ಮೊದಲಾದವುಗಳನ್ನು ನಿಷೇಧಿಸಲಾಗಿದೆ.
- ✘ ಜಂತುವಧೆ ನಿಷೇಧ.
- ✘ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
- ✘ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ಆಲಯಕ್ಕೆ ಒಯ್ಯಬೇಡಿರಿ.ಆಯುಧಗಳನ್ನು ತರಬಾರದು.
- ✘ ಭಿಕ್ಷೆಯನ್ನು ಪ್ರೋತ್ಸಾಹಿಸದಿರಿ. ಹುಸಿ ಪ್ರಸಾದಗಳನ್ನು ಕೊಳ್ಳಬೇಡಿರಿ.

# ವೇದಗಳಲ್ಲಿ ವಿಜ್ಞಾನ

ಭೂಮಿ, ನೀರು, ತೇಜಸ್ಸು, ಗಾಳಿ, ಆಕಾಶ ಇವು ಐದು ಭೂತಗಳು. ಈ ಪಂಚಭೂತಗಳು ಚರ - ಅಚರ ಜೀವಿಗಳ ಹಾಗೂ ಇತರ ನಿರ್ಜೀವ ವಸ್ತುಗಳ ಮೇಲೆ ತಮ್ಮ ಪ್ರಭಾವ ಸಾಮರ್ಥ್ಯಗಳನ್ನು ಸಾರುತ್ತಲೇ ಬರುತ್ತಿವೆ. ವೇದದಲ್ಲಿ ಅಗ್ನಿ, ಇಂದ್ರ, ವಾಯು, ಸವಿತೃ, ಅಪಾಂನಪಾತ್ ಮುಂತಾದ 33 ಕೋಟಿ ದೇವತೆಗಳನ್ನು ನಿರೂಪಿಸಲಾಗಿದೆ. ಈ 33 ಪ್ರಕೃತಿಯಲ್ಲಿ ಅಡಗಿರುವ ಬೇರೆ-ಬೇರೆ ಶಕ್ತಿಗಳು. ಇವು ಪಂಚಭೂತಗಳಲ್ಲಿ ಒಂದಲ್ಲ ಒಂದು ರೀತಿಯಿಂದ ವ್ಯಾಪಿಸಿಕೊಂಡು ತಮ್ಮ ಪ್ರಭಾವಗಳನ್ನು ತೋರಿಸುತ್ತಾ ಬರುತ್ತಿವೆ. ಈ 33 ದೇವತೆಗಳು ಭೂಮಿ,ಅಂತರಿಕ್ಷ, ಮತ್ತು ದ್ಯುಲೋಕಗಳನ್ನು ವಿಭಕ್ತವಾಗಿವೆ.

ಅಗ್ನಿ, ಪೃಥ್ವಿ, ಸೋಮ, ನದಿ, ಬೃಹಸ್ಪತಿ ಇವೆಲ್ಲ ಭೂಮಿಯಲ್ಲಿ ಗೋಚರಿಸುವ ಪ್ರಕೃತಿ ದೇವತೆಗಳು. ಇಂದ್ರ, ವಾಯು, ಅಪಾಂನಪಾತ್, ರುಧ್ರ, ಮರುತ್ತು, ವಾತ, ಪರ್ಜನ್ಯ, ಅಪ್ ಇವು ಅಂತರಿಕ್ಷದಲ್ಲಿ ಕಾಣುವ ಪ್ರಕೃತಿ ದೇವತೆಗಳು. ದ್ಯೌವರುಣ, ಮಿತ್ರ, ಸೂರ್ಯ ಸವಿತೃ, ಪೂಷನ್, ಅಶ್ವಿನಿ, ಉಷಸ್, ರಾತ್ರಿ, ಆದಿತ್ಯ,ವಿಷು ಇವೆಲ್ಲ ದ್ಯುಸ್ಥಾನದಲ್ಲಿ ಕಾಣುವ ಪ್ರಕೃತಿ ದೇವತೆಗಳು,ಇವೆಲ್ಲ. ಪ್ರಕೃತಿಯಲ್ಲಿ ಅಡಗಿರುವ ನಾನಾ ಶಕ್ತಿಗಳು. ಈ ಎಲ್ಲಾ ಶಕ್ತಿಗಳು ಒಂದು ಪ್ರಧಾನ ಶಕ್ತಿಯಿಂದ ನಿಯಂತ್ರಿತವಾಗಿವೆ. ಇದನ್ನೇ ಪರಮಾತ್ಮ, ಪರಬ್ರಹ್ಮ ಎಂದು ಕರೆಯುವುದು. ಅಗ್ನಿ,ಸೂರ್ಯ,ಉಷಸ್, ಸವಿತೃ ಮೊದಲಾದುವು ಪ್ರಕಾಶಮಾನವಾಗಿದ್ದು ಬೆಳ್ಳಿಗೆ, ಸಂಜೆ, ಕತ್ತಲೆಯನ್ನು ದೂರಮಾಡಿ ಜೀವಿಗಳಲ್ಲಿ ಉತ್ಸಾಹವನ್ನು ತುಂಬಿ ಜೀವ ಸತ್ವವನ್ನು ಉಂಟು ಮಾಡು ತ್ತವೆ. ಇಂದ್ರ, ವರುಣ,ರುದ್ರ, ಪರ್ಜನ್ಯ ವಾಯು, ಮುಂತಾದವು ಪ್ರಕೃತಿಯಲ್ಲಿ ನಾನಾ ರೀತಿಯ ಕಾರ್ಯಗಳಲ್ಲಿ ಸಹಕಾರಿಗಳಾಗಿವೆ. ಈ ದೇವತಾ ರೂಪದ ಶಕ್ತಿಗಳು ಜೀವಿಗಳಿಗೆ ಹೇಗೆ ಉಪಕಾರಿಗಳಾಗಿವೆ ಎನ್ನುವುದನ್ನು ವೇದ ಮಂತ್ರಗಳಲ್ಲಿ ವೈಜ್ಞಾನಿಕ ಹಿನ್ನೆಲೆಯಲ್ಲಿ ತಿಳಿಸಲಾಗಿದೆ.



**ವೇದದಲ್ಲಿ ಭೂಮಿಯ ನಿರೂಪಣೆ:**

ಋಗ್ವೇದದಲ್ಲಿ ಪೃಥ್ವಿ ದೇವತಾಸೂಕ್ತವು ಒಂದೇ ಒಂದು. ಇಲ್ಲೂ ಪೃಥ್ವಿ ದೇವತೆಯನ್ನು ದ್ಯುಲೋಕ ದೇವತೆಯೊಡನೆ ಸೇರಿಸಿ ಸ್ತುತಿ ಮಾಡಲಾಗಿದೆ. ದ್ಯೌ: (ಆಕಾಶ) ಪೃಥ್ವಿ (ಭೂಮಿ) ಇವೆರಡೂ ದೇವತಾದ್ವಂದ್ವಗಳು ಒಟ್ಟಾಗಿ ಒಂದಾಗಿ ವರ್ಣಿತವಾಗಿವೆ. ಈ ಭೂಮಿಯು ಸಕಲ ಜೀವಿಗಳಿಗೆ ಎಲ್ಲ ಪದಾರ್ಥಗಳಿಗೆ ಆಶ್ರಯ ನೀಡಿದೆ.ಎಲ್ಲಾ ಜೀವಿಗಳಿಗೆ ಅನ್ನ, ನೀರು, ಬೆಳಕು, ಶಾಖ ಹಾಗೂ ಉಪಯುಕ್ತ ವಸ್ತುಗಳನ್ನು ನೀಡುತ್ತಾ ಎಲ್ಲರನ್ನೂ ಕಾಪಾಡುತ್ತಾ ಬೆಳೆಸುತ್ತಾ ಬರುತ್ತಿದೆ. ಈ ಭೂಮಿಯ ಮಹಿಮೆ ಅಪಾರ. ಪರ್ವತ, ಬೆಟ್ಟಗುಡ್ಡ ಕಾಡು, ಹೂವು, ಹಣ್ಣು, ಸಸ್ಯ, ನದಿ ನದಿಗಳು ಎಲ್ಲದಕ್ಕೂ ಭೂಮಿಯೇ ಆಶ್ರಯ ತಾಣ. ಲೋಕದಲ್ಲಿ ಜೀವಿಗಳ ಉತ್ಪತ್ತಿಯು ಹೇಗೆ ಆಗುತ್ತದೆ. ಎನ್ನುವುದನ್ನು ವೇದ ಮಂತ್ರಗಳಲ್ಲಿ ನಿರೂಪಿಸಲಾಗಿದೆ. ಮೊದಲಿಗೆ ದೇವತೆಗಳು ದ್ಯುಲೋಕದಲ್ಲಿ ಜೀವರಾಶಿಯನ್ನು ಮೋಡಗಳ ರೂಪದಲ್ಲಿ ಸೃಷ್ಟಿ ಮಾಡಿರುತ್ತಾರೆ. ನಂತರ ಈ ಜೀವರಾಶಿಗಳು ಮಳೆಯ ರೂಪದಲ್ಲಿ ಭೂಮಿಗೆ ಬಂದು ಸೇರುತ್ತವೆ. ನಂತರ ಸಸ್ಯಾದಿಗಳ ರೂಪದಲ್ಲಿ ಭೂಮಿಯು ಮೇಲೆ ಬೆಳೆದು ಆಹಾರ ರೂಪದಲ್ಲಿ ಜೀವಿಗಳ ದೇಹಗಳನ್ನು ಸೇರುತ್ತವೆ. ಅನಂತರ ಗಂಡು-ಹೆಣ್ಣುಗಳ ಮಿಲನದಿಂದ ಜೀವಿಗಳು ಮತ್ತೆ ಹುಟ್ಟುತ್ತವೆ. ಇದು ಪ್ರಕೃತಿಯಲ್ಲೂ ನಿರಂತರವಾಗಿ ನಡೆಯುತ್ತಿದೆ. ಜೀವಿಗಳು ದ್ಯುಲೋಕ

**- ಡಾ|| ಟಿ.ವಿ. ಸತ್ಯನಾರಾಯಣ**

ದಿಂದ,ಅಂತರಿಕ್ಷ ಅಲ್ಲಿಂದ ಭೂಮಿಗೆ ಬಂದು ಜನ್ಮ ತಾಳುತ್ತವೆ. ಹುಟ್ಟುವ ಜೀವಿಗಳು ಭೂಮಿಯ ಮೇಲೆ ಸಾಯುವ ತನಕ ಇರುವುದು ಭೂಮಿಯನ್ನು ಇವೆಲ್ಲ ಆಶ್ರಯಿಸಿಕೊಂಡಿದ್ದು ಭೂಮಿಯ ಎಲ್ಲರನ್ನೂ ಕಾಪಾಡಿ, ಬೆಳೆಸುವುದರಿಂದ ಭೂಮಿಯನ್ನು ತಾಯಿಯೆಂದು ದ್ಯುಲೋಕವನ್ನು ತಂದೆಯೆಂದು ವೇದಗಳಲ್ಲಿ ಹೇಳಿದೆ. ದ್ಯೌಃಪಿತಾ ಪೃಥಿವೀ ಮಾತಾ ಈ ಹುಟ್ಟುವ ಕ್ರಮವನ್ನು ಕೃಷ್ಣ ಯಜುರ್ವೇದದ ತೈತ್ತರೀಯ (ಋಗ್ವೇದ) ಉಪನಿಷತ್ತಿನಲ್ಲಿ ಹೀಗೆ ಹೇಳಿದೆ.

ಅಗ್ನೇರಾಪಃ । ಅದ್ಭ್ಯಃ ಪೃಥಿವಿ । ಪೃಥಿವ್ಯಾಓಷಧಯಃ ಓಷಧೀಭ್ಯೋಽನ್ನಮ್ । ಅನ್ನಾತ್ಪುರುಷಃ ॥ ಎಂದು (ಸೂರ್ಯ ಬೆಂಕಿಗಳಿಂದ ನೀರು ಉಂಟಾಗುತ್ತದೆ. ಇದು ಆಕಾಶದಿಂದ ಮಳೆಯಾಗಿ ಭೂಮಿಯ ಮೇಲೆ ಬೀಳುತ್ತದೆ. ನಂತರ ಭೂಮಿಯ ಮೇಲೆ ಗಿಡ - ಮರಗಳು - ಔಷಧಿಸಸ್ಯಗಳು ಹುಟ್ಟುತ್ತವೆ. ಇವುಗಳಿಂದ ಆಹಾರ ಪದಾರ್ಥಗಳು ಹುಟ್ಟುತ್ತವೆ. ಇವನ್ನು ಎಲ್ಲ ಪ್ರಾಣಿಗಳು ತಿಂದು ಬದುಕುತ್ತವೆ)

ಈ ಭೂಮಿಯು ಪ್ರಕೃತಿಮಾತೆ, ದ್ಯುಲೋಕವು ತಂದೆಯಾಗಿ ಜೀವಿಗಳ ಹುಟ್ಟಿಗೆ ಕಾರಣವಾಗಿದೆ. ಈ ಭೂಮಿಯ ಮೇಲೆ ಯಜ್ಞ - ಯಾಗಾದಿಗಳು ನಡೆಯುತ್ತವೆ. ಹೋಮ ಧೂಮದಿಂದ ಮೋಡಗಳು ಹುಟ್ಟುತ್ತವೆ. ಆಕಾಶದಲ್ಲಿ ಮೋಡಗಳು ಒಂದಕ್ಕೊಂದು ಡಿಕ್ಕಿ ಹೊಡೆದಾಗ ಬೆಂಕಿ ಹುಟ್ಟಿ ಮೋಡಗಳು ಕರಗಿ ನೀರಾಗಿ, ಮಳೆಯಾಗಿ ಭೂಮಿಯ ಮೇಲೆ ಬೀಳುತ್ತವೆ. ನಂತರ ಸಸ್ಯಾದಿಗಳು ಬೆಳೆದು ಜೀವಿಗಳಿಗೆ ಶಕ್ತಿ - ಸಾಮರ್ಥ್ಯಗಳನ್ನು ಉಂಟು ಮಾಡುತ್ತವೆ.

ಈ ಮೇಲೆ ಹೇಳಿದ ಅರ್ಥವನ್ನು ಋಗ್ವೇದದ ಈ ಕೆಳಗಿನ ಮಂತ್ರವು ಹೀಗೆ ಹೇಳುತ್ತದೆ.

ಬಳಿತ್ಥಾ ಪರ್ವತಾನಾಂ ಖಿದ್ರಂ ಬಿಭರ್ಷಿ ಪೃಥಿವಿ ।
ಪ್ರಯಾ ಭೂಮಿಂ ಪ್ರವತ್ವತಿ ಮಹ್ನಾಜಿನೋಷಿ ಮಹಿನಿ ॥
(ಋಗ್ವೇದ ಸಂಹಿತೆ - 5- 84 - 2)

ಈ ಭೂಮಿಯು ಭೂಮಿ-ಅಂತರಿಕ್ಷಗಳ ಮಧ್ಯ ಪರ್ವತಗಳ ಬೆಟ್ಟಗುಡ್ಡಗಳ, ಮೇಘಗಳ ಭಾರವನ್ನು ಅನಾಯಾಸವಾಗಿ ಧರಿಸಿದೆ.

ಆಕಾಶದಲ್ಲೂ ಈ ಮೋಡಗಳ ನೀರನ್ನು ತುಂಬಿಕೊಂಡು ಕೆಳಗೆ ಬೀಳದೆ, ಗಾಳಿಯ ಹೊಡೆತದ ಕಾರಣ ಅತ್ತಿಂದಿತ್ತ ಚಲಿಸುತ್ತದೆ. ಹಾಗಾಗಿ ಇವುಗಳ ಘರ್ಷಣೆಯಿಂದ ಬೆಂಕಿ ಹುಟ್ಟಿ ಮಳೆಯಾಗುತ್ತದೆ. ಭೂಮಿಯ ಮೇಲೆ ಮಳೆಯು ಹರಿಯುವುದರಿಂದ ನದೀ-ನದಿಗಳು ತುಂಬಿ ಹರಿಯುತ್ತವೆ. ಈ ಅರ್ಥವನ್ನು ಹೇಳುವ ಮಂತ್ರವಿದು.

ದೃಳ್ಹಾ ಚಿದ್ಯಾ ವನಸ್ಪಿತೀನ್ ಕ್ಷಮಯಾ ದರ್ಧರ್ಷ್ಯೋಜಸಾ ।
ಯತ್ತೇ ಅಭ್ರಸ್ಯ ವಿದ್ಯುತೋ ದಿವೋ ವರ್ಷಂತಿ ವೃಷ್ಟಯಃ
(ಋಗ್ವೇದ 5- 84- 3)

ಈ ಭೂಮಿಯು ತನ್ನ ಶಕ್ತಿಯಿಂದ ಮರಗಿಡಗಳನ್ನು ಬೆಟ್ಟಗುಡ್ಡಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದೆ. ಮಳೆಸುರಿಸುವ ಮೋಡಗಳು ಗಾಳಿಯ ಹೊಡೆತದಿಂದ ಆಕಾಶದಲ್ಲಿ ಛಿದ್ರವಾಗಿ ಅತ್ತಿಂದಿತ್ತ ಚಲಿಸುತ್ತಾ ಸಿಡಿಲು ಗುಡುಗುಗಳನ್ನು ಉಂಟು ಮಾಡಿ ಗರ್ಜನೆಯಿಂದ ಅಂತರಿಕ್ಷದಲ್ಲಿ ಮಳೆಗರೆಯುತ್ತವೆ ಈ ಮಳೆ ಬರಲು ಭೂಮಿಯ ಮೇಲೆ ಬೆಳೆದಿರುವ ಮರಗಿಡಗಳು ಬೆಟ್ಟಗುಡ್ಡಗಳು ಕಾರಣವಾಗಿವೆ. ಇವು ಮೋಡಗಳನ್ನು ತಡೆಯುವುದರಿಂದ ಮಳೆಯಾಗಿ ಮಳೆಯ ನೀರು ಭೂಮಿಯ ಮೇಲೆ ನದಿಗಳನ್ನು ಕೆರೆ, ಕಟ್ಟೆಗಳನ್ನು ತುಂಬಿ ಪ್ರಾಣಿಗಳಿಗೆ ಕುಡಿಯಲು, ಸಸ್ಯಗಳು ಬೆಳೆಯಲು ಕಾರಣವಾಗಿದೆ. ಭೂಮಿಯ ಮೇಲೆ ಮಳೆ ಸುರಿಸಲು ಕಾರಣವಾದ ಈ ಮರ ಗಿಡಗಳಿಗೆ ಉತ್ಪತ್ತಿ ಕಾರಣ ಆದ ತಾಯಿಯೇ ಭೂಮಿ ಎಂದು ಈ ಭೂಮಿಯನ್ನು ವೇದ ಮಂತ್ರಗಳು ಸ್ತುತಿಸುತ್ತಿದೆ.

**ಅಗ್ನಿಯ ಸ್ವಭಾವ ಹಾಗೂ ನೈಜವಾದ ಸ್ವರೂಪ :**

ಭೂಮಿಯ ಮೇಲೆ ಅಡಗಿರುವ ಪ್ರಕೃತಿ ಶಕ್ತಿಗಳಲ್ಲಿ ಅಗ್ನಿಯು ಅತ್ಯಂತ ಮುಖ್ಯವಾದುದು. ಅಗ್ನಿಯು ನಮಗೆ ಬೆಳಕನ್ನು ಶಾಖವನ್ನು ಕೊಟ್ಟು ನಮ್ಮನ್ನು ಕಾಪಾಡುತ್ತಿದೆ. ಅಗ್ನಿಯ ವಿಶ್ವ ಸ್ವರೂಪವನ್ನು ಋಷಿಯು ವೇದ ಮಂತ್ರದ ಮೂಲಕ ಕಂಡ ಬಗೆ ಇದು :

ಗರ್ಭೋ ಯೋ ಅಪಾಂಗರ್ಭೋ ವನಾನಾಂ
ಗರ್ಭಶ್ಚ ಸ್ಥಾತಂ ಗರ್ಭಶ್ಚರಥಾಮ್।
ಅದ್ರೌಚಿದಸ್ಮಾ ಅಂತರ್ದುರೋಣೇ
ವಿಶಾಂ ನ ವಿಶ್ವೋ ಅಮೃತಃ ಸ್ವಾಧೀಃ (ಋಗ್ವೇದ 1-70 -4)

ಅಗ್ನಿಯು ನೀರೊಳಗೆ ಗರ್ಭದಂತೆ ಅಪಾಂನಪಾತ್ ಎಂಬ ಹೆಸರಿನಿಂದ ಅಡಗಿದೆ. ಇದನ್ನು ಅಬಿಂಧನ ಎಂದು ಕರೆದಿದ್ದಾರೆ.ಮರಗಿಡಗಳೊಳಗೆ ಇದ್ದು ದಾವಾಗ್ನಿಯಾಗಿ ಹೊರ ಬರುತ್ತದೆ. ಸ್ಥಿರವಾಗಿರುವ ಕಲ್ಲು, ಮಣ್ಣು, ಮುಂತಾದವುಗಳ ಒಳಗೆ, ಮರ ಮೊದಲಾದ ಸಸ್ಯಗಳ ಒಳಗೆ ಇದ್ದು ಅವುಗಳ ಇರುವಿಕೆಗೆ ಕಾರಣವಾಗಿದೆ. ಪ್ರಾಣಿಗಳ ದೇಹದೊಳಗೆ ಜಠರಾಗ್ನಿಯಾಗಿ ತಿಂದ ವಸ್ತುಗಳನ್ನು ಅರಗಿಸುತ್ತದೆ. ಚಲಿಸುವ ಮನುಷ್ಯ, ಪ್ರಾಣಿ, ಪಕ್ಷಿಗಳು, ಹರಿದಾಡುವ ಸರೀಸೃಪಗಳು, ಕ್ರಿಮಿಕೀಟಗಲು ಇವುಗಳ ದೇಹದೊಳಗೆ ಪ್ರಾಣಾಗ್ನಿಯಾಗಿ ನೆಲೆಸಿದೆ. ಹೀಗೆ ನೀರು, ಭೂಮಿ, ಅಂತರಿಕ್ಷ, ಎಲ್ಲ ಕಡೆ ವ್ಯಾಪಿಸಿ ಅಡಗಿರುವ

ಅಗ್ನಿಗೆ ಜನರು ಮನೆಮನೆಯಲ್ಲಿ ಹವಿಸ್ಸನ್ನು ಅರ್ಪಿಸಿ, ನಮಿಸುವರು.

ಹೇಗೆ ರಾಜನು ಪ್ರಜೆಗಳನ್ನು ಪ್ರೀತಿಯಿಂದ ಪಾಲಿಸುವನೋ ಹಾಗೆ ಅಗ್ನಿಯು ಜೀವಿಗಳ ದೇಹದೊಳಗಿದ್ದು ಕಾಪಾಡುತ್ತಿದೆ. ಹೀಗೆ ಸ್ಥಾವರಜಂಗಮ ರೂಪದ ಜೀವಿಗಳ ದೇಹದೊಳಗೆ ಅಗ್ನಿಯು ತೇಜೋರೂಪದಿಂದ ಇರುವ ಕಾರಣವೇ ಮನುಷ್ಯಾದಿ ಪ್ರಾಣಿಗಳು ಜೀವಿಸಿದೆ ಹಾಗೂ ವ್ಯವಹರಿಸುತ್ತಿದೆ.

ಮರಗಳು ಒಂದಕ್ಕೊಂದು ಉಜ್ಜಿದಾಗ ಬೆಂಕಿಯು ಹುಟ್ಟುತ್ತದೆ. ಕಲ್ಲುಗಳನ್ನು ಒಂದಕ್ಕೊಂದು ಕುಟ್ಟಿದಾಗ ಬೆಂಕಿಯು ಬರುತ್ತದೆ. ಅರಣಿ ಮಥನದಿಂದ ಬೆಂಕಿಯು ಹೊರಬರುತ್ತದೆ ಎನ್ನುವುದು ವಿಜ್ಞಾನ. ಈ ಅಂಶವನ್ನು ಈ ಕೆಳಗಿನ ಮಂತ್ರಗಳು ಹೇಳುತ್ತಿವೆ.

ಅರಣ್ಯೋರ್ನಿಹಿತೋ ಜಾತವೇದಾಃ ಗರ್ಭ ಇವ ಗರ್ಭಿಣೀಷು (ಋಗ್ವೇದ 3-29 -2)

(ಗರ್ಭಿಣಿ ಸ್ತ್ರೀಯ ದೇಹದೊಳಗೆ ಗರ್ಭ ಇರುವಂತೆ
ಅರಣಿಗಳ ಒಳಗೆ ಬೆಂಕಿಯಿದೆ)
ಯೋ ಅಶ್ಮನೋರಂತಃ ಅಗ್ನಿಂ ಜಜಾನ (ಋಗ್ವೇದ 1-68 - 2)
(ಕಲ್ಲುಗಳ ಒಳಗೆ ಅಗ್ನಿಯು ಹುಟ್ಟುತ್ತದೆ)
ಶುಷ್ಕಾದ್ ಯದ್ದೇವ ಜೀವೋ ಜನಿಷ್ಠಾಃ" (ಋಗ್ವೇದ 1-68 - 2)

(ಒಣಗಿದ ಗಟ್ಟಿಯಾದ ವಸ್ತುಗಳಿಂದ ಅಗ್ನಿಯು ಹುಟ್ಟುತ್ತದೆ)

ಈ ಮೇಲಿನ ಮಂತ್ರಗಳಿಂದ ಅಗ್ನಿಯು ಎಲ್ಲದರೊಳಗಿದ್ದು ಒಂದಕ್ಕೊಂದು ಘರ್ಷಿಸಿದಾಗ ಹೊರಗೆ ಹುಟ್ಟಿ ಬರುತ್ತದೆ ಎಂದು ತಿಳಿದು ಬರುತ್ತದೆ.

ತ್ರೀಣಿ ಜಾನಾ ಪರಿಭೂಷಂತ್ಯಸ್ಯ ಸಮುದ್ರ ಏಕಂ
ದಿವ್ಯೇಕ ಮಪ್ಸು (ಋಗ್ವೇದ 1-95-3)

ಅಗ್ನಿಯು ಮೂರು ಜಾಗಗಳಲ್ಲಿದೆ. ಸಮುದ್ರದೊಳಗೆ ಬಡಬಾಗ್ನಿಯಾಗಿ, ಆಕಾಶದಲ್ಲಿ ಆದಿತ್ಯರೂಪದಿಂದ, ಅಂತರಿಕ್ಷದಲ್ಲಿ ಮಿಂಚಿನರೂಪದಲ್ಲಿ ಅಗ್ನಿಯು ಕಂಗೊಳಿಸುತ್ತಿದೆ. ಹಾಗಾಗಿ ಅಗ್ನಿಗೆ ಮೂರು ಸ್ಥಾನಗಳು ಇವೆ.

ಪೂರ್ವಾಮನು ಪ್ರದಿಶಂ ಪಾರ್ಥಿವಾನಾಮೃತೂನ್ ಪ್ರಶಾಸದ್ ವಿದಧಾವನುಷ್ಠು (ಋಗ್ವೇದ 1-95 -3)

ಈ ಅಗ್ನಿಯು ಆದಿತ್ಯರೂಪದಲ್ಲಿ ಆಕಾಶದಲ್ಲಿ ಕಂಗೊಳಿಸುತ್ತಾ ಋತುಗಳನ್ನು ಪ್ರತ್ಯೇಕವಾಗಿ ತೋರಿಸುತ್ತಾ ಪೂರ್ವ ದಿಕ್ಕಿನಲ್ಲಿ ಪ್ರತಿದಿನ ಹುಟ್ಟಿ ಮನುಷ್ಯಾದಿ ಜೀವಜಂತುಗಳು ತಮ್ಮ ತಮ್ಮ ಕಾರ್ಯಗಳಲ್ಲಿ ತೊಡಗುವಂತೆ ಮಾಡುತ್ತದೆ. ಅಖಂಡವಾದ ದಿಕ್ಕು-ಕಾಲಗಳನ್ನು ಪೂರ್ವ-ಪಶ್ಚಿಮ, ದಕ್ಷಿಣ-ಉತ್ತರ, ಮುಂದೆ-ಹಿಂದೆ ಅಕ್ಕ-ಪಕ್ಕ, ಇತ್ಯಾದಿ ದಿಕ್ಕು-ಕಾಲಗಳ ಪರಿಗಣನೆ ಮಾಡುತ್ತಾ ಸೂರ್ಯನು ಪ್ರತಿದಿನವೂ ಆಕಾಶ ದಲ್ಲಿ ಸಂಚರಿಸುತ್ತಾ ಹಗಲು ರಾತ್ರಿಗಳನ್ನು ಮಾಡುತ್ತಾ ಕಾಲ ಗಣನೆಗೆ ಕಾರಣನಾಗಿದ್ದಾನೆ.

### ವಾಯುವು ಎಲ್ಲಾ ಪ್ರಾಣಿಗಳ ಪ್ರಾಣಧಾರಕ

ಪಂಚಭೂತಗಳಲ್ಲಿ ಒಂದಾದ ವಾಯುವು ಎಲ್ಲ ಜೀವಿಗಳ ಹೃದಯದಲ್ಲಿ ಪ್ರಾಣರೂಪದಲ್ಲಿ ಸಂಚರಿಸುತ್ತಾ ಕಾಪಾಡುತ್ತಿದೆ. ಗಾಳಿಯು ಬೀಸುವುದರಿಂದ ಮರಗಿಡಗಳ ಬೀಜಗಳು ಒಂದೆಡೆಯಿಂದ ಮತ್ತೊಂದೆಡೆಗೆ ಹೋಗಿ ಸಸ್ಯಗಳು ಹುಟ್ಟು ತ್ತವೆ. ವಾಯುವು ಮೋಡಗಳನ್ನು ಅತ್ತಿಂದಿತ್ತ ಚಲಿಸುವಂತೆ ಮಾಡುವುದರಿಂದ ಮೋಡಗಳು ಒಂದಕ್ಕೊಂದು ಡಿಕ್ಕಿ ಹೊಡೆದು ಬೆಂಕಿ ಹುಟ್ಟಿ ಭೂಮಿಯ ಮೇಲೆ ಮಳೆ ಸುರಿಯುತ್ತದೆ. ಗಾಳಿಯ ಹೊಡೆತದಿಂದ ಮೋಡಗಳಲ್ಲಿ ಸಿಡಿಲು,ಗುಡುಗು, ಮಿಂಚುಗಳು ಹುಟ್ಟುತ್ತವೆ. ಆಗ ಗಟ್ಟಿಯಾದ ಮೋಡಗಳು ಕರಗಿ ನೀರಾಗಿ ಮಳೆ ಸುರಿಯುತ್ತದೆ. ಜೀವಜಂತುಗಳ ಹುಟ್ಟಿಗೆ ಬದುಕಿಗೆ ಗಾಳಿಯು ಮುಖ್ಯ ಕಾರಣವಾಗಿದೆ. ವೇದ ಮಂತ್ರವು ಇದನ್ನು ಹೀಗೆ ಹೇಳುತ್ತಿದೆ.

ವಾತಸ್ಯ ನು ಮಹಿಮಾನಂ ರಥಸ್ಯ
ರುಜನ್ನೇತಿ ಸ್ತನಯನ್ನಸ್ಯ ಘೋಷಃ
ದಿವಿಸ್ಪೃಗ್ಯಾತ್ಯರುಣಾನಿ ಕೃಣ್ವನ್
ಉತೋಯಾತಿ ಪೃಥಿವ್ಯಾ ರೇಣುಮಸ್ಯನ್ (ಋಗ್ವೇದ 10-168 - 1)

ವಾಯುವಿನ ಮಹಿಮೆಯನ್ನು ಏನೆಂದು ಹೇಳುವುದು. ವಿಶೇಷವಾಗಿ ಭೂಮಿಯ ಮೇಲೆ ಗಟ್ಟಿಯಾಗಿ ನೆಲೆಯೂರಿರುವ ಪರ್ವತಗಳನ್ನು ಬೆಟ್ಟಗುಡ್ಡಗಳನ್ನು ಗಾಳಿಯು ಕಂಪಿಸುವಂತೆ ಮಾಡುತ್ತದೆ. ಯುದ್ಧದಲ್ಲಿ ಹೇಗೋ ಹಾಗೆ ಬಡಬಾಗ್ನಿಗಳು ಗಾಳಿಯ ಬಳಿಗೆ ಬರುವುದು. ಇವುಗಳಿಂದ ಕೂಡಿದ ರಥದಲ್ಲಿ ಹೊಳೆಯುವ ವಾಯುವು ಹೊರಡುತ್ತಾನೆ. ಇವನು ಪ್ರಪಂಚದಲ್ಲಿರುವ ಎಲ್ಲರಿಗೂ ರಾಜನಾಗಿದ್ದಾನೆ. ಅಂದರೆ ಮೋಡಗಳೇ ವಾಯುದೇವನ ರಥಗಳು, ಇವು ಗಾಳಿಯ ಪ್ರೇರಣೆಯಿಂದ ಗುಡುಗುತ್ತಾ ಬೆಟ್ಟಗುಡ್ಡ ಬಂಡೆಗಳನ್ನು ಉರುಳಿಸುತ್ತಾ, ಗುಹೆಗಳಲ್ಲಿ ಶಬ್ದ ಮಾಡುತ್ತಾ ಆಕಾಶದಲ್ಲಿ ಸಂಚರಿಸುತ್ತವೆ. ಗಾಳಿಯ ಹೊಡೆತಕ್ಕೆ ಸಿಕ್ಕಿದ್ದ ಎಲ್ಲ ವಸ್ತುಗಳು ಚೂರು ಚೂರಾಗುತ್ತವೆ. ಈ ಗಾಳಿಯು ಆಕಾಶ ಭೂಮಿಗಳನ್ನು ವ್ಯಾಪಿಸಿ ದಿಗಂತವನ್ನು ಕೆಂಪಾಗಿ ಮಾಡುತ್ತಾ ಬೀಸುತ್ತದೆ. ಭೂಮಿಯಲ್ಲಿ ಧೂಳುಗಳನ್ನು ಮೇಲೇಳಿಸುತ್ತದೆ. ಮೋಡಗಳಲ್ಲಿ ಸಿಡಿಲು - ಗುಡುಗು - ಮಿಂಚುಗಳು ಹುಟ್ಟುತ್ತವೆ. ಎಲ್ಲ ಪದಾರ್ಥಗಳೂ ತೂರಿ ಹೋಗುತ್ತದೆ.

(ಮುಂದುವರಿಯುವುದು)

ಧಾರಾವಾಹಿ - 1

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥಶಾಸ್ತ್ರಿ

ಅನುವಾದ : ಸೂರ್ಯವಂಶಿ



ಶ್ರೀಮದ್ಭಗವದ್ಗೀತೆಯ ಉಪದೇಶವನ್ನು, ಆ ಗೀತಾಮೃತ ಸಾರವನ್ನು ಆಸ್ವಾದಿಸುವ ಮೊದಲು ಈ ಗೀತಾಮೃತ ನಮಗಾಗಿಯೇ ಇರುವುದು ಎಂಬ ವಿಷಯವನ್ನು ನಾವು ಖಂಡಿತವಾಗಿಯೂ ಅರಿಯಬೇಕಾದ ಸತ್ಯ. ಇದಕ್ಕೆ ಛಾಂದೋಗ್ಯೋಪನಿಷತ್ತಿನಲ್ಲಿ ಒಂದು ಪುಟ್ಟ ಕಥೆ ಇದೆ ಅದನ್ನು ಎಲ್ಲರೂ ತಿಳಿದುಕೊಳ್ಳಬೇಕು.

ಒಮ್ಮೆ ಬ್ರಹ್ಮದೇವ ಒಂದು ದೊಡ್ಡ ಸಭೆಯನ್ನು ಆಯೋಜಿಸಿದ. ಆ ಸಭೆಯಲ್ಲಿ ಸದಸ್ಯರಾಗಿರುವುದಕ್ಕೆ ಮೂರು ಬಗೆಯ ಶ್ರೋತೃಗಳನ್ನು ಆಹ್ವಾನಿಸಿದ ದೇವಲೋಕದಿಂದ ದೇವತೆಗಳು, ಪಾತಾಳ ಲೋಕದಿಂದ ರಾಕ್ಷಸರೂ ಮನುಷ್ಯ ಲೋಕದಿಂದ ಕೆಲವು ಮನುಷ್ಯರನ್ನೂ ಆಹ್ವಾನಿಸಿದರು. ಇವರೆಲ್ಲಾ ಆ ದೊಡ್ಡ ಸಭೆಯಲ್ಲಿ ಹಾಜರಾದರು. ಪ್ರಜಾಪತಿಯ ಬರುವಿಕೆಗಾಗಿ ಇವರೆಲ್ಲಾ ಎದುರು ನೋಡುತ್ತಿದ್ದರು. ಪ್ರಜಾಪತಿ ಬಂದು ಆಸನದಲ್ಲಿ ಕುಳಿತ ನಂತರ ಕಾರ್ಯಕ್ರಮವನ್ನು ಪ್ರಾರಂಭಿಸಿದ.ನಂತರ ಅಲ್ಲಿ ಸಭೆ ಸೇರಿದ್ದ ಶ್ರೋತೃಗಳು."ಸ್ವಾಮಿ ನೀವು ನಮ್ಮನ್ನೆಲ್ಲಾ ಇಲ್ಲಿಗೆ ಬರಹೇಳಿರುವ ಕಾರಣವೇನು?" ನಮಗೇನಾದರೂ ಉಪದೇಶವನ್ನು ನೀಡಿ ಎಂದು ಪ್ರಾರ್ಥಿಸಿದರು. ಪ್ರಜಾಪತಿ ಅದಕ್ಕೆ ಉತ್ತರವಾಗಿ ಬಹಳ ಮುಖ್ಯವಾದ ವಿಷಯವನ್ನು ಹೇಳಬಹುದೆಂದು ಎಲ್ಲರೂ ನಿರೀಕ್ಷಿಸ ತೊಡಗಿದರು.ಪ್ರಜಾಪತಿ ಅವರಿಗೆ 'ದ' ದ ದ' ಎಂದು ಮೂರು ಅಕ್ಷರಗಳನ್ನು ಉಚ್ಚರಿಸಿದರು. ಎಲ್ಲರೂ ಆತ ಯಾವುದೋ ಮಂಗಳಾಚರಣವನ್ನು ನೆನಪಿಸಿಕೊಳ್ಳುತ್ತಿರಬಹುದೆಂದು ಕೊಂಡರು. ಗುರುಬ್ರಹ್ಮ ಎನ್ನುವ ಬದಲು ಈ ರೀತಿ ಹೇಳಿದರೆಂದುಕೊಂಡರು. ಆ ಮೂರು ಅಕ್ಷರಗಳನ್ನು ಹೇಳಿದ ಮೇಲೆ ಪ್ರಜಾಪತಿ ಮೇಲೆದ್ದು ಹೊರಟುಹೋದರು. ಉಪದೇಶನೀಡಿದ್ದಾಯಿತೆಂದು ತಿಳಿಸಿದರು. ಪ್ರಜಾಪತಿಯ ಈ ಉಪದೇಶ ಯಾರಿಗೂ ಅರ್ಥವಾಗದೆ, ಎಲ್ಲರೂ ತಮ್ಮ ತಮ್ಮ ಸ್ವಸ್ಥಳಕ್ಕೆ ಹೊರಟುಹೋದರು. ನಂತರ ಬ್ರಹ್ಮ ನಮಗೆ ಏನು ಉಪದೇಶ ನೀಡಿರಬಹುದೆಂದು ಯೋಚಿಸಲಾರಂಭಿಸಿದರು. ಅವರವರಿಗೆ ತೋಚಿದ್ದನ್ನು ಅವರು ಅಂದುಕೊಂಡರು. ಅದರಲ್ಲಿ ದೇವತೆಗಳು, ಬಹಳ ಪುಣ್ಯ ಮಾಡಿದರೆ ಪಡೆಯಬಹುದಾದ ಜನ್ಮ ನಮ್ಮದು ಆ ಪುಣ್ಯದಿಂದ ನಮಗೆ ಸ್ವಲ್ಪ ಅಹಂಕಾರವೂ ಬಂದಿರುತ್ತದೆ ಆದ್ದರಿಂದ ಅಹಂಕಾರವು ಒಳ್ಳೆಯದಲ್ಲ ಎಂದು ಉಪದೇಶ ಮಾಡಿರಬಹುದೆಂದುಕೊಂಡರು. ಆ ಉಪದೇಶಕ್ಕೆ "ದಾಮ್ಯತ" ಎಂದು ಹೆಸರಿಸಿಕೊಂಡರು. ದಾಮ್ಯತ ಅಂದರೆ ಸ್ವಲ್ಪ ಇಂದ್ರಿಯ ನಿಗ್ರಹವನ್ನು ಹೊಂದಿದ್ದು ಅಹಂಕಾರವನ್ನು ಬಿಡಿ ಎಂದು ಅರ್ಥ.ಆದ್ದರಿಂದ ನಮಗೆ ಈ ರೀತಿ ಉಪದೇಶ ಮಾಡಿರಬಹುದೆಂದು ದೇವತೆಗಳು ತೀರ್ಮಾನಿಸಿದರು. ಹಾಗಾದರೆ ಉಳಿದ ಇನ್ನೆರಡು 'ದ'ಗಳ ಅರ್ಥವೇನು? ಪುನಃ ಚರ್ಚೆಗೆ ಬಂತು. ಅವರೆಲ್ಲಾ ಒಂದು "ದ" ನಮಗೆ ಎರಡನೆಯದ ಮನುಷ್ಯರಿಗೆ ಮೂರನೆಯ 'ದ' ರಾಕ್ಷಸರಿಗೆ ಎಂದು ತೀರ್ಮಾನಿಸಿದರು. ಆ ರೀತಿ ದೇವತೆಗಳ ಚರ್ಚಾಗೋಷ್ಠಿ ಮುಗಿಯಿತು.ಇನ್ನೂ ರಾಕ್ಷಸರೂ ಚರ್ಚಾಗೋಷ್ಠಿಗೆ ಪ್ರಾರಂಭಿಸಿದರು.ಅವರು ಬ್ರಹ್ಮ ತಮಗೆ ಏನು ಉಪದೇಶ ಮಾಡಿರಬಹುದೆಂದು ಯೋಚಿಸಿದರು. ಕೊನೆಗೆ ನಮ್ಮಲ್ಲಿ ದಯೆ ಕಡಿಮೆ ಸ್ವಲ್ಪ ಕ್ರೂರವಾಗಿ ಇರುತ್ತೇವೆ. ಸ್ವಲ್ಪ ಕೋಪ ಬಂದರೂ ಎದುರು ಕಂಡವರ ಮೇಲೆ ಮುಗಿ ಬೀಳುತ್ತೇವೆ.ಆದ್ದರಿಂದ ನಮಗೆ ದಯಾ ಭಾವವನ್ನು ಹೊಂದಿರಬೇಕೆಂದು ಉಪದೇಶದ ಅರ್ಥವೆಂದು ಎಂದು ತೀರ್ಮಾನಿಸಿದರು. ಹಾಗಾದರೆ ಇನ್ನೂ 'ದ' ಮಾತುಗಳ ಬಗೆಗೆ ತಿಳಿಸಿ ಮನುಷ್ಯರಿಗೆ ಇನ್ನು ಎರಡು 'ದ' ಇವೆಯಲ್ಲಾ ಅವಕ್ಕೆ ದೇವತೆಗಳು, ಮನುಷ್ಯರು ತೀರ್ಮಾನಿಸುತ್ತಾರೆಂದುಕೊಂಡರು. ಮನುಷ್ಯನಲ್ಲಿ ಸ್ವಲ್ಪ ಜಿಪುಣತನ ಇರುತ್ತದೆ. ಈ ಜಿಪುಣತನದಿಂದ ಹೆಚ್ಚಾಗುವ ವಿಷಯ ಲಲಾಸೆಯನ್ನು ಬಿಡಬೇಕೆಂದು ಭಾವಿಸಿದರು. ಜಿಪುಣತನ ಹೆಚ್ಚು ಎಂದು ಹೇಳುವುದಕ್ಕೆ ನಿದರ್ಶನವೇನೆಂದರೆ ವೇದದಲ್ಲಿ ಒಂದು ಕಡೆ ತಪಸ್ಸು ಅಂದರೆ ಏನೆಂದು ಒಂದು ದೊಡ್ಡ ಪಟ್ಟಿಯನ್ನೇ ನೀಡಲಾಗಿದೆ. ಅದರಲ್ಲಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ.ತಪಸ್ಸು ಅಂದರೆ ದಾನ ಮಾಡುವುದು ಎಂದರ್ಥ ದಾನಂ ತಪಃ ಇಂತಹವು ಅನೇಕ ಸಂದರ್ಭಗಳು ಇರುತ್ತದೆ. ಅದಕ್ಕೆ ದಾನವನ್ನು ತಪಸ್ಸು ಎಂದು ಹೇಳಿದ್ದಾರೆ.

(- ಸಶೇಷ)



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ಆಳ್ವಾರುಗಳು ಹನ್ನೆರಡು ಮಂದಿ, ಆಳ್ವಾರ್ ಎಂದರೆ ಮುಳುಗಿದವರು ಎಂದರ್ಥ. ಅತಿಶಯವಾದ ಭಗವದ್ಭಕ್ತಿಯಲ್ಲಿ ಮುಳುಗಿದ್ದರಿಂದಲೇ ಈ ಹೆಸರು ಬಂದಿತೆಂದು ಹೇಳುತ್ತಾರೆ.

ಇವರೆಲ್ಲಾ ವಿಷ್ಣುವಿನ ದಿವ್ಯಲೀಲಾ ಗುಣಗಳನ್ನೇ ಹಾಡಿ, ಅವನನ್ನೇ ಪರದೈವವೆಂದು ನಂಬಿ, ಅವನಲ್ಲಿ ಭಕ್ತಿ ಮಾಡಿದರು; ಅವನನ್ನು ಅನುಭವಿಸಿದರು. ಇವರು ತಮಿಳುನಾಡಿನ ಸಂತ ಶ್ರೇಷ್ಠರು. ಇವರಲ್ಲಿ ಕುಲಶೇಖರಾಳ್ವಾರ್ ಎನ್ನುವವರು ಮಾತ್ರ ಈಗಿನ ಕೇರಳ ಪ್ರಾಂತ್ಯದವರು. ಈ ಆಳ್ವಾರ್‌ಗಳಿಂದ ಆರಂಭಗೊಂಡ ಭಕ್ತಿ ಪಂಥವನ್ನು ಮುಂದೆ ಆಚಾರ್ಯರಾಮಾನುಜರು ಶ್ರೀ ವೈಷ್ಣವ ಪಂಥವೆಂದು ಕರೆದು, ಈ ಮಾರ್ಗಕ್ಕೆ ಒಂದು ರೂಪುರೇಷೆಯನ್ನು ನೀಡಿ ವಿಶಿಷ್ಟಾದ್ವೈತ ಸಿದ್ಧಾಂತವೆಂಬುದಾಗಿ ಸಾರಿದರು. ಅವರು ಸ್ಥಾಪಿಸಿದ ದರ್ಶನವನ್ನು "ಎಂಬೆರುಮಾನಾರ್ ದರ್ಶನಂ" (ಎಂಬೆರುಮಾನಾರ್ ಎಂದರೆ ರಾಮಾನುಜಾಚಾರ್ಯರ ಮತ್ತೊಂದು ನಾಮಧೇಯ ಎಂದು ಸಾಕ್ಷಾತ್ ಶ್ರೀರಂಗನಾಥನೇ ನಾಮಕರಣ ಮಾಡಿದನೆಂದು ಪ್ರತೀತಿ!

ಆಳ್ವಾರುಗಳ ವಿಷ್ಣುಸ್ತುತಿಗಳ ಭಾಷೆ ತಮಿಳು.ಇವು ಭಕ್ತಿಮಯವಾಗಿಯೂ, ಕಾವ್ಯಮಯವಾಗಿಯೂ ಗೇಯ ಪ್ರಕಾರವುಳ್ಳದ್ದಾಗಿಯೂ ಇರುವುದರಿಂದ ಇವುಗಳನ್ನು "ಪಾಶುರ"ಗಳೆಂದು ಕರೆದರು. ರಾಗ, ಹಾಡುಗಳ ರಚನೆಗಳನ್ನುಳ್ಳ ಇವು ಶ್ರೇಷ್ಠವಾದ ಪದ್ಯಗಳೆಂಬುದಾಗಿ ಅಥವಾ ಪಾ (ಹಾಡಿನ ಧಾತುರೂಪ) ಮಾಲೆಗಳೆಂದು ಪುರಸ್ಕರಿಸಿದರು. ಈ ಪಾಶುರ (ಶ್ಲೋಕ)ಗಳಿಂದ ಒಡಗೂಡಿದ ಶ್ಲೋಕ ಸಮುಚ್ಛಯ ಅಥವಾ ಸ್ತೋತ್ರ ಕಾವ್ಯಕ್ಕೆ ಪ್ರಬಂಧವೆಂದು ಹೆಸರಿಟ್ಟರು. ಇವು ದೈವ ವಿಷಯಗಳನ್ನು ಒಳಗೊಂಡಿದ್ದರಿಂದ ಶ್ರೇಷ್ಠ ಪ್ರಬಂಧಗಳೆಂಬ ಕಾರಣದಿಂದ "ದಿವ್ಯ ಪ್ರಬಂಧ"ಗಳೆಂದೇ ಪ್ರಸಿದ್ಧಗೊಂಡವು. ಹನ್ನೆರಡು ಆಳ್ವಾರ್‌ಗಳಿಂದ ರಚಿಸಲ್ಪಟ್ಟ ಒಟ್ಟು ಪಾಶುರಗಳ ಸಂಖ್ಯೆ ನಾಲ್ಕು ಸಾವಿರವಾದ್ದರಿಂದ ಈ ದಿವ್ಯ ಪ್ರಬಂಧಗಳನ್ನು "ನಾಲ್ಕು ಸಾವಿರ ದಿವ್ಯ ಪ್ರಬಂಧಗಳು" ಅಥವಾ ತಮಿಳಿನಲ್ಲೇ ಹೇಳಬೇಕೆಂದರೆ "ನಾಲಾಯಿರ ದಿವ್ಯ ಪ್ರಬಂಧಂ" ಎಂದು ಕರೆಯುತ್ತಾರೆ.

ಈ ಪ್ರಬಂಧಗಳೆಲ್ಲಾ ಪರಮಾತ್ಮನಾದ ನಾರಾಯಣ ಶ್ರೇಷ್ಠತ್ವ, ಪಾರಮ್ಯ, ದಿವ್ಯಲೀಲೆ, ಗುಣ ವಿಭವೈಶ್ವರ್ಯಾದಿಗಳು, ತತ್ವಗಳು ತುಂಬಿರುವುದು. ಒಟ್ಟಿನಲ್ಲಿ ವೇದದಲ್ಲಿ ಯಾವ ಅಂಶಗಳು ಪ್ರತಿಪಾದಿತವಾಗಿರುವುವೋ, ಆ ವೇದ ಪುರುಷ ವಿಷ್ಣುವಿನ ಸಗುಣನಿರ್ಗುಣತ್ವಾದಿಗಳು ಇವುಗಳಲ್ಲಿಯೂ ನಿರೂಪಣಗೊಂಡಿರುವುದರಿಂದಲೇ ಇವನ್ನು "ತಮಿಳುವೇದ" ಗಳೆಂದು ವಿದ್ವಾಂಸರು ಕರೆದರು. ಸಂಸ್ಕೃತ ವೇದಕ್ಕೆ ಸರಿಯೋ, ಮಿಗಿಲೋ ಎಂಬುದಾಗಿ ತಮಿಳುನಾಡಿನ ಉತ್ಕಟಭಾಷಾವಾದಿಗಳು ನಿರ್ಣಯಿಸಿದ್ದಾರೆ. ತಮಿಳು ಪ್ರಾಚೀನ ಭಾಷೆಯೆಂದು ವಾದಿಸುವ ದ್ರಾವಿಡರೂ ಇದಕ್ಕೊಂದು ವಿಶಿಷ್ಟ ಸ್ಥಾನವನ್ನು ಕಲ್ಪಿಸಿದರು. ಇದನ್ನು ಅನುಸಂಧಾನ ಮಾಡುತ್ತ ಬಂದು ದ್ರಾವಿಡ ವೇದವೆಂದೂ ಕರೆದರು. ಹೀಗೆ ಆಳ್ವಾರುಗಳಿಂದ ಪ್ರಾರಂಭಗೊಂಡ ಈ ಪ್ರಬಂಧಗಳು ಬಾಯಿಂದ ಬಾಯಿಗೆ ಪಾಠವಾಗಿ ಸಾಗಿ ಬಂದ 'ಶ್ರುತಿ' ಎನ್ನುವ ಸಮಾನಾರ್ಥಗೊಂಡ ಸಂಸ್ಕೃತ ವೇದಕ್ಕೆ ಈ ರೀತಿಯಿಂದಲೂ ಸಮನೆನಿಸಿಕೊಂಡು ಮೆರೆದುವು.

ಆಚಾರ್ಯ ರಾಮಾನುಜರು ಈ ಪ್ರಬಂಧಗಳನ್ನು ಆಧಾರವನ್ನಾಗಿ ಇಟ್ಟುಕೊಂಡೇ ತಮ್ಮ ಸಿದ್ಧಾಂತ ಸ್ಥಾಪಿಸಿದರು. ಈ ಸಿದ್ಧಾಂತವನ್ನು ಭಾರತಾ

ದ್ಯಂತ ಮಾನ್ಯ ಮಾಡಲು, ಅದನ್ನು ಪ್ರತಿಪಾದಿಸಲೋಸುಗ ಸಂಸ್ಕೃತ ಭಾಷೆಯಿಂದಲೇ ಬಹುಪಾಲು ತುಂಬಿದ್ದ ಭಾರತವನ್ನು ಸಂಚಾರ ಮಾಡಿ ಆ ಜನರ ಮೇಲೆ ಪರಿಣಾಮ ಬೀರುವಂತೆ ಸಂಸ್ಕೃತ ವೇದವಾಙ್ಮಯ, ಪುರಾಣೋಪನಿಷತ್‌ಗಳಲ್ಲಿನ ಸಮಾನ ತತ್ವಗಳನ್ನು ಪ್ರಮಾಣವಾಗಿ ತೋರಿಸಿಕೊಟ್ಟರು. ತಮ್ಮ ಮಾರ್ಗದ ಅನುಸಾರವಾಗಿ ಪ್ರಸ್ಥಾನತ್ರಯಗಳಿಗೆ ಭಾಷ್ಯವನ್ನು ಬರೆದರು. ಇದರ ನಿರೂಪಣೆಗೆಂದು ಇವರು ಒಂಭತ್ತು ಸಂಸ್ಕೃತ ಗ್ರಂಥಗಳನ್ನು ರಚಿಸಿ ತಮ್ಮ ಸಿದ್ಧಾಂತವು ಕೇವಲ ಪ್ರಬಂಧಗಳ ಮೇಲೆಯೇ ಆಧಾರಿತವಾಗಿಲ್ಲ ಅದಕ್ಕೆ ವೇದದ ಪ್ರಾಚೀನತೆಯೂ ದ್ರವ್ಯವನ್ನೊದಗಿಸಿದೆ ಎನ್ನುವುದನ್ನು ಪ್ರಮಾಣಗೊಳಿಸಿದರು. ಅವರು ತಮಿಳುನಾಡಿಗೇ ಸೀಮಿತಗೊಂಡಿದ್ದ ತಮಿಳು ಪ್ರಬಂಧಗಳನ್ನು ಉದಾಹರಿಸಿ ತಮ್ಮ ಮತತತ್ವ ವಿವರಣೆ ನೀಡಿದ್ದರೆ ಅವು ಭಾರತದ ಮುಕ್ಕಾಲು ಪಾಲು ಜನರಿಗೆ ತಿಳಿಯದೇ ಹೋಗಿ, ಅವರ ಮತ ಪ್ರಸಾರಣದ ಉದ್ದೇಶ್ಯಕ್ಕೆ ಭಂಗ ಮಾತ್ರ ಆಗದೆ, ಈಗ ವಿಶ್ವಮಾನ್ಯಗೊಂಡಿರುವ ವಿಶಿಷ್ಟಾದ ಸಿದ್ದಾಂತ ಕೇವಲ ಒಂದು ಪ್ರಾಂತ್ಯಕ್ಕೆ ಸೀಮಿತಗೊಳ್ಳುತ್ತಿತ್ತು. ಆದರೆ ತತ್ವ ವಿಚಾರಗಳು ಭಾರತದ ಆಗಿನ ಪ್ರಸಿದ್ಧ ಮತಗಳನ್ನು ಸ್ಪರ್ಧಿಸಿ ಸೋಲಿಸಲು ಅಸಮರ್ಥವಾಗಿ ಬಿಡುವ ಸಂಭವವಿದ್ದಿತು.

ಇದನ್ನು ಯೋಚಿಸಿಯೇ ಆಚಾರ್ಯ ರಾಮಾನುಜರು ಈ ದಿಟ್ಟ ಹಂಚಿಕೆಯನ್ನು ಹಾಕಿಕೊಂಡು ತಮ್ಮ ಪ್ರಯತ್ನವನ್ನು ಪ್ರಾಮಾಣಿಕತೆಯಿಂದ ನಿರ್ವಹಿಸಿ ಫಲಿತಾಂಶವನ್ನು ಪ್ರಶಂಸಿಸುವ ರೀತಿಯಲ್ಲಿ ಪಡೆದರು. ಇದರಿಂದಲೇ ಇವರ ಸಿದ್ಧಾಂತವನ್ನು "ಉಭಯ ವೇದಾಂತ" ವೆಂದು ಕರೆಯಲಾಯಿತು. ದ್ರಾವಿಡ ವೇದ ಎಂದು ಕರೆಯಲ್ಪಡುವ ಪ್ರಬಂಧ ವಾಙ್ಮಯ ಒಂದು ಕಡೆ ಈ ಸಿದ್ಧಾಂತದ ನದಿಗೆ ಚೈತನ್ಯ ಧಾರೆಯನ್ನೆರೆದರೆ, ಸಂಸ್ಕೃತ ವೇದೋಪನಿಷತ್ ಪುರಾಣಾದಿಗಳು ಇದಕ್ಕೆ ಜೀವ ಜಲವನ್ನು ಮತ್ತೊಂದು ಕಡೆಯಿಂದ ಎಂದರೆ ತಪ್ಪಾಗಲಾರದು.

ಅವರು ತಮ್ಮ ಗ್ರಂಥಗಳಲ್ಲಿ ಪ್ರಬಂಧಗಳನ್ನು ಉದಾಹರಿಸದಿರುವುದರಿಂದಲೂ ಅವರು ಸಂಸ್ಕೃತದಲ್ಲೇ ತಮ್ಮ ಗ್ರಂಥಗಳನ್ನು ರಚಿಸಿರುವುದರಿಂದಲೂ ಕೆಲವು ಕುತ್ಸಿತವಾದಿಗಳು ಬೇರೊಂದು ರೀತಿ ಅರ್ಥಮಾಡಿ ರಾಮಾನುಜರಿಗೆ ಪ್ರಬಂಧಗಳ ಮೇಲೆಯೂ, ಆಳ್ವಾರುಗಳ ಮೇಲೆಯೂ ಸಂಸ್ಕೃತ ವಾಙ್ಮಯದಷ್ಟು ಒಲವು ಇರಲಿಲ್ಲವೆಂದು ವಾದಿಸುತ್ತಾರೆ!

ವಿದ್ಯಾಲಂಕಾರ ಪ್ರೊ॥ಎಸ್.ಕೆ. ರಾಮಚಂದ್ರರಾಯರಂತಹವರು ತಮ್ಮ ತಿರುಪತಿ ತಿಮ್ಮಪ್ಪ "ಆಳ್ವಾರರ ನುಡಿಮುತ್ತುಗಳು" ಎನ್ನುವ ಪುಸ್ತಕಗಳಲ್ಲಿ ಶ್ರೀರಾಮಾನುಜರ ಮೇಲೆ ವಿಚಿತ್ರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಗೊಂದಲಕ್ಕೆಡೆ ಮಾಡಿದ್ದಾರೆ. ಅದಕ್ಕಾಗಿ ಈ ವಿವರಣೆ ಬರೆಯ ಬೇಕಾಯಿತು.

**ಅವರ ವಿವರಣೆ ಇಂತಿದೆ:**

"ಆಚಾರ್ಯ ಮೂವರಲ್ಲಿ (ನಾಥಮುನಿ, ಯಾಮುನಾಚಾರ್ಯ,ರಾಮಾನುಜಾಚಾರ್ಯ) ಯಾರೂ ತಮಿಳು ಪ್ರಬಂಧದ ಪರಿಚಯವನ್ನು ಅಷ್ಟು ಚೆನ್ನಾಗಿ ಪಡೆದಿದ್ದಿರಲಾರರು. ತಮ್ಮ ವೈದಿಕ ಸಂಪ್ರದಾಯದ ನಿಲುವನ್ನು ಪ್ರಬಂಧಗಳಿಂದ ಪುರಸ್ಕರಿಸುವ ಕುತೂಹಲವೂ ಅವರಿಗಿದ್ದಿರಲಾರದು... ಇವರನ್ನೆಲ್ಲಾ (ಆಳ್ವಾರುಗಳನ್ನು) ಒಂದೆಡೆ ಕಲೆಹಾಕುವ ಸಾಹಸ ಯಾವಾಗ ನಡೆಯಿತೋ, ಯಾರು ಮಾಡಿದರೋ ತಿಳಿಯದು, ರಾಮಾನುಜರ ನಂತರ ನಡೆಯಿತೆಂದು ತಿಳಿಯುತ್ತದೆ. ನಾಥ ಮುನಿಗಳು, ಯಾಮುನರು, ರಾಮಾನುಜರ ನಂತರ ನಡೆಯಿತೆಂದು ತಿಳಿಯುತ್ತದೆ. ನಾಥಮುನಿಗಳು ಯಾಮುನರು, ರಾಮಾನುಜರು ಈ ಮೂವರೂ ವೈದಿಕ ಸಂಪ್ರದಾಯವನ್ನು ಎತ್ತಿ ಹಿಡಿದು ಸಂಸ್ಕೃತದಲ್ಲಿ ಗ್ರಂಥ ರಚಿಸಿದ್ದಾರೆ. ಇಲ್ಲೆಲ್ಲಿಯೂ ಯಾವ ಆಳ್ವಾರುಗಳ ಅಥವಾ ಯಾವ ಪ್ರಬಂಧದ ಪ್ರಸ್ತಾಪವೂ ಕಾಣಿಸಿಗುವುದಿಲ್ಲ. (ತಿರುಪತಿ ತಿಮ್ಮಪ್ಪ).... ನಮ್ಮಾಳ್ವಾರರೂ, ಅವರ ತಿರುವಾಯ್ಮೊಳಿಯೂ ಶ್ರೀವೈಷ್ಣವ ಸಂಪ್ರದಾಯದಲ್ಲಿ ಮೊದಲು ಸೇರಿಕೊಂಡವು. ಉಳಿದ ಆಳ್ವಾರರ ಅಥವಾ ಅವರ ಪ್ರಬಂಧಗಳ ಪರಿಚಯ ನಾಥಮುನಿಗಳಿಗಾಗಲೀ, ಯಾಮುನ ಮುನಿಗಳಿಗಾಗಲೀ, ರಾಮಾನುಜಾಚಾರ್ಯರಿಗಾಗಲೀ ಇದ್ದಿತೆನ್ನುವುದಕ್ಕೆ ಆಧಾರವಿಲ್ಲ. ಹಾಗೆ ನೋಡಿದರೆ ರಾಮಾನುಜರು ತಮ್ಮ ಯಾವ ಗ್ರಂಥದಲ್ಲಿಯೂ ನಮ್ಮಾಳ್ವಾರರನ್ನಾಗಲೀ ತಿರುವಾಯ್ಮೊಳಿಯನ್ನಾಗಲೀ ಉಲ್ಲೇಖಿಸಿಲ್ಲ. ಆ ಆಳ್ವಾರುಗಳ ಪರಿಚಯ ತಮಗಿದ್ದಿತೆನ್ನುವುದನ್ನೂ ಸೂಚಿಸಿಯೂ ಇಲ್ಲ.ಇನ್ನೂ ಉಳಿದ ಆಳ್ವಾರುಗಳ ಪಾಡೇನು? (ಆಳ್ವಾರುಗಳ ನುಡಿಮುತ್ತು).

(ಸಶೇಷ)


**ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

# ತಿರುಮಲೆ - ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ


ಶ್ರೀರಂಗಾದಿ ದಿವ್ಯ ಕ್ಷೇತ್ರಗಳಲ್ಲಿ ಆಯಾ ಯಾಗಗಳಿಗೆ ಸಂಬಂಧಪಟ್ಟ ಸಿದ್ದಿಗಳನ್ನು,ಆಯಾ ದಿವ್ಯಕ್ಷೇತ್ರದ ಮಹಿಮೆಗಳಿಂದುಂಟಾಗುವ ಸಿದ್ಧಿಗಳನ್ನೂ,ಭಗವದನುಗ್ರಹಕ್ಕೆ ಕಾರಣವಾಗುವ ಮೂಲಗಳನ್ನು ತಲುಪಿಸಲು ಏರ್ಪಡುವ ಭಗವದ್ಧರ್ಮಗಳನ್ನು ಉದ್ಧರಿಸುವುದಕ್ಕಾಗಿ ಅನುಗ್ರಹಿಸಲ್ಪಟ್ಟಿರುವುದು ನಮ್ಮ ಶ್ರೀ ಭಗವದ್ರಾಮಾನುಜಾಚಾರ್ಯರ ಕಾರುಣ್ಯ ಒಳಪಟ್ಟಿರುವುದಾಗಿ -

## ತಿರುಮಲ ತಿರುಪತಿಯ ಐತಿಹ್ಯಮಾಲೆ

ಶ್ರೀವೇಂಕಟೇಶ್ವರಸ್ವಾಮಿಯು,ಕಲಿಯುಗದಾರಂಭದಲ್ಲಿ ತನ್ನನ್ನು ಆಶ್ರಯಿಸಿದ ತೋಂಡಮಾನ ಚಕ್ರವರ್ತಿಗುಂಟಾದ ಅಪವಾದವನ್ನು ತೊಲಗಿಸವುದಕ್ಕಾಗಿ ಶಂಖಚಕ್ರಗಳನ್ನು ಪ್ರಸಾದಿಸಿದ ಕಾಲದಿಂದ ಮೊದಲುಗೊಂಡು ಶ್ರೀರಾಮಾನುಜಾಚಾರ್ಯರು ಶ್ರೀರಂಗ ದಿವ್ಯ ಕ್ಷೇತ್ರದಲ್ಲಿ "ಶ್ರೀವಿಷ್ಣುಪರತತ್ತ್ವ" ಪ್ರತಿಷ್ಠಾಪನಾಚಾರ್ಯರಾಗಿ ವಿಜಯವನ್ನು ಹೊಂದಿದವರಾದ ಕಾಲದಿಂದಲೂ ತನ್ನ ಶ್ರೀ ಹಸ್ತದಿಂದ ಶಂಖ-ಚಕ್ರಗಳನ್ನು ಪಿಡಿದು ನಿಂತಿರುವನು. ಆಗ ದೇವಾಲಯದಲ್ಲಿದ್ದ ವೈಖಾನಸರು ಶ್ರೀವೇಂಕಟೇಶ್ವರ ಸ್ವಾಮಿ ದಿವ್ಯ ಮೂರ್ತಿಗೆ ಯಥೋಚಿತ ಉಪಚಾರಗಳನ್ನು ಮಾಡಲಾಗಿ ಅಧರ್ಮ ಕೃತ್ಯವನ್ನೊಳಗೊಂಡ ಆ ದೇಶಾಧಿಪತಿ ಅದನ್ನು ನೋಡಿ ಅವರನ್ನು ತೀವ್ರದಂಡನೆಗೆ ಗುರಿ ಮಾಡಲು, ಆ ಸ್ಥಳದ ಹಿರಿಯರಾದ ಯಾವ ಶ್ರೀವೈಷ್ಣವರು ಇರದಿದ್ದುದರಿಂದ ಆ ಕಾಲದಲ್ಲಿ ಹಲವರು ಶೈವರು ಆ ದೇಶಾಧಿಪತಿ ಆಸ್ಥಾನಕ್ಕೆ ಪ್ರವೇಶಿಸಿ ತಮ್ಮಾಧೀನದ ಈ ಬೆಟ್ಟಕ್ಕೆ ಕುಮಾರ ಸ್ವಾಮಿಯು ಬಂದು ತಪಸ್ಸು ಮಾಡಿದ್ದನ್ನೆನ್ನಲಾಗಿ ಅದನ್ನು ವಾಮನ ಪುರಾಣದ ಶ್ರೀವೇಂಕಟಾಚಲ ಮಹಾತ್ಮ್ಯೆಯ ಮೂರನೇ ಅಧ್ಯಾಯದಲ್ಲಿರುವುದಾಗಿ, ಈ ಕೆರೆಗೆಟ್ಟೆಯಲ್ಲಿರುವ ದೇವನು ಕುಮಾರಸ್ವಾಮಿ ತಪವನ್ಗೈದ ಕಾರಣ ಆತನಿಗೆ ಯಾವುದೇ ಆಯುಧ ಪಾಶಾಂಕುಶಗಳಿಲ್ಲದ ಸ್ವಾಮಿಯೆಂದೂ, ಸುಬ್ರಮಣ್ಯಸ್ವಾಮಿಯೆಂದೆ, ಹೆಸರಿಟ್ಟು ಈ ತೀರ್ಥಕ್ಕೆ "ಸ್ವಾಮಿ ಪುಷ್ಕರಿಣಿ" ಎಂದು ಹೆಸರು ಬಿದ್ದಿರುವುದನ್ನು ತಮ್ಮ ಈ ಪರ್ವತ ಶೈವಕ್ಷೇತ್ರವೇಯೆಂದು ನಂಬಿದ ಮಧ್ಯಕಾಲದಲ್ಲಿ ಹಲವು ಶ್ರೀವೈಷ್ಣವರು ರಾಜ ಕೃಪೆಯನ್ನು ಸಂಪಾದಿಸಿ ವಿಷ್ಣುವಿಗ್ರಹವನ್ನು ಮಾಡಿಸಿ ತಂದು ಗುಡಿಯಲ್ಲಿಟ್ಟು ಉತ್ಸವ ಗಳನ್ನು ನಡೆಸಿದ್ದಾರೆಂದು ಹೇಳಿದರೆಂಬುದು ವಾಮನ ಪುರಾಣ ವಚನಗಳಿಗೆ ಪುರಾಣಾಂತರ ಪ್ರಮಾಣಗಳನ್ನು ತೋರಿಸಲಾಗಿ ನಂತರದಲ್ಲಿ ಅನೇಕ ಸಂದರ್ಭಗಳಲ್ಲಿ ಪರ್ಯಾಯಾಲೋಕನ ನಡೆಸಲಾಗಿ ಮೇಲ್ನೋಟದ ಅರ್ಥವನ್ನು ತಿಳಿಸಿದರು.

ಆಗ ದೇಶಾಧಿಪತಿ ಇವರ ವಾದ - ಪ್ರತಿವಾದಗಳನ್ನು ಕೇಳಿ ವಿಚಾರಣೆ ನಡೆಸಿದ್ದಾನೆ. 'ಇಂದಿನವರೆಗೂ ಈ ಪರ್ವ





ತವ್ರೂ ವಿಷ್ಣು ಕ್ಷೇತ್ರವೆಂದೂ ಈವರೆಗೆ ಈ ಬೆಟ್ಟದ ಮೇಲೆ ನಿತ್ಯನಿವಾಸಿಯಾದವನು ಸ್ವಾಮಿ ವಿಷ್ಣು ವೆಂದೂ, ಈ ತೀರ್ಥವು ವಿಷ್ಣುತೀರ್ಥವಾಗಿರಲು ಶ್ರೀವೈಷ್ಣವರೇ ಈ ದೇವರಿಗೆ ಇಂದಿನವರೆಗೆ ಪೂಜಾ ಮಹೋತ್ಸವಗಳನ್ನು ನಡೆಸುತ್ತಿದ್ದಾರಲ್ಲವೇ ಇಂಥದ ರಲ್ಲಿ ಈ ಶೈವರು ಈ ರೀತಿ ಹೇಳುತ್ತಿದ್ದಾರಲ್ಲಾ? ಎಂದು ಯೋಚಿಸಿದನು. ಆಗ ಆ ಸ್ಥಳದ ಹಿರಿಯರು ಶ್ರೀವೈಷ್ಣವ ರಾಗದೇ ಇದ್ದುದರಿಂದ, ಇದ್ದ ಕೆಲವರು ರಾಜಸ್ಥಾನಕ್ಕೆ ತೆರಳಿ, ಪುರಾಣಾರ್ಥಗಳನ್ನು ವಿವರಿಸಿ, ವಿಷ್ಣು ಕೈಂಕ ರ್ಯವನ್ನು ಸ್ಥಾಪಿಸಲು ಅಶಕ್ತರಾಗಿದ್ದಾರೆ. ಅಷ್ಟೊತ್ತಿಗೆ ಶ್ರೀರಂಗದಲ್ಲಿ ವಿಜಯ ಪತಾಕೆ ಹಾರಿಸಿದ್ದ ಶ್ರೀರಾಮಾ ನುಜಾಚಾರ್ಯರು, ಈ ಸುದ್ದಿಯನ್ನು ಕೇಳುತ್ತಲೇ ತಿರುಪತಿಗೆ ವಿಜಯಯಾತ್ರೆ ಬೆಳೆಸಿದ್ದಾರೆ. ದೇಶಾಧಿಪತಿ ಯನ್ನು ಆಶೀರ್ವಾದಿಸಿ ಅಷ್ಟಾದಶ ಪುರಾಣಗಳಲ್ಲಿರುವ ವೇಂಕಟಾಚಲ ಮಹಾತ್ಮೆಯ ಬೋಧಕ ವಚನಗಳನ್ನು ಪೂರ್ವೋತ್ತರ ಸಮಯದಲ್ಲಿ ಯಾವುದೇ ಪ್ರತಿರೋಧ ವಿಲ್ಲದೇ, ಅವಿರೋಧವಾಗಿ ಉಪನ್ಯಾಸಗೈದು, ಆಳ್ವಾ ರರ ಶ್ರೀಸೂಕ್ತ ಗಳನ್ನು, ಶಾಸ್ತ್ರ ಸಮ್ಮತವಾದ ಶಿಷ್ಟಾಚಾರ ಗಳನ್ನು ವಚನಾನುಷ್ಠಾನಕ್ಕೆ ತಿರುಮಲೆ ಉಪ ನ್ಯಾಸ ವಿತ್ತು. ಬೆಟ್ಟದ ಮೇಲಿನ ದೇವರು ಶ್ರೀಮಹಾ ವಿಷ್ಣುವೇ ಎಂದು ಅರುಹಿದ್ದಾರೆ.

ಇದೆಲ್ಲವನ್ನು ಕೇಳಿದ ರಾಜನು ಎರಡೂ ಪಕ್ಷ ದವರೂ ಮಂಡಿಸಿದ ಪುರಾಣವಾಕ್ಯಗಳನ್ನು ಆಧರಿಸಿ, ಒಂದು ಧೃಢವಾದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಮಧ್ಯಸ್ಥನಾಗೇ ಉಳಿದಾಗ, ಭಗವದ್ರಾಮಾನುಜರು ರಾಜನನ್ನುದ್ದೇಶಿಸಿ -

"ದರ್ಶಯನ್ ಭಕ್ತವಾತ್ಸಲ್ಯಂ ಯೋ ದದೌ ಹಸ್ತಗೇ ಶುಭೇ
ಶಂಖ ಚಕ್ರೇನೃಪೇಂ ದಾಯ ಚಕ್ರವರ್ತೇತಿ ಯಂ ವಿಧುಃ
ಅತ ಏವಾಲಿಶಂಖಾಖ್ಯಾಂ ಸಂದೃಶ್ಯೇತ್ ವಿನಾ ಕರೌ "


(ಯಾವ ಶ್ರೀನಿವಾಸ) ಭಕ್ತನೆಡೆಗೆ ವಾತ್ಸಲ್ಯಭರಿತ ನೋಟದಿಂದ 'ಚಕ್ರವರ್ತಿ' ಎಂಬ ಬಿರುದುಗೈದ ರಾಜಶ್ರೇಷ್ಠನು (ತೊಂಡಮಾನ ಚಕ್ರ ವರ್ತಿಗೆ) ತನ್ನ ಕರದಲ್ಲಿರುವ ಶುಭಕರವಾದ ಶಂಖ ಚಕ್ರಗಳನ್ನು ಕೊಟ್ಟಿದ್ದಾರೋ.... (ಉದ್ದೇಶ ಪೂರ್ವಕವಾಗಿಯೇ ಹಸ್ತಗಳು ಶಂಖಚಕ್ರರಹಿತ ವಾಗಿ ಕಾಣಿಸಿಕೊಂಡಿದೆ.)

ಎಂದು ಬ್ರಹ್ಮಪುರಾಣದ ಏಳನೇ ಅಧ್ಯಾಯದಲ್ಲಿರುವಂತೆ ಕಲಿ ಯುಗಾದಿಯಲ್ಲಿರುವ ಸ್ವಾಮಿ ತನ್ನ ಭಕ್ತನಾದ ತೋಂಡ ಮಾನನಿಗೆ ಶತ್ರು ಸಂಹಾರಾರ್ಥವಾಗಿ ಶಂಖಚಕ್ರಗಳನ್ನು ಕೊಟ್ಟಿರುವುದರಿಂದಲೇ ಅಂದು ನಿರ್ಣಯವೇರ್ಪಡಲಿಲ್ಲ. ಆಗ ಭಗವಾದ್ರಾಮಾನುಜಾಚಾರ್ಯರು ಪರೋಕ್ಷವಾಗೇ ಒಂದು ನಿರ್ಧಾರವನ್ನು ತೆಗೆದುಕೊಳ್ಳಲು ಒಂದು ಸಂಗತಿ ಯನ್ನು ರಾಜನಿಗೆ ತಿಳಿಸಿದ್ದಾರೆ. "ನಾನು ಶ್ರೀಮಹಾವಿಷ್ಣುವೆಂದು ಹೇಳಿದೆ. ಶೈವರು ಸುಬ್ರಮಣ್ಯಸ್ವಾಮಿಯೆಂದು ಹೇಳಿದ್ದಾರೆ. ಈ ಸಂದೇಹವು ಪರಿ ಹಾರಗೊಳ್ಳಲು ನಾನು ವಿಷ್ಣುಮೂರ್ತಿಗೆ ಅಸಾಧಾರಣವಾದ ಶಂಖ ಚಕ್ರ ಗಳನ್ನು ಮಾಡಿಸಿಕೊಂಡು ಒಂದು ಸ್ವಾಮಿ ಸನ್ನಿಧಿಯಲ್ಲಿ ಇಡುತ್ತೇನೆ ಶೈವರು ಸುಬ್ರಮಣ್ಯಸ್ವಾಮಿಗೆ ಅಸಾಧಾರಣವಾದ ಪಾಶಾಂಕುಶಗಳನ್ನು ಮಾಡಿ ಸಬೇಕು. ಸ್ವಾಮಿ ಯಾವ ಆಯುಧಗಳನ್ನು ಕೈಗೊಂಡು ಧರಿಸುತ್ತಾನೋ ಆಯಾ ಆಯುಧಧಾರಿಯಾದ ದೇವತೆಯಾಗಿ ಆ ದೇವರನ್ನು ಪರಿಗಣಿ ಸತಕ್ಕದ್ದು.

ಇದನ್ನು ಕೇಳಿ ರಾಜನು "ಹಾಗೆ ಆಗಲಿ" ಎಂದು ಎರಡೂ ಪಕ್ಷ ದವರಿಗೆ ಆಯಾ ಆಯುಧಗಳನ್ನು ಮಾಡಿಸಿಕೊಂಡು ಕೂಡಲೇ ರಾಜ ನೊಂದಿಗೆ ತಿರುಮಲೆಗೆ ಹೋಗಿ ರಾತ್ರಿವೇಳೆ ಗರ್ಭಗುಡಿಯಲ್ಲಿ ಅವುಗಳ ನ್ನಿಟ್ಟು ರಾಜಮುದ್ರೆ, (ಸೀಲನ್ನು) ಯನ್ನು ಹಾಕಿಸಿ, ನಂತರ ಪ್ರಾತಃಕಾಲದಲ್ಲಿ ಬಾಗಿಲನ್ನು ತೆರೆದು ನೋಡಿದಾಗ ಭಗವಂತನು ಶಂಖ ಚಕ್ರಗಳನ್ನು ಧರಿಸಿದ್ದಾನೆ. ಅದನ್ನು ಗಮನಿಸಿದ ರಾಜನು ಸಂತುಷ್ಟನಾಗಿ ಶ್ರೀಭಗವದ್ರಾ ಮಾನುಜರ ಪಾದಪದ್ಮಗಳಲ್ಲಿ ನೆಲೆಸಿ ಗುಣಗಾನ ಮಾಡಿದ್ದಾನೆ. ಶೈವರು ಹೇಳಿದ ಅಸತ್ಯವಾಕ್ಯವನ್ನು ಕೇಳಿ ಅವರನ್ನು ಮುಂದೆ ಅಸತ್ಯ ನುಡಿಯ ದಂತೆ ನಿಗ್ರಹಿಸಿ, ದೇಶದಿಂದ ಬಹಿಷ್ಕರಿಸಿ ಶ್ರೀರಾಮಾನುಜರ ದಿವ್ಯ ಚರಣ ಕ್ಕೆರಗಿ ಕೃತಾರ್ಥರಾಗಿದ್ದಾರೆ.

(- ಸಶೇಷ)

ನೀತಿ ಕಥೆ



# ಕೋಪವೆಂಬುದು ಅನರ್ಥ ಸಾಧನ

-ಶ್ರೀಮತಿ. ಸುಮನ ಬದ್ರಿನಾಥ್

ಮಕ್ಕಳೆ, ಮಾನವ ಸ್ವಭಾವಕ್ಕಿರುವ ಆರು ಶತ್ರುಗಳಲ್ಲಿ ಕೋಪವು ಪ್ರಮುಖವಾದುದು. ಕೋಪಗೊಂಡಾಗ ಮನುಷ್ಯ ವಿವೇಕ ಕಳೆದುಕೊಂಡು ಏನೇನೋ ತಪ್ಪು ಕೆಲಸ ಮಾಡುತ್ತಾನೆ. ತೊಂದರೆಗಳಿಗೆ ಒಳಗಾಗುತ್ತಾನೆ. ಇದಕ್ಕೆ ಬಂದು ಒಳ್ಳೆಯ ಉದಾಹರಣೆ ಪುರಾಣಗಳಲ್ಲಿ ಬರುವ ದೂರ್ವಾಸ ಮುನಿಗಳ ಕತೆ.

ದೂರ್ವಾಸ ಮುನಿಗಳು ತಪಸ್ಸಿಗೆ ಎಷ್ಟು ಹೆಸರಾಗಿದ್ದಾರೋ ಕೋಪಕ್ಕೂ ಅಷ್ಟೇ ಹೆಸರಾಗಿದ್ದಾರೆ. ಒಮ್ಮೆ ಹೀಗಾಯಿತು. ಅಂಬರೀಷನೆಂಬ ಚಕ್ರವರ್ತಿ ಮಹಾವಿಷ್ಣುಭಕ್ತ ಅವನು ಪ್ರತಿ ಏಕಾದಶಿಗೆ ಉಪವಾಸ, ಹರಿಸ್ಮರಣೆಗಳಲ್ಲಿ ಕಳೆದು ದ್ವಾದಶಿ ಬೆಳಗ್ಗೆ ಪಾರಣೆ ಎಂದರೆ ಭೋಜನ ಮಾಡುತ್ತಿದ್ದ. ಒಂದು ದ್ವಾದಶಿ ಅವನು ಭೋಜನ ಮಾಡಲು ಸಿದ್ಧನಾಗುತ್ತಿದ್ದ ವೇಳೆಗೆ ದೂರ್ವಾಸ ಮುನಿಗಳು ಅವನಲ್ಲಿಗೆ ಬಂದರು. ರಾಜನು ಅವರನ್ನು ಊಟ ಮಾಡಲು ಕೇಳಿಕೊಂಡ. ಮುನಿಗಳು ಒಪ್ಪಿಕೊಂಡು ನದಿಗೆ ಸ್ನಾನ ಮಾಡಿ ಬರಲು ಹೋಗಿ ಅಲ್ಲೇ ಧ್ಯಾನ ಮಾಡುತ್ತಾ ಕುಳಿತುಬಿಟ್ಟರು. ಇತ್ತ ಅಂಬರೀಷ ಪಾರಣೆಯ ಸಮಯ ಮೀರುತ್ತಾ ಬರಲು, ಹಿರಿಯ ಜ್ಞಾನಿಗಳ ಸಲಹೆ ಕೇಳಿ ಜಲಪ್ರಾಶನ ಮಾಡಿ ವ್ರತ ಪೂರ್ಣಗೊಳಿಸಿದ. ಧ್ಯಾನ ಮುಗಿಸಿ ಬಂದ ದೂರ್ವಾಸರಿಗೆ ಜ್ಞಾನ ದೃಷ್ಟಿಯಿಂದ ಈ ವಿಷಯ ತಿಳಿಯಿತು. ತಮಗೆ ಅವಮಾನ ಮಾಡಿರುವನೆಂದು ರಾಜನ ಮೇಲೆ ಅಸಾಧ್ಯ ಕೋಪ ಬಂದಿತು.

ತಮ್ಮ ತಪಃ ಶಕ್ತಿಯಿಂದ ಬಂದು ಭಯಂಕರ ಉರಿಮಾರಿಯನ್ನು ಸೃಷ್ಟಿಸಿ ರಾಜನನ್ನು ಶಿಕ್ಷಿಸಲು ಆಜ್ಞಾಪಿಸಿದರು. ಅದು ರಾಜನ ಮೇಲೇರಿ ಬಂತು. ಆಗ ಒಂದು ಅದ್ಭುತ ನಡೆಯಿತು. ವಿಷ್ಣುವಿನ ಸುದರ್ಶನ ಚಕ್ರಾಯುಧ ಅಲ್ಲಿ ಕಾಣಿಸಿಕೊಂಡು ಕ್ಷಣ ಮಾತ್ರದಲ್ಲಿ ಉರಿಮಾರಿಯನ್ನು ಧ್ವಂಸ ಮಾಡಿತು ಅಷ್ಟೇ ಅಲ್ಲ ದೂರ್ವಾಸ ಮುನಿಗಳನ್ನೇ ಅಟ್ಟಿಸಿಕೊಂಡು ಬಂದಿತು. ಮುನಿಗಳು ಹೆದರಿ ಇಂದ್ರಲೋಕ, ಸತ್ಯಲೋಕ, ಕೈಲಾಸ, ವೈಕುಂಠ ಲೋಕಗಳಿಗೆ ಓಡಿ ಹೋದರು. ಎಲ್ಲ ಕಡೆಗೂ ಚಕ್ರಾಯುಧ ಅವರನ್ನು ಅಟ್ಟಿಸಿಕೊಂಡು ಬಂತು. ಇಂದ್ರ, ಶಿವ, ಬ್ರಹ್ಮ, ವಿಷ್ಣು ಯಾರೂ ಅವರನ್ನು ಕಾಪಾಡಲಿಲ್ಲ. ಕಡೆಗೆ ವಿಷ್ಣುವಿನ ಸೂಚನೆಯಂತೆ ಅಂಬರೀಷ ರಾಜನಿಗೆ ಬಂದು ಶರಣಾಗತರಾದರು. ರಾಜನು ಚಕ್ರಾಯುಧವನ್ನು ಪ್ರಾರ್ಥಿಸಲು ಅದು ಶಾಂತವಾಗಿ ದೂರ್ವಾಸ ಮುನಿಗಳನ್ನು ಬಿಟ್ಟು ಹೊರಟುಹೋಯಿತು. ನಂತರ ದೂರ್ವಾಸರು ರಾಜನೊಡನೆ ಊಟ ಮಾಡಿ ಅವನನ್ನು ಹರಸಿ ಹೊರಟು ಹೋದರು.

ನೋಡಿದರಾ ಮಕ್ಕಳೆ, ಕೋಪದಿಂದಾದ ಅನರ್ಥವನ್ನು ಇದರಿಂದ ತಿಳಿಯಬೇಕಾದುದೇನೆಂದರೆ ಕಾರಣವಿಲ್ಲದೆ ಕೋಪ ಮಾಡಿಕೊಳ್ಳಬಾರದು. ಕೋಪ ಬಂದರೂ ಅದನ್ನು ನಿಗ್ರಹಿಸಿಕೊಳ್ಳಬೇಕು.ತಾಳ್ಮೆಯಿಂದಿರಬೇಕು. ತಾಳಿದವನು ಬಾಳಿಯಾನು ಅಲ್ಲವೆ.

ಚಿತ್ರ ಕಥೆ

# ಎಲ್ಲರಿಗೂ ಮೋಕ್ಷವೇ


ಕಥೆ:ತೆಲುಗು ಮೂಲ: ಡಿ. ಶ್ರೀನಿವಾಸದೀಕ್ಷಿತರು
ಅನುವಾದ: ಶ್ರೀಮತಿ
ಚಿತ್ರಗಳು : ಕೆ. ದ್ವಾರಕನಾಥ್





ಉಪದೇಶಾನಂತರ ರಾಮಾನುಜರು ಆಲೋಚನೆ ಮಾಡಿದರು. ಸ್ವಾರ್ಥಕ್ಕಿಂತ ಲೋಕಕಲ್ಯಾಣವೇ ಶ್ರೇಷ್ಠ ವಾದುದಲ್ಲವೇ? ಎಂದು ಅವರು ಭಾವಿಸಿದ್ದಾರೆ. ಶಿಷ್ಯರೆಲ್ಲರೂ ಅವರನ್ನು ಕೊಂಡಾಡಿದ್ದಾರೆ.
ಛಲ - ದಾಹವಿರುವವರಿಗೆಲ್ಲಾ ಈ ತಿರುಮಂತ್ರವನ್ನು ಉಪದೇಶಿಸುತ್ತೇನೆ.
ನಿಮ್ಮ ಈ ನಿರ್ಧಾರ ಅಪೂರ್ವ ಆಚಾರ್ಯರೇ!
ಕೂಡಲೇ ರಾಮಾನುಜರು ಆಲಯದ ಗೋಪುರವನ್ನು ಹತ್ತಿದ್ದಾರೆ. ಅದರ ಮೇಲೆ ನಿಂತು ಪ್ರಜೆಗಳೆಲ್ಲರನ್ನು ಕರೆದಿದ್ದಾರೆ. ಅಷ್ಟಾಕ್ಷರ ಮಂತ್ರವನ್ನು ಉಪದೇಶಿಸಿದ್ದಾರೆ.
ಓಂ ನಮೋ ನಾರಾಯಣಾಯ...
ಓಂ ನಮೋ ನಾರಾಯಣಾಯ...
ತದನಂತರ ಗೋಷ್ಠಿಪೂರ್ಣರು ರಾಮಾನುಜರನ್ನು ಕರೆದು ಕೋಪದಿಂದ ...
ಯತಿರಾಜ! ನನ್ನಾಜ್ಞೆಯನ್ನು ಧಿಕ್ಕರಿಸಿದ ನಿನಗೆ ನರಕ ತಪ್ಪದು
ನನಗೆ ನರಕ ಪ್ರಾಪ್ತಿಯಾದರು ಚಿಂತೆಯಿಲ್ಲ, ಎಲ್ಲರಿಗೂ ಮೋಕ್ಷ ಪ್ರಾಪ್ತಿ ಯಾಗಬೇಕು.
ಶ್ರೀರಾಮಾನುಜರ ಮಾತನ್ನು ಕೇಳಿದ ನಂತರ ಗೋಷ್ಠಿಪೂರ್ಣರ ಕೋಪ ಶಮನಗೊಂಡಿದೆ.
ಯತಿರಾಜಾ! ನಿನ್ನ ಔದಾರ್ಯ, ನಿನ್ನ ತ್ಯಾಗ, ಲೋಕಕಲ್ಯಾಣಕ್ಕಾಗಿ ನನ್ನ ಕಣ್ಣುಗಳನ್ನು ತೆರೆಸಿದೆ.
ಅದು ನಿಮ್ಮ ಸೌಜನ್ಯವೇ ಆಚಾರ್ಯ!
ಗೋಷ್ಠಿಪೂರ್ಣರು ಆನಂದದಿಂದ ರಾಮಾನುಜರನ್ನು ಅಪ್ಪಿಕೊಂಡು...
ನನ್ನ ಸ್ವಾಮಿ! ನನ್ನ ಸೌಭಾಗ್ಯ! ನನಗೆ ಬೇರೇನೂ ಬೇಡ”
ಆ ಗುರು - ಶಿಷ್ಯರಿಗೆ ಲೋಕವೇ ನಮಿಸಿದೆ.
ಲೋಕಾಃ ಸಮಸ್ಥ ಸುಖಿನೋ ಭವಂತು!
ಸ್ವಸ್ತಿ!

## ಕ್ವಿಜ್

**ರಸಪ್ರಶ್ನೆಗಳು :**

1. ಕ್ಷೀರಸಾಗರ ಮಥನ ಮಾಡಿದಾಗ ಹೊರಬಂದ ಕುದುರೆಯನ್ನು ಏನೆಂದು ಕರೆಯುತ್ತಾರೆ?

1. ಉಚ್ಚೈಶ್ರವ　　2. ಕಾಮಧೇನು
3. ಸಪ್ತಾಶ್ವ　　4. ಮೇರು

2. ಗಜೇಂದ್ರ ಮೋಕ್ಷದಲ್ಲಿ ಬರುವ ಗಜರಾಜ ಶಾಪಗ್ರಸ್ತನಾಗುವ ಮೊದಲು ಯಾವ ಹೆಸರಿನ ರಾಜನಾಗಿದ್ದ?

1. ಅಂಬರೀಷ　　2. ಇಂದ್ರದ್ಯುಮ್ನ
3. ಮಹೇಂದ್ರ　　4. ಪ್ರದ್ಯುಮ್ನ

3. ಗಜೇಂದ್ರ ಮೋಕ್ಷ ಕಥೆಯಲ್ಲಿ ಬರುವ ಮೊಸಳೆ ಯಾರ ಶಾಪದಿಂದ ಆ ಮೊಸಳೆಯ ಜನ್ಮವನ್ನು ಪಡೆದುಕೊಂಡ?

1. ಅಗಸ್ತ್ಯ　　2. ದೇವಲ
3. ದುರ್ವಾಸ　　4. ಕಶ್ಯಪ

4. ವ್ರತಗಳಲ್ಲಿ ಯಾವ ವ್ರತ ಶ್ರೇಷ್ಠವಾದುದು?

1. ಮೌನವ್ರತ　　2. ಪಯೋವ್ರತ
3. ಅಹಿಂಸಾವ್ರತ　　4. ಉಪವಾಸ ವ್ರತ

5. ಸರಸ್ವತೀ ದೇವಿಯ ವಾಹನ ಯಾವುದು?

1. ನವಿಲು　　2. ಹಂಸ
3. ಕಮಲ　　4. ಗರುಡ

6. ಶ್ರೀ ಮಹಾವಿಷ್ಣುವಿನ ಗದೆಯ ಹೆಸರೇನು?

1. ಪಾಂಚಜನ್ಯ　　2. ಸುದರ್ಶನ
3. ಕೌಮೋದಕಿ　　4. ಶಾರ್ಙ್ಗ


7. ದೇವೇಂದ್ರನ ರಾಜಧಾನಿ ಯಾವುದು?

1. ದ್ವಾರಕೆ　　2. ಹಸ್ತಿನಾಪುರ
3. ಅಮರಾವತಿ　　4. ಅಯೋಧ್ಯ

ಉತ್ತರಗಳು:
1) 1 2) 2 3) 2 4) 3 5) 2 6) 3 7) 3

## ಚಿತ್ರಲೇಖನ

**ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......**



**ಪಕ್ಕದಲ್ಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...**



Edited and Published on behalf of T.T.Devasthanams by **Prof. K.Rajagopalan**, Phd.,
Chief Editor, T.T.D. and Printed at T.T.D. Press by **Sri P. Ramaraju,** M.A., Special Officer (Press & Publications), T.T.D. Press, Tirupati - 517 507.



**ಲೋಕಕಲ್ಯಾಣಕ್ಕಾಗಿ 28-03-2021 ರಂದು ತಿ.ತಿ.ದೇ.**


**ಆಡಳಿತ ಭವನದ ಮೈದಾನ (ತಿರುಪತಿ) ದಲ್ಲಿ**

**ತಿರುಮಲೆ ತಿರುಪತಿ ದೇವಸ್ಥಾನದಲ್ಲಿ ವೈಭವವಾಗಿ**

**ನಿರ್ವಹಿಸಿದ ಫಾಲ್ಗುಣ ಲಕ್ಷ್ಮಿ ವೈಭವ - ಲಕ್ಷ್ಮಿ ಜಯಂತಿ**

**ಮಹೋತ್ಸವದ ದೃಶ್ಯಮಾಲಿಕೆ**














TIRUMALA TIRUPATI DEVASTHANAMS